# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ 2026

## ಮುಂಗಾರು ವಿಶೇಷಾಂಕ




ಬಿಡಿ ಪ್ರತಿ: ರೂ. 10/-

NANKI
CONVENTION HALL

*Premium*

# WEDDING VENUE

Elevate your events at
Nanki Convention Hall.

A stylish and comfortable
venue perfect for Weddings,
Receptions, Conferences.


MAIN HALL AC 6000 SQFT


PURE VEG. DINING 5000 SQFT


LAWN 13000 SQFT

## Accessibility

- 1 km from Bus Stand
- 5 km from Airport
- 4 km from Railway Station

Airport Road
Hubli - Karnataka

+91 94482 83709

www.nankiconventionhall.com

# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**

Marketing/Finance/HRM/ Business Analytics

## TWO YEAR FULL TIME MBA DEGREE AT BENGALURU

# ADMISSION OPEN

**2026-2028**

A distinguished standalone B-School in Bengaluru situated in the heart of the city.





## WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**

**ADMISSION PROCESS**

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.





**For Admission Contact:**
+91 99022 52842 / 99022 52981

www.mpbim.com
contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



## ಮುಂಗಾರು ವಿಶೇಷಾಂಕ

ಸಂಪುಟ 43
ಸಂಚಿಕೆ – 10
ಜುಲೈ–2026

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅವಿಸ್ಮರಣೀಯ ನಗೆಗಾರರು – 12 | ಶಿವಕುಮಾರ್ | 4 |
| ಮಳೆ ಮೆಲುಕು... | ಭುವನೇಶ್ವರಿ ಹೆಗಡೆ | 8 |
| ಮುಂಗಾರು–ಗಾಳಿಪಟಗಳ ದರ್ಬಾರು | ಬಿ ಎಸ್ ಶೈಲಜಾ | 11 |
| ಮುಂಬಯಿ ಮತ್ತು ವರ್ಷಾಋತು | ಜಯಶ್ರೀ ದೇಶಪಾಂಡೆ | 14 |
| ಬೆಂಗಳೂರು ಮತ್ತು ಮುಂಗಾರು.... | ಎಚ್. ಗೋಪಾಲಕೃಷ್ಣ | 17 |
| ಮಳೆ ಬಂತು ಮಳೆ | ಬೇಲೂರು ರಾಮಮೂರ್ತಿ | 20 |
| ಕನ್ನಡ ಸಾಹಿತ್ಯ ಲೋಕದಲ್ಲಿ ಮಳೆ | ನಾರಾಯಣ ರಾಯಚೂರು | 23 |
| ಬಂಗಾಡಿಯಲ್ಲಿ ಮುಂಗಾರು | ಶಿವಕುಮಾರ್ | 24 |
| ಮಳೆಯ ಅವಾಂತರ | ಸಿ.ಎ. ವಿಲಾಸ ನಾ ಹುದ್ದಾರ | 28 |
| ತುಂತುರು | ದಂನಆ | 31 |
| ಬೆಂಗಳೂರಿನ ರಸ್ತೆಗಳು | ಪ್ರಶಾಂತ ಶ್ರೀಕಂಠಯ್ಯ | 32 |
| ಮಾಯದಂತ ಮಳೆ ಬಂತಣ್ಣ... | ಎನ್.ವಿ.ರಘುರಾಂ | 34 |
| ಮಳೆ ತಂದ ಅವಾಂತರ | ಕುಮುದಾ ಪುರುಷೋತ್ತಮ್ | 36 |
| ಹೊಂಗೆ ಅರಳಿ ಚಾಟ್ ! | ಇ. ಅರ್. ರಾಮಚಂದ್ರನ್ | 39 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್

ಸಿ.ಎ.ವಿಲಾಸ ನ

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



# ಅಪರಂಜಿ ಕಿಡಿ

● ಪ್ರಕಾಶ್

ಹಕ್ಕಿಲ್ಲದ ಹಕ್ಕಿ ಪಿಕ್ಕಿಗಳು

– ದಿನ ಪತ್ರಿಕೆ.

ಆಹಾ, ಶೀರ್ಷಿಕೆ ಅಂದರೆ ಹೀಗಿರಬೇಕು !!

* * *

ಶಿವ ಕೃಪೆ, ಸತತ ಕಾರ್ಯ ನಿರ್ವಹಣೆಗಳಿಂದ
ಗದ್ದುಗೆಯನ್ನು ಸಿದ್ಧಿಸಿಕೊಂಡ
ಮಾನ್ಯ ಶಿವಕುಮಾರ್ ಅವರಿಗೆ ಅಪರಂಜಿಯ ಅಭಿನಂದನೆಗಳು.

* * *

" ತಾನು ಓದಿದ ಶಾಲೆಯನ್ನು ನವೀಕರಿಸಿ, ನಿಃಸ್ವಾರ್ಥತೆಯ ಪಾಠ ಕಲಿಸಿದ ಎಂಜಿನಿಯರ್"

– ಪತ್ರಿಕೆ.

ಮೇ ದೇರ್ ಟ್ರೈಬ್ ಇನ್ಕ್ರೀಸ್ ಅಂತ ಅಪರಂಜಿ ಹಾರೈಸಿದಳಂತೆ.

* * *

ಹಾಕಿ : ಜಪಾನಿನಲ್ಲಿ ಭಾರತದ ತಂಡಗಳು 13/1 ಮತ್ತು
25/0 ಗೋಲ್ ಮಾಡಿದರು !!
ಅತಿಥಿ ದೇವೋಭವ ಅಂತ ಬುದ್ಧ ಎಂದೋ ಹೇಳಿದ್ದನಲ್ಲ !

* * *

ಕನಕದಾಸ ಅಧ್ಯಯನ ಕೇಂದ್ರ ಹಮ್ಮಿಕೊಂಡಿರುವ ವಿಮರ್ಶಾ
ಲೇಖನ ಅವಧಿ ವಿಸ್ತರಣೆ

– ಸುದ್ದಿ

ಸಂತ ಕನಕದಾಸರು ನೊಂದಿರಬೇಕು !!

* * *

"ನರೇಂದ್ರ ಮೋದಿ ನನ್ನ ಆಪ್ತ ಸ್ನೇಹಿತ"

– ಅಧ್ಯಕ್ಷ ಟ್ರಂಪ್

ಕಂಕುಳಲ್ಲಿ ದೊಣ್ಣೆ ಕೈಯ್ಯಲ್ಲಿ ಶರಣಾರ್ಥಿ !!

* * *

ಕೇರಳ, ಕೇರಳಂ ಆದದ್ದು ಏಕೆ ? ಯಾವಾಗ, ಎಂಬ
ಮಾಹಿತಿ ಎಲ್ಲಿ ಸಿಗುತ್ತೆ?
ಅಂತ ಅಪರಂಜಿ ಕಳವಳಂ ಪಟ್ಟಳಂತೆ !!

* * *

" ಗಿಡ ನೆಟ್ಟರೆ ಸಾಲದು, ಪೋಷಣೆ ಬೇಕು "

– ಪುಟ್ಟರಾಜು ಹೇಳಿಕೆ

ಆ ತೋಟದ ಪುಷ್ಪಗಳೆಲ್ಲಾ ಮೆಲು ಗಾಳಿಯಲ್ಲಿ ತಲೆದೂಗಿದವಂತೆ!!

* * *

●

✍ ಶಿವಕುಮಾರ್

# "ನಮ್ಮ ನಿಮ್ಮಲ್ಲಿ"

ಮುಂಗಾರು ಮಳೆಯ ಥೀಮಿನಲ್ಲಿ ಒಂದು ವಿಶೇಷಾಂಕವನ್ನು ಹೊರತರುವ ಉದ್ದೇಶದಿಂದ ಲೇಖನಗಳನ್ನು ಕಳಿಸುವಂತೆ ನಮ್ಮ ಬರಹಗಾರರಿಗೆ ಒಂದು ಆಹ್ವಾನವನ್ನು ನೀಡಿದ್ದೆವು. ನಮ್ಮ ನಿರೀಕ್ಷೆಗೂ ಮೀರಿ ಬಹು ಸಂಖ್ಯೆಯಲ್ಲಿ ಬರಹಗಳು ತಲುಪಿವೆ. ಅಪರಂಜಿಯ ಪುಟಗಳ ಮಿತಿಯ ದೆಸೆಯಿಂದ ಹಲವು ಆಹ್ವಾನಿತ ಲೇಖನಗಳನ್ನು ಈ ಸಂಚಿಕೆಯಲ್ಲಿ ಅಳವಡಿಸಲಾಗದಿದ್ದುದಕ್ಕೆ ಕ್ಷಮೆ ಇರಲಿ. ನಂದಿನಿ ಕಾಪಡಿ, ಶ್ಯಾಮಲಾ ರವಿಶಂಕರ್, ಜಿ.ವಿ.ಅರುಣಾ, ಗೀತಾ ಕುಂದಾಪುರ, ಮತ್ತಿತರರ ಲೇಖನಗಳು ಆಗಸ್ಟ್ ಸಂಚಿಕೆಯಲ್ಲಿ ಬೆಳಕು ಕಾಣುತ್ತವೆ.

ಮೊಟ್ಟಮೊದಲಿನ ಸಂತಸದ ಸುದ್ದಿಯೆಂದರೆ ಬಹುದಿನಗಳ ನಂತರ ಹಿರಿಯ ಲೇಖಕಿ ಭುವನೇಶ್ವರಿಯವರು ಲೇಖನವೊಂದನ್ನು ಕಳಿಸಿದ್ದಾರೆ. ಹಿಂದೊಮ್ಮೆ ಇವರು "ಮಂಗಳೂರಿನಾಗೆ ಬೆವ್ರು" ಎಂಬ ಅಣಕವಾಡೊಂದನ್ನು ಬರೆದಿದ್ದರು. "ಮಡಿಕೇರೀಲಿ ಮಂಜು" ಎಂಬ ರಾಜರತ್ನಂ ರಚನೆಯ ಧಾಟಿಯಲ್ಲಿತ್ತು ಈ ಕವನ. ಇವರ "ಮಳೆ ಮೆಲುಕು"ನ್ನು ನಿಧಾನವಾಗಿ ಮೆಲುಕುತ್ತಲೇ ಸವಿಯಿರಿ. ಈ ಸಂಚಿಕೆಯ ಇನ್ನೊಬ್ಬ ಅಪರೂಪದ ಹಿರಿಯ ಲೇಖಕಿಯೆಂದರೆ ಬಿ.ಎಸ್.ಶೈಲಜಾ ಅವರು. ಗಾಳೀಪಟ ಹಾರಿಸುವ ವೈಭವವನ್ನು ಇವರಿಂದ ತಿಳಿಯಬಹುದು. ಅಂದಹಾಗೆ, ಶೈಲಜಾ ಅವರ ಧಾರಾವಾಹಿ, "ಪುಟ್ಟ ರಾಜಕುಮಾರ", ನಮ್ಮ ಮುಂದಿನ ಸಂಚಿಕೆಗಳಲ್ಲಿ ಬೆಳಕು ಕಾಣಲಿದೆ. ನಿರೀಕ್ಷಿಸಿ. ಮುಂಬಯಿಯ ಮುಸಲ ಧಾರೆ ಉಂಟುಮಾಡುವ ಹಾವಳಿ, ಅದಕ್ಕೆ ಕಿಂಚಿತ್ತೂ ಸೊಪ್ಪು ಹಾಕದ ಮುಂಬೈಕರರ ಸ್ಥಿತಪ್ರಜ್ಞತೆಯನ್ನ ಜಯಶ್ರೀ ಯವರು ತಮ್ಮದೇ ಆದ ಶೈಲಿಯಲ್ಲಿ ಮಂಡಿಸಿದ್ದಾರೆ. ಹಿರಿಯ ಲೇಖಕಿ ಕುಮುದಾ ಅವರು ಮದ್ರಾಸಿನ ಮಳೆಯ ಸೀನನ್ನು ನಮಗೆ ತಮ್ಮ ಲೇಖನದಲ್ಲಿ ತೆರೆದಿಟ್ಟಿದ್ದಾರೆ. ಬೆಂಗಳೂರಿನ ಮಳೆಯ ಬಗ್ಗೆ ಗೋಪಾಲ್ ತಮ್ಮದೇ ಆದ ಶೈಲಿಯಲ್ಲಿ ಪದರ ಪದರವಾಗಿ ಬಿಡಿಸಿಟ್ಟಿದ್ದರೆ, ವಿಲಾಸ ಹುದ್ದಾರರು ಮಳೆಯಲ್ಲಿ ಕಾರನ್ನು ಚಾಲಿಸುವ ದುಸ್ಸಾಹಸವನ್ನು ಕೈಗೊಂಡು, ಅದರಿಂದುಂಟಾದ ಪರಿಪಾಟಲನ್ನು ಹೃದಯುಂಗಮವಾಗಿ (??) ಚಿತ್ರಿಸಿದ್ದಾರೆ. ಬೇಲೂರು ರಾಮಮೂರ್ತಿಯವರು ಅವಕಾಶವಾದಿಗಳಂಬುದನ್ನು ಅವರ ಲೇಖನದಿಂದಲೇ ತಿಳಿಯಬಹುದು. ಮಳೆಯ ನೆವವನ್ನು ಬಳಸಿ ಒಂದು ಮದುವೆಯನ್ನೇ ಸಾಧಿಸಿದ ಪರಾಕ್ರಮ ಅವರದು. ಇವಕ್ಕೆಲ್ಲಾ ಚಿತ್ರಗಳ ಒತ್ತಾಸೆಯನ್ನು ನೀಡಿದ ನಮ್ಮವರೇ ಆದ ರಾಮ್‌ಕಿ ಯವರಿಗೆ ಅಪರಂಜಿ ಆಭಾರಿ. ಸಂಚಿಕೆ ನಿಮ್ಮ ಕೈಯ್ಯಲ್ಲಿದೆ. ಓದುವುದಕ್ಕೆ, ಇನ್ನೇಕೆ ತಡ? ■



ಅವಿಸ್ಮರಣೀಯ ನಗೆಗಾರರು–12

# ಟಿ.ಎಸ್. ರಾಮಚಂದ್ರರಾವ್ (ಟೀಎಸ್ಸಾರ್ರಾವ್)

ಶಿವಕುಮಾರ್



ಕನ್ನಡ ದಿನಪತ್ರಿಕೆ ಪ್ರಜಾವಾಣಿಯ ಮೊಟ್ಟಮೊದಲ ಸಂಪಾದಕರಾಗಿದ್ದ ಟಿ.ಎಸ್.ರಾಮಚಂದ್ರ ರಾಯರು ಅಕ್ಟೋಬರ್ 1948 ರಲ್ಲಿ ಪ್ರಜಾವಾಣಿ ದಿನ ಪತ್ರಿಕೆಯ ಸಾರಥ್ಯವನ್ನು ವಹಿಸಿಕೊಂಡರು. ಅದರಲ್ಲಿ ಅವರು ಬರೆಯುತ್ತಿದ್ದ "ಛೂಬಾಣ" ಕಾಲಮ್ ತನ್ನ ಹರಿತ ಹಾಸ್ಯಕ್ಕೆ ಪ್ರಸಿದ್ಧವಾಗಿತ್ತು. ತರುವಾಯ ಇವರ ಪ್ರತಿಭೆಯನ್ನು ಪುರಸ್ಕರಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಟಿಎಸ್ಸಾರ್ ಮೆಮೋರಿ–ಯಲ್ ಅವಾರ್ಡ್ ಎಂಬ ಪಾರಿತೋಷಕವನ್ನು ಅತ್ಯುತ್ತಮ ಪತ್ರಕರ್ತರಿಗೆ ನೀಡುವ ಪರಿಪಾಠವನ್ನು ಪ್ರಾರಂಭಿಸಿತು. ರಾಮಚಂದ್ರರಾಯರದ್ದು ನಗು ಮನೋಭಾವ. ಜೊತೆಯಲ್ಲಿನ ಗೆಳೆಯರಿಗೆ ಇವರಿಂದ ಸದಾಕಾಲ ನಗೆಯ ಬುಗ್ಗೆಗಳ ಸಿಂಚನವಾಗುತ್ತಿತ್ತು. ಅವರ ಇಸ್ಪೀಟ್ ಗೆಳೆಯ ಮಹದೇವ (ಅವನು ನನಗೂ ಆತ್ಮೀಯ) ಇವರನ್ನು ನೆನಪಿಸಿಕೊಳ್ಳುತ್ತಾ, "ಒಮ್ಮೆ ಇಸ್ಪೀಟ್ ಪಾರ್ಟಿಗೆ ಒಬ್ಬ ಮಿತ್ರ ಬಂದಿರಲಿಲ್ಲ. ಡಿ.ಕೆ. ಬೋಸ್ ಯಾಕೆ ಬಂದಿಲ್ಲ? ಅಂತ ಟಿಎಸ್ಸಾರ್ ನನ್ನ ಕೇಳಿದರು. ಅವನ ಹೆಸರು ಬೋಸ್ ಅಲ್ಲವಲ್ಲ ಅಂತ ನಾನು ಕಕ್ಕಾಬಿಕ್ಕಿಯಾದೆ. ಅವರು ಇನಿಷಿಯಲ್ಸ್ ಕೊನೆಗೆ ಬರ್ಲಿ ಅಂತ ನಕ್ಕು ಹೇಳಿದರು. ಆಮೇಲೆ ನನಗೆ ಜೋಕ್ ಅರ್ಥವಾಯಿತು." ಅಂತ ಹೇಳಿದ್ದ.

ಟಿ.ಎಸ್.ಆರ್ ಹುಟ್ಟುಹಾಕಿದ "ಪ್ರಜಾವಾಣಿ "ಯ" ಛೂಬಾಣ" ಅಂಕಣ ಓದುಗರಿಂದ ಬಹುಬೇಗ ಮನ್ನಣೆ ಪಡೆಯಿತು. ಈ ಅಂಕಣ ವಿಡಂಬನೆ, ವ್ಯಂಗ್ಯ, ಚುಚ್ಚು ಮಾತುಗಳಿಂದ ಸಾಮಾಜಿಕ, ರಾಜಕೀಯ ಕೆಡುಕುಗಳನ್ನು ಚುಚ್ಚುತ್ತಿತ್ತು. ಆದರೆ ಒಳ್ಳೆಯ ಕೆಲಸಗಳಿಗೆ ಅವರು ಶಹಭಾಶ್‌ಗಿರಿಯನ್ನೂ ಅಷ್ಟೇ ಧಾರಾಳವಾಗಿ ಕೊಡುತ್ತಿದ್ದರು.ಇವರಿಗೆ ಕನ್ನಡ ಪದಗಳೊಂದಿಗೆ ಆಟವಾಡುವ ಛಾತಿ ಇತ್ತು. ಅವರ ದಿನನಿತ್ಯ ಮಾತುಗಳಲ್ಲಿ ತಿಳಿ ಹಾಸ್ಯ ಹಾಸುಹೊಕ್ಕಾಗಿರುತ್ತಿತ್ತು. ಈ ಅಂಕಣ ಪ್ರಾರಂಭವಾದದ್ದು 1949ರಲ್ಲಿ. ಅದಕ್ಕೆ ಮೊದಲಿದ್ದ ಹೆಸರು, "ಅಂತರಂಗ ಬಹಿರಂಗ". ಅನಂತರ ಅದು "ರಾಮಬಾಣ" ಎಂದಾಯಿತು. ಸ್ವಲ್ಪ ದಿನಗಳಲ್ಲೇ, ರಾ.ಶಿ.ಅವರ ಸಲಹೆಯಂತೆ, ಅದು "ಛೂಬಾಣ" ಎಂಬ ಅನನ್ಯವಾದ ಹೆಸರು ಪಡೆಯಿತು. ಕನ್ನಡ ಪತ್ರಿಕೋದ್ಯಮದಲ್ಲಿ ಈ ಅಂಕಣ ಇತಿಹಾಸವನ್ನೇ ಸೃಷ್ಟಿಸಿತು ಎನ್ನಬಹುದು.

ಟೀಎಸ್ಸಾರ್‌ರಾವ್ ಎಂಬ ಕಾವ್ಯನಾಮದಿಂದ ಇವರು ಕೊರವಂಜಿಗೆ ಬರೆಯಲು ಪ್ರಾರಂಭಿಸಿದ್ದು ಆಗಸ್ಟ್ 1946ರಲ್ಲಿ. "ಕಲಿಗನ್‌ನಡದ ಕಇಗನ್‌ನಡಿ" ಎಂಬ ಶೀರ್ಷಿಕೆಯ ಈ ಲೇಖನ ನಾ. ಕಸ್ತೂರಿಯವರ ಅನರ್ಥಕೋಶದ ಜಾಡಿನಲ್ಲೇ ಸಾಗುತ್ತದೆ. ಹಲವು ಸ್ಯಾಂಪಲ್‌ಗಳು.

ಭಯಾನಖ: ವೀಣೆ ಬಾರಿಸುವವನ ಉಗುರುಗಳು. ಬೇಕರಿ: ಇದೊಂದೇ ಕಡೆ

ಬ್ರಾಹ್ಮಣರಿಗೆ ಉತ್ತೇಜನ. ತಂದೆ ತಾಯಿ: ತಗೊಂಬರ್ತೀನಮ್ಮಾ ಸಹಮರ್ಮಿಣಿ : ಸಂಸಾರದ ಗುಟ್ಟನ್ನು ಹೊರಬಿಡದೇ ಗಂಡನೊಡನೆ ತೇಪೆ ತಿದ್ದುವವಳು. ಆಕಾಶಮಾಣಿ: ಹೋಟೆಲ್ ಮಹಡಿ ಮೇಲೆ ಸಪ್ಲೈ ಮಾಡುವವ. ಇತ್ಯಾದಿ.

ಟಿಎಸ್ಸಾರ್ ಎಂದೇ ಎಲ್ಲರಿಗೂ ಪರಿಚಿತರಾಗಿದ್ದ ಇವರು ಕೊರವಂಜಿಗೆ 1951 ರ ವರೆಗೆ ಸತತವಾಗಿ ನಗೆಲೇಖನಗಳನ್ನು ನೀಡಿದರು. ಆಗಸ್ಟ್ 1947 ರ ಸ್ವಾತಂತ್ರ ಸಂಚಿಕೆಗೆ ಇವರು ಬರೆದ ಲೇಖನ "ದುಪಟಿ ದುರಂತ" ಟಿಎಸ್ಸಾರರ ನವಿರಾದ ನಗೆಶೈಲಿಗೆ ಒಂದು ಉತ್ತಮ ನಿದರ್ಶನ ಈ ಲೇಖನ. ನಲವತ್ತರ ದಶಕದಲ್ಲಿನ ಜೀವನ ಶೈಲಿಯನ್ನು ಯಥಾವತ್ತಾಗಿ ಬಿಂಬಿಸುವ ಈ ಲೇಖನದ ಹಂದರ ಬಲು ಸರಳ. ಲೇಖಕನ ಮಿತ್ರ ರಾಮು, ಯಾವುದೋ ಮದುವೆಯ ಪ್ರಯುಕ್ತ ಬೆಂಗಳೂರಿಗೆ ಬಂದಿದ್ದು ಲೇಖಕನ ಮನೆಯಲ್ಲೂ ನಾಲ್ಕು ದಿನ ಇದ್ದು ಮೈಸೂರಿಗೆ ಹಿಂತಿರುಗಿರುತ್ತಾನೆ. ಅನಂತರ ಇವರ ಪತ್ರವ್ಯವಹಾರ ಪ್ರಾರಂಭವಾಗುತ್ತದೆ. ಮೊದಲ ಪತ್ರ ರಾಮುವಿನದು. ಮುಂದಿನದೆಲ್ಲಾ ಅವರ ನಡುವಣ ಪತ್ರವ್ಯವಹಾರ.

ಅಯ್ಯಾ,

ನಾನು ಬೆಂಗಳೂರಿನಲ್ಲೇ ನನ್ನ ರಗ್ಗು ಮರೆತು ಬಂದಿದ್ದೇನೆ. ಮೈಸೂರಿನಲ್ಲಿ ನಾನು ಈದಿನ ಇಳಿದಾಗ ಏನೋ ಭಾರ ಕಡಿಮೆಯಾದಹಾಗೆ ತೋರಿತು. ಏನೂಂತ ನೋಡುವಾಗ "ರಗ್ಗಿ"ಲ್ಲ.! ಅದು ರೈಲಿನಲ್ಲಿ ಕಳೆದುಹೋಗಿರುವುದಕ್ಕೆ ಕಾರಣವಿಲ್ಲ. ನಿಮ್ಮ ಮನೆಯಲ್ಲೇ ಬಿಟ್ಟಿರಬೇಕು. ದಯವಿಟ್ಟು ತೆಗೆದಿರಿಸು. ಭಾನುವಾರ ಅದಕ್ಕಾಗಿ ಬಂದು ತೆಗೆದುಕೊಂಡು ಹೋಗುತ್ತೇನೆ. ಅದಿಲ್ಲದೆ ಇರುವುದರಿಂದ ಹೇಗ್ಹೇಗೋ ಆಗಿದೆ. ಇಂಗ್ಲೀಷಿನಲ್ಲಿ ಹೇಳುವುದಾದರೆ ಐ ಆ್ಯಮ್ ನಾಟ್ ಮೈ ಸೆಲ್ಫ್. ಬಾಕಿ ವಿಷಯ ಮೊಖ್ತಾ .

ಇತಿ, ರಾಮು

ನಾನು ಉತ್ತರ ಬರೆಯಬೇಕಾಯಿತು. – ಬರೆದೆ.

ಅಯ್ಯಾ ಮನುಷ್ಯ !

ನಿನ್ನ ರಗ್ಗು ಇಲ್ಲೇ ನಿಂತು ಹೋಗಿದೆಯೆಂದು ಬರೆದಿದ್ದೀಯೆ. ರಗ್ಗು ಎಂದರೆ ಕನ್ನಡದಲ್ಲಿ ದುಪಟಿ ತಾನೆ ? ನಿನ್ನ ಪೇಚಾಟದಲ್ಲಿ ನನಗೆ ಪೂರ್ಣ ಸಹಾನುಭೂತಿ ಇದೆಯಾದರೂ 'ಆ ನಿನ್ನ ದುಪಟಿ' ಇಲ್ಲಿಲ್ಲ. ಇದ್ದರೆ ತಕ್ಷಣ ಪತ್ತೆಯಾಗುತ್ತಿತ್ತು. ಮೊನ್ನೆ ಇಲ್ಲಿ ನಿನ್ನ ತಂಗಿಯ ಓರಗಿತ್ತಿಯ ಮದುವೆಯಲ್ಲಿ ಬೀಗರಿಗೂ ನಿಮಗೂ ಬಂದವರು ಕೂರಲು ಹಾಸಿದ್ದ ಒಂದು ಭಾರೀ ಗುಡಾರದ ವಿಷಯದಲ್ಲಿ ಕೊಂಚ ರಾದ್ಧಾಂತ ನಡೆದು, ಬೀಗರಾತನೊಬ್ಬ ಪನ್ನೀರುದಾನಿ ತೆಗೆದು ಅದರ ಮೇಲೆ ಚೆಲ್ಲಿದನಲ್ಲ ! ಅದು ತಾನೆ ನಿನ್ನ ರಗ್ಗು ? ಹಾಗಾದರೆ ಇಲ್ಲಿಲ್ಲ. ನೀನು ಹೊರಟನೇಲೆ ನಮ್ಮ ಮನೆಯಲ್ಲಿ ಹತ್ತಾರು ತಗಣೆ ಸಂಸಾರಗಳು ಅಲ್ಲಲ್ಲಿ ಕಾಣಿಸಿಕೊಂಡು ಸಾಕಷ್ಟು ಹಾವಳಿ ಎಬ್ಬಿಸಿವೆಯಾದ್ದರಿಂದ ಯಾವುದಾದರೂ ಮೂಲೆಯಲ್ಲಿ ನಿನ್ನ 'ರಗ್ಗು' ಅಡಗಿರಬಹುದೋ ಎಂಬ ಗುಮಾನಿಯಿಂದ ಮನೆಯ ಮೂಲೆಮೂಲೆಯೆಲ್ಲಾ ತಲಾಷ್ ಮಾಡಿದೆ. ಇಲ್ಲ. ಇದ್ದರೆ ಅದರದೇ ಆದ, (ಕ್ಷಮಿಸು, ನಿನ್ನದೇ ಆದ) ಒಂದು ಅಪೂರ್ವ ಗಂಧದಿಂದ ಅದನ್ನು ಪತ್ತೆ ಹಚ್ಚಬಹುದಾಗಿತ್ತು. ದಯವಿಟ್ಟು ಇನ್ನೊಂದು ಸಾರಿ ಜ್ಞಾಪಿಸಿಕೋ. ಎಲ್ಲಿ ಬಿಟ್ಟೆಯೋ .ಇನ್ನೇನೂ ವಿಶೇಷವಿಲ್ಲ.

ಇಂತು....

ಅವನು ಬಿಡಲಿಲ್ಲ.

ಅಯ್ಯಾ ಪ್ರಾಣಿ,

ಅದು ಇಲ್ಲಿಲ್ಲ. ನಾನು ತರಲೇ ಇಲ್ಲ. ನಿಮ್ಮಲ್ಲೇ ಮರೆತು ಬಂದೆ. ಹುಡುಗರ್ಯಾರಾದರೂ ಆಟವಾಡುವುದಕ್ಕೆ ಎತ್ತಿಟ್ಟಿರಬಹುದು. ನೋಡಿ ತಿಳಿಸು. ಖಂಡಿತಾ ನೀನು 'ಸಿಕ್ಕಿತು' ಅಂತ ಬರೆಯುವ ತನಕ ನನ್ನ ಮನಸ್ಸಿಗೆ ಶಾಂತಿ ಇಲ್ಲ. ನನ್ನ ಸರ್ವಸ್ವವೇ ಇಲ್ಲದಂತಾಗಿ ಮಂಕು ಕವಿದಿದೆ. ಭಾಕಿ ಏನೂ ಇಲ್ಲ.

ಇಂತಿ, ರಾಮು.

ಪಿ.ಎಸ್. ನಿಮ್ಮ ಮನೆಯಲ್ಲಿಲ್ಲದಿದ್ದರೆ ನಿಮ್ಮಜ್ಜಿ ಮನೆಯಲ್ಲಿ ಒಂದು ದಿನ ಮಲಗಿದ್ದೆನಲ್ಲ ! ಅಲ್ಲಿರಬಹುದು. ದಯವಿಟ್ಟು ಕೇಳು. ಅಂತೂ ಬೆಂಗಳೂರಿನಲ್ಲೇ ಅದೆ ಅದು.

ಅಯ್ಯೋ ಪೀಕಲಾಟವೇ ಅಂತ ಮರುಗೀಚಿದೆ.

ಅಯ್ಯಾ ಮಹಾಪ್ರಾಣಿ !

ನಿನ್ನ ಕಾಗದ ತಲ್ಪಿತು. ಅಭಿಪ್ರಾಯವಾಗಲಿಲ್ಲ. ನಿನ್ನ ಹಿಂದಿನ ಕಾಗದ ಬಂದೊಡನೆ ಮನೆಯೆಲ್ಲಾ ತಲಾಷ್ ಮಾಡಿದೆ. ನಿನ್ನ ರಗ್ಗು ಅದರಾಣೆ ಅದರಲ್ಲಿಲ್ಲ. ಮೊನ್ನೆ ನಮ್ಮ ಮನೆಯಲ್ಲಿ ಚಿಕ್ಕದೊಂದು ಕಳ್ಳತನವಾಯಿತು. ನಿನ್ನ ದುಃಖದಲ್ಲಿ ಇದೇನು ಅಂತ ಬರೆಯಲಿಲ್ಲ. ಆ ಕಳ್ಳತನದಲ್ಲಿ ನಿನ್ನ ದುಪಟಿ ಮಾಯವಾಗಿರಬಹುದೆಂದು ನೀನು ಊಹಿಸಬಹುದು. ಅದು ಅಸಾಧ್ಯ. ಯಾವ ಖದೀಮ ಕಳ್ಳನಿಗೂ ನಿನ್ನ ದುಪಟಿ ಮೇಲೆ ಕೈ ಮಾಡಲು ಎದೆ ಬಾರದು.

ನಮ್ಮ ಹುಡುಗರು ಆಟಕ್ಕೆ ತೆಗೆದುಕೊಂಡಿರಬಹುದೆಂದು ಬರೆದಿದ್ದೀಯೆ. ಶುದ್ಧ ತಪ್ಪು ಭಾವನೆ. ನಮ್ಮ ಮನೆ ಹುಡುಗರು ಕಂಬಳಿ ಮನೆ ಕಟ್ಟಿ ಆಡುವುದುಂಟು. ಆದರೆ ನಿನ್ನ ರಗ್ಗನ್ನು ಮೂಸಿನೋಡುವ ಸಾಹಸಕ್ಕೆ ಕೂಡಾ ಅವರು ಹೋಗಿಲ್ಲವೆಂಬ ಭರವಸೆ ನನಗಿದೆ. ಸಮಾಧಾನ ತಂದುಕೋ.

ಇನ್ನೊಂದು ಸಾರಿ ತುಟಿಕಚ್ಚಿ ಯೋಚಿಸು – ಸಿಗುತ್ತೆ.

ಇಂತಿ

ನಂತರ ಎರಡುವಾರ ಅವನ ಉಸಿರಿಲ್ಲ. ಆಮೇಲೆ ಒಂದು ಮಂಗಳವಾರ ಮಟಮಟ ಮಧ್ಯಾಹ್ನ ಅರಿಸಿನ ಪೂರಿತ ಲಕ್ಕೋಟೆಯೊಂದು ಬಾಗಿಲ ಸಂದಿನಲ್ಲಿ ಬಿತ್ತು.

ನನ್ನ ಅಚ್ಚುಮೆಚ್ಚಿನ ಬಚ್ಚಾ,

ಮೆಚ್ಚಿದೆ ನಿನ್ನಯ ಹೆಚ್ಚಿನ ಅನುಭವದ ಮಾತಿಗೆ. ಬಚ್ಚಲಿಗಿಳಿದಾಗ ಸ್ವಚ್ಛ ಮನಸ್ಸಿನಿಂದ ಯೋಚಿಸಿದೆ. ಮನಬಿಚ್ಚಿ ತುಟಿಕಚ್ಚಿ ತಲೆಕೆರೆದೆ. ಅರೆ ಹುಚ್ಚಾ!

ನಿನ್ನ ನೆಚ್ಚಿನ ಹಚ್ಚಡ ಇಲ್ಲೇ ಎಲ್ಲಾದರೂ ಬಚ್ಚಿಟ್ಟಿದ್ದಂತೆ ಮರೆಯಾಗಿರಬಹುದೇ ? ಹಲ್ಲಿ ಲೊಚ್ಚಲೊಚ್ಚೆಂದಿತು. ನನ್ನ ಹೊಟ್ಟೆಯಲ್ಲಿದ್ದ ಕಿಚ್ಚು ನಂದಿತು. ಬೆಚ್ಚಗೆರಡು ಚೊಂಬು ತಲೆಗೆ ಹಾಕಿ ಕಣ್ಣೊರೆಸಿಕೊಳ್ಳುವಾಗ ಹಿತ್ತಲಿನ ಹಚ್ಚಹಸುರಿನ ಮಧ್ಯೆ ಮಳೆಯೆಂದು ಬೆಚ್ಚಗೆ ಹೊಚ್ಚಿದ್ದಾಳೆ ನಮ್ಮಾಕೆ ಸೌದೆ ರಾಶಿಯ ಮೇಲೆ ನನ್ನ ವಾಟರ್ ಪ್ರೂಫ್ ಹಚ್ಚಡವ. ಏನು ಕೆಚ್ಚೆದೆ ! ಹೆಚ್ಚೇಕಿ ತುಸು ರೇಗಿ "ವಿಚ್ಚೀ" (ನಮ್ಮಕೆ – ವಿಶಾಲಾಕ್ಷಿ) ಅಂತ ಕೂಗಿದೆ.

"ನಿಮ್ಮ ದಯವೇನು ನಿಮ್ಮ ದುಪಟಿ ದಯದಿಂದ ಸೌದೆ ಅಂಥಾ ಮಳೆಯಲ್ಲೂ ಒಣಗಿ ಸದ್ಯ ಕಣ್ಣುರಿ ತಪ್ಪಿತು ನಾಲ್ಕು ದಿನ" ಅಂತ ರಗ್ಗು ತೆಗೆದು ಸೌದೆ ಒಳಕ್ಕೆ ಸಾಗಿಸಿದಳು.

ಹೆಚ್ಚೇನೂ ಇಲ್ಲ. ನಾಳೆ ವಾರ ಹಚ್ಚಡ ಒಗೆಯಬೇಕೆಂದು ಪ್ರೋಗ್ರಾಂ ಹಾಕಿದೆ. ಇದನ್ನು ಕೇಳಿ, ಆರು ಬಾರು ಸೋಪು, ಅರ್ಧ ಮಣ ಸೀಗೆ ಒಂದು ಮಕರಿ ಚೌಳು ಮಣ್ಣು, ಬೇಯಿಸುವುದಕ್ಕೆ ಐದು ಮಣ ಸರ್ವೆ ಸೌದೆ ಒಂದು ರಾಜಾರಾಣೀ ಸಾಬೂನು ನಾಲ್ಕಾಣೆ ಪಾಷಾಣ ಎಲ್ಲಾ ಪಟ್ಟಿ ಹಾಕಿ ಇಟ್ಟಿದ್ದಾಳೆ ನಮ್ಮಾಕೆ.

ಮುಂದಿನ ತಿಂಗಳು ಮ್ಯಾಚಿಗೆ ಬರುವಾಗ ತರುತ್ತೇನೆ ನೋಡು. ಗುರುತೇ ಸಿಗಲಾರದು. ಅದು ನನಗೆ ಒಂಭತ್ತು ವರ್ಷಗಳಿಂದ ಆಲ್ ಪರ್ಪಸ್ ರಗ್ ಆಗಿದೆ. ಹೋಲ್ದಾಲು, ಜಮ್ಖಾನ, ಕಂಬಳಿ, ಕೆಲವೇಳೆ, ಟವಲು, ಪಂಚೆ ಕೂಡಾ ಆಗಿದೆ ಪ್ರಯಾಣದಲ್ಲಿ.

ವೃಥಾ ತೊಂದರೆ ಕೊಟ್ಟೆ. ಕ್ಷಮಿಸು. ರಗ್ಗು ಪತ್ತೆಯಾದಾಗಿನಿಂದ ಮನಸ್ಸು ಉಲ್ಲಾಸವಾಗಿದೆ. ರಜ ತೆಗೆದುಕೊಂಡೆ ಈ ದಿನ. ನುಗ್ಗೇಕಾಯಿ ಹುಳಿ ಮಾಡಿ, ಸಂಡಿಗೆ ಕರಿ ಅಂದಿದ್ದೇನೆ. ಅಷ್ಟೇ. ಅರರೇ ! ನನ್ನೆದುರಿಗೆ ಬಾಗಿಲ ಮೂಲೆಯಲ್ಲಿರುವ ರಗ್ಗನ್ನು ಯಾರೋ ಮೆಲ್ಲಗೆ ಎಳೆಯುತ್ತಿರುವಂತೆ ತೋರುತ್ತೆ ಒಳಗಿನಿಂದ. ಏನೋ ಕೃತ್ರಿಮ !

ಇಂತು, ರಾಮು

ದಯಾನಿಧೇ ! ಸದ್ಯ ದುಪಟಿ ವ್ಯವಹಾರ ನಿಂತಿತಲ್ಲ. ! ಒಂದು ಬಟ್ಟಲು ಚಾ ಹೀರೋಣ ಅಂತ ಎದ್ದು ಹೊರಟೆ. ■



**ಒಂದು ವಿನಮ್ರ ವಿನಂತಿ**

ಅನೇಕ ಚಂದಾದಾರರು ಅಪರಂಜಿಯ ಚಂದಾ ಹಣವನ್ನು ನೇರವಾಗಿ ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿರುವುದಕ್ಕೆ ಅಪರಂಜಿ ಅವರೆಲ್ಲರಿಗೂ ಆಭಾರಿ. ಈ ನಿಟ್ಟಿನಲ್ಲಿ ನಿಮ್ಮಿಂದ ಒಂದು ಸಹಾಯ ಆಗಬೇಕಾಗಿದೆ. ತಾವು ಬ್ಯಾಂಕ್ ಖಾತೆಯ ಮೂಲಕ ಚಂದಾ ನವೀಕರಿಸುವಾಗ, ಬ್ಯಾಂಕ್ ವಹಿವಾಟಿನ ವಿವರ, ನಿಮ್ಮ ಚಂದಾ ಸಂಖ್ಯೆ, ಹೆಸರು ಮತ್ತು ಈಗಿನ ವಿಳಾಸ ಇವುಗಳನ್ನು ನಮಗೆ ಜಿಮೇಲ್ ಅಥವಾ ವಾಟ್ಸಪ್ ಮೂಲಕ ತಕ್ಷಣವೇ ಕಳಿಸಿ. ಇದರಿಂದ ರಸೀತಿ ಕಳಿಸುವ ಕಾರ್ಯ ಸುಗಮವಾಗುತ್ತದೆ. ನಿಮ್ಮ ಸಹಕಾರಕ್ಕೆ ಅಪರಂಜಿ ಆಭಾರಿ.

# ಮಳೆ ಮೆಲುಕು...

**ಭುವನೇಶ್ವರಿ ಹೆಗಡೆ**

ಬೇಸಿಗೆಯಿಡೀ ಬೆವರು ಸುರಿಯುವ ಮಂಗಳೂರಿಗೆ ಉದ್ಯೋಗ ನಿಮಿತ್ತ ನಾನು ಬಂದಿಳಿದಾಗ ಜೂನ್ ತಿಂಗಳು. ಕರಾವಳಿಯ ಮಳೆ ಬೇರೆಡೆಯ ಮಳೆಗಿಂತಲೂ ಭಿನ್ನ. ದಪ್ಪ ದಪ್ಪ ಹನಿಯ ಘೋರ ಮಳೆಗಾಲ. ತೊಯ್ದು ತೊಪ್ಪೆಯಾದ ಕ್ಲಾಸ್ ರೂಮುಗಳಲ್ಲಿ ವಿದ್ಯಾರ್ಥಿಗಳ ಗೋಳಾಟ ಮಾಸ್ತರ್ರುಗಳ ಗೊಣ ಗಾಟ ಯಾವುದಕ್ಕೂ ಕಿವಿಗೊಡದ ಆ ಸಲದ 'ಮಳೆರಾಯ' ಸುರಿದೇ ಸುರಿದಿದ್ದ. 'ಇಳೆರಾಣಿ' ಮಿಂದೇ ಮಿಂದಿದ್ದಳು.

ಇಂಥ ಒಂದು ಬಿರುಮಳೆಯ ಸಂಜೆ ನಾನು ಮನೆಯ ಬಾಲ್ಕನಿಯಲ್ಲಿ ಮಳೆ ನೋಡುತ್ತಾ ಕಾಫಿ ಹೀರುತ್ತಾ ಕುಳಿತಾಗ ಪಕ್ಕದ ಮನೆಯ ಕಾನ್ವೆಂಟ್ ಬಾಲೆ ಬಂದು "ಆಂಟಿ ನಾನೊಂದು ಹಾಡು ಬರೆದಿದ್ದೀನಿ ನೋಡಿ" ಎಂದಿತು, ನೋಡಿದೆ.

ಕೆಳಗೆ ಇಂಗ್ಲಿಷ್ ಪದ್ಯ:

Rain rain come again

Forget about little John;

Let him play some other day

We will get a holiday.

ಈ ಹಾಡನ್ನು ಜೋರಾಗಿ ನಾನೂ ಅದರೊಟ್ಟಿಗೆ ಹಾಡಿದ ಮೇಲೇ ಕಾನ್ವೆಂಟ್ ಮಗು ತನ್ನ ಮನೆಗೆ ಹೋಯಿತು.

ಆದರೆ ಮಕ್ಕಳಿಗಿರುವ ಈ ಉತ್ಸಾಹ ದೊಡ್ಡವರಿಗೆ ಇರಬೇಕೆಂದಿಲ್ಲವಲ್ಲ? ಉದಾಹರಣೆಗೆ ನಮ್ಮ ಎದುರುಮನೆಯವನಿತೆ ಮಧ್ಯಾಹ್ನ ನಾಲ್ಕು ಗಂಟೆಗೆ ಒಂದು ಭಯಂಕರ ಆಕಳಿಕೆ ಅವರ ಮನೆಯ ಕಡೆಯಿಂದ ಕೇಳಿಬರುತ್ತದೆ. ಆಗ ಪ್ರಾಣಿ ಎದ್ದಿದೆ ಅಂತ ಗೊತ್ತಾಗುತ್ತದೆ. ಅನಂತರ ರಾತ್ರಿ ಮತ್ತೆ ಮಲಗುವ ತನಕ "ಬೇಜಾರು ಮಾರಾಯ್ರೆ" ಎಂಬ ಹಾಡು. ಮಳೆ ಹೆಚ್ಚಾದಷ್ಟೂ ಈ ಹಾಡು ಜೋರು."ಎಂಥಾ ಮಳೆಯ್ರೀ ಬೋರಾಗಿ ಹೋಯ್ತು" ಎಂಬ ಸೊಲ್ಲನ್ನು ಕೇಳಿ ಕೇಳಿ ನಾನು ಒಂದು ದಿನ ಸಲಹೆ ಕೊಟ್ಟೆ.

"ಬೇಜಾರು ಅಂತ ಮನೆ ಯೊಳಗೆ ಕೂತರೆ ಆಗುತ್ತೇನ್ರೀ. ಸೀದಾ ಎದ್ದು ಮಳೆಯಲ್ಲಿ ಪಚಪಚ ನೀರು ಸಿಡಿಸುತ್ತ ಒಂದು ರೌಂಡು ಹೋಗಿ ಬಂದು ಒದ್ದೆ ಮೈಯಲ್ಲಿ ಬಿಸಿ ಕಾಫಿ ಕುಡಿಯಿರಿ. ಸುರಿಯುವ ಮಳೆಗೆ ಮೈಯೊಡ್ಡಿದರೆ ವರ್ಷಾಂತರಗಳಿಂದ ಬಂದಿರೋ ಬೇಜಾರು ಸಹ ಹೋಗಿಬಿಟ್ಟು ಫ್ರೆಶ್ ಆಗಿ ಬಿಡುತ್ತೀರಿ" ಎಂದು ತಣ್ಣಗೆ ನಾನು ಹೇಳಿದಾಗ ಒಂಥರಾ ಹುಚ್ಚರನ್ನು ನೋಡುವ ಹಾಗೆ ನನ್ನತ್ತ ನೋಡಿ ಹೊರಟು ಹೋದರು.

ಇನ್ನೊಂದು ದಿನ ಕಾಲೇಜಿನಿಂದ ಬರುವಾಗ ಮನೆ ಹತ್ತಿರವಾಗುತ್ತಿದ್ದಂತೆಯೇ ಮಳೆ ಜೋರಾಗಿತ್ತು. ಹಿಂದೂ ಮುಂದೂ ಯಾರೂ ಇಲ್ಲ ಎಂಬ ಧೈರ್ಯದಲ್ಲಿ ಮಳೆಯ ರಾಗಕ್ಕೆ ನನ್ನ ರಾಗ ಸೇರಿಸಿಕೊಂಡು ಹಾಡುತ್ತ ತೇಲುತ್ತಲೇ ಬರುತ್ತಿದ್ದೆ.

ಎದುರು ಮನೆಯಿಂದ ಆಕಳಿಕೆ ಸದ್ದು ಕೇಳಲಾರದಷ್ಟು ನನ್ನ ಕುರಿತು ಅನುಮಾನವೆದ್ದಿತು ಎಂಬುದು ಅವರು ನನ್ನತ್ತ ಬೀರಿದ ಕರುಣಾಪೂರ್ಣ ನೋಟದಿಂದಲೇ ತಿಳಿಯಿತು. ಏನು ಮಾಡುವುದು? ಜಗತ್ತಿನ ಅನುಕಂಪಕ್ಕೆ ಹೆದರಿ ಯಾವಾಗಲೂ ನೆಟ್ಟಗೆ ಇದ್ದರೆ 'ಸೊಟ್ಟಗಿರುವ ಸುಖ' ಎಂಬುದೂ ಒಂದಿದೆ ಎಂದು ತಿಳಿಯಬೇಕಾದರೂ

ಹೇಗೆ? ಸೊಟ್ಟದಾಗಿ ಹಾಡುತ್ತಲೇ ಒಳಹೊಕ್ಕೆ ನಾನು.

ಹಾಗೆ ಸುರಿಯುವ ಮಳೆಯಲ್ಲಿ ನೆನೆಸಿಕೊಂಡು ಹಾಡುತ್ತ ಬಂದು ಒಳಸೇರಿ ಬೆಚ್ಚಗೆ ಬಟ್ಟೆ ಬದಲಾಯಿಸಿ ಮಾರುದ್ದ ಲೋಟ ತುಂಬ ನೊರೆಕಾಫಿ ತುಂಬಿ ಸೊರ್ರ್‌ನಿಸುತ್ತಾ ಕುಳಿತೆನೆಂದರೆ ನಾನು ಯಾವ ಲೋಕದಲ್ಲಿದ್ದೇನೆ ಎಂಬುದೇ ಮರೆತು ಹೋಗುತ್ತದೆ.

ಗಾಢ ಕತ್ತಲಿನ ಒಂದು ಸಂಜೆ ನನ್ನ ದಿವ್ಯಾನುಭೂತಿಯಲ್ಲಿ ನಾನು ಮುಳುಗಿದ್ದಾಗ ಹೊರಗಿನಿಂದ ನರಪಿಳ್ಳೆಯ ಸ್ವರ  ಬಾಗಿಲು ದಬದಬ ಬಡಿಯಿತು.ಆ ಮಳೆಯ ಸದ್ದಿನಲ್ಲಿ ಇದೊಂದು ಅಪಸ್ವರವಾಗಿ ಕೇಳಿತಾದರೂ ಬಾಗಿಲು ತೆಗೆದಾಗ ಸಣ್ಣ ಪಿಳ್ಳೆಯೊಂದು ಕೊಡೆ ಹಿಡಿದೇ ನಿಂತು "ಹಸಿಮೆಣಸಿನ ಕಾಯಿ ಇದ್ದರೆ ಕೊಡಬೇಕಂತೆ ಅಮ್ಮನಿಗೆ ಮಾರ್ಕೆಟ್ಟಿಗೆ ಹೋಗಲು ಬೇಜಾರಂತೆ" ಎಂದಿತು.

ಆ ಪಿಳ್ಳೆ ಮಗುವೇನಾದರೂ ಆಗಿರದಿದ್ದರೆ ಅದರ ಕುತ್ತಿಗೆ ಹಿಚುಕಿ  ಬಿಡುತ್ತಿದ್ದೆ. ಅವರ ಅಮ್ಮನ ಕುತ್ತಿಗೆ ಹಿಚುಕುವುದೇ ಸೂಕ್ತವಾಗಿ ತೋರಿದ್ದರಿಂದ "ಹಸಿಮೆಣಸು ಅಂದರೆ ಏನೆಂದೇ ಅವರಿಗೆ ಗೊತ್ತಿಲ್ಲವಂತೆ ಅಂತದ್ದೆಲ್ಲ ಹುಡುಕುವ ಮನಸ್ಥಿತಿಯಲ್ಲಿ ಅವರಿಲ್ಲವಂತೆ" ಎಂದು ಹೇಳು ಹೋಗು ಎಂದು ದಬ್ಬಿ ಬಾಗಿಲು ಹಾಕಿಕೊಂಡೆ.

ಆ ಮಗು ಹೋಗಿ ಅದರ ಅಮ್ಮನ ಬಳಿ ಅವರಿಗೆ ಹಸಿಮೆಣಸು ಅಂದರೆ ಏನೆಂದು ಗೊತ್ತಿಲ್ಲವಂತೆ ಎಂದು ಹೇಳಿದಾಗ ಮೊದಲೇ ಒಂದೆರಡು ಪ್ರಕರಣಗಳಲ್ಲಿ ನನ್ನ ಕುರಿತು ಅನುಮಾನವಿದ್ದ ಆಕೆಗೆ ಈಗ ಪ್ರಮಾಣಪೂರ್ಣ ಆಧಾರವೇ ದೊರಕಿರಬೇಕು. ಮರುದಿನದಿಂದ ಆಕೆ ನನ್ನತ್ತ ಬೀರುತ್ತಿದ್ದ ಕರುಣಾಪೂರ್ಣ ನೋಟದಲ್ಲಿ ಕರುಣೆಯ ಸಾಂದ್ರತೆ ಮತ್ತೂ ಹೆಚ್ಚಾದಂತೆ ಅನಿಸಿತು.

ಯಾರು ನೆಟ್ಟಗಿರಲಿ ಸೊಟ್ಟಗಿರಲಿ ಮಳೆರಾಯನಿಗೆ ಅದೆಲ್ಲ ಲೆಕ್ಕಕ್ಕಿಲ್ಲ.  ಅವತ್ತು ಕ್ಲಾಸ್ ಒಂದರಲ್ಲಿ ಹೋಗಿ ನಿಂತೆ. ಆ ರೂಮು ಇದ್ದುದೆ ಒಂದು ಮೂಲೆಯಲ್ಲಿ ಗಾರ್ಡನ್ನಿನ ಆಚೆ. ಗಿಡಮರದ ಕತ್ತಲು ಕವಿದ ಮೋಡಗಳ ಕತ್ತಲು. ಕ್ಲಾಸ್ ರೂಮು ಕತ್ತಲೆ ಕೋಣೆಯಂತೆ ಇತ್ತು. ಮುಂದಿನ ಸಾಲಿನ ಹುಡುಗ ಹುಡುಗಿಯರನ್ನು ಬಿಟ್ಟರೆ ಹಿಂದಿನವರ್ಯಾರು ಕಾಣುತ್ತಲೇ ಇಲ್ಲ, ಅನುಮಾನವಾಯಿತು.

"ಲೋ ಲಾಸ್ಟ್ ಬೆಂಚ್ ನಾನು ಕಾಣುತ್ತಿದ್ದೇನ್ಯೇ ಎಂದು ಕೇಳಿದೆ "ಇಲ್ಲ ಮೇಡಂ" ಎಂದವು ಕೋರಸಿನಲ್ಲಿ. ಹಿಂದಿನ ಬೆಂಚಿನಲ್ಲಿ ಮಕ್ಕಳು ಕೂತಿದ್ದು ನಿಜ ಎಂದಾಯಿತು. ಕಾಣಿಸದಿದ್ರೇನಾಯಿತು ಪಾಠ ಮಾಡುತ್ತೇನೆ ನಾನು ಕೇಳಿಸಿ ಆದರೂ ಕೇಳಿಸ್ತೀನಾ?. ಎಂದೆ. "ಕೇಳಿಸುತ್ತೀರಿ ಮೇಡಂ "ಎಂದವು.  ಸರಿ ಪಾಠ ಪ್ರಾರಂಭ ಮಾಡಿದೆ. ಅಷ್ಟರಲ್ಲಿ ಮಾಡು ಹರಿದು ಹೋಗುವ ಸಪ್ಪಳ ಮಾಡುತ್ತಾ ಮುಸಲ ಧಾರೆ ನಿಜಕ್ಕೂ ಒನಕೆ ಕುಟ್ಟಿದ ಸಪ್ಪಳದೊಂದಿಗೆ ದಪ ದಪ ಬೀಳತೊಡಗಿತ್ತು ನನ್ನ ಸ್ವರ ನನಗೇ ಕೇಳದಂತಾಯಿತು. ಇನ್ನು ಮಕ್ಕಳಿಗೆಲ್ಲಿ ಕೇಳಬೇಕು?

ಕಿಟಕಿಯಿಂದ ಒಳಗೂ ತೂರಿ ಬಂದ ಮಳೆ ಹುಡುಗಿಯರನ್ನು ತೋಯಿಸಿ ಹಾಕಿತು. ಹುಡುಗಿಯರು. ಅಯ್ಯಯ್ಯೋ ಎಂದರೆ ಹುಡುಗರು ಹೋಹೋ ಎನ್ನ ತೊಡಗಿದರು. ರೈನ್ ಹಾಲಿಡೇ ಡಿಕ್ಲೇರ್ ಆಗಿತ್ತು..

ಹೊರಗೆ ಬಂದರೆ ಅವತ್ತಿನ ಮಳೆ ಹುಚ್ಚುಮಳೆ, 'ಮಳೆಯಲ್ಲಿ ನಡೆಯಬೇಕೆ–ನ್ನುತ್ತಿದ್ದೆಯಲ್ಲ ಧೈರ್ಯವಿದ್ದರೆ ಇವತ್ತು ವಾಕ್ ಮಾಡು ನೋಡೋಣ' ಎಂದು ದೇಹಕ್ಕೆ ಮನಸ್ಸು ಚಾಲೆಂಜ್ ಎಸೆಯಿತು. ದೇಹ ಚಾಲೆಂಜ್ ಎಕ್ಸೆಪ್ಟೆಡ್ ಎಂದಿತ್ತು. ಹೇಗೂ ಗೇಣಗಲದ ಕೊಡೆ ಎಂಬ ವಸ್ತುವಂತು ಇದೆಯಲ್ಲ ತಲೆಯ ಮೇಲೆ ಹಿಡಿದು ಮನೆಯತ್ತ

ತೇಲತೊಡಗಿದೆ. ಮಳೆಗಾಲ ಪ್ರಾರಂಭವಾದಂದಿನಿಂದಲೂ ನನಗೆ ಆಗಾಗ ಒಂದು ಹುಚ್ಚು ಬಯಕೆ ಏಳುತ್ತಿತ್ತು.

ಸುಳ್ಳೇ ಸಮಾಧಾನ ನೀಡುವ ಈ ಗೇಣಗಲದ ನೈಲಾನ್ ಕೊಡೆಯನ್ನೊಮ್ಮೆ ಬಿಸಾಕಿ ಬೀಸಾಗಿ ಹೆಜ್ಜೆ ಹಾಕಬೇಕು. ನೇರಮಳೆಯ ಪ್ರಹಾರಕ್ಕೆ ಈ ಹುಲು ದೇಹ ಹೇಗೆ ಪ್ರತಿಕ್ರಿಯಿಸೀತು ಎಂದೆಲ್ಲ ಪ್ರಯೋಗ ಮಾಡಬೇಕೆನಿಸಿತ್ತು. ಪ್ರಯೋಗಕ್ಕೆ ಸೂಕ್ತ ಮುಹೂರ್ತ ಅವತ್ತೇ ಬಂದಿತ್ತು.

ಮಳೆಯೊಂದಿಗೆ ಮಾತನಾಡುತ್ತಲೇ ಮನೆಯ ಕಡೆ ಹೆಜ್ಜೆ ಹಾಕುತ್ತಿದ್ದೆ. ಸಮುದ್ರದಿಂದ ನೇರ ಎದ್ದ ಗಾಳಿಯೊಂದು ನನ್ನನ್ನು ಸವರಿಕೊಂಡು ಅಲ್ಲಾಡಿಸಿ ಮುಂದೆ ಹೋದಂತಾಯಿತು ನೋಡ ನೋಡುವಷ್ಟರಲ್ಲಿ ನನ್ನ ಗೇಣಗಲದ ಕೊಡೆ ನನಗೆ ತಿರುಗಿ ಬಿದ್ದಿದೆ! ಕಥೆ ಕಾದಂಬರಿ ನಾಟಕಗಳಲ್ಲಾದರೆ 'ಪಾತ್ರಗಳು ತಿರುಗಿ ಬಿದ್ದವು' ಎನ್ನುತ್ತಾರಲ್ಲ ಹಾಗೆ ನಡುದಾರಿಯಲ್ಲಿ ನನ್ನ ಕೊಡೆ ಬಂಡಾಯ ಮಾಡಿ ತಿರುಗಿ ಬಿದ್ದು ನನ್ನನ್ನು ಮಳೆಯಲ್ಲಿ ತೆರೆದಿಟ್ಟಿದೆ. ಹೀಗೆ ಬಿರುಗಾಳಿ, ಬಂಡಾಯ, ತಿರುಗಿ ಬೀಳುವುದು ಎಲ್ಲಾ ಒಮ್ಮೆಲೇ ಘಟಿಸಿ ಕ್ರಾಂತಿಯಾಗಿತ್ತು. ಮನಸ್ಸಿಗೆ ಮಾತ್ರ ಹುಚ್ಚು ಸಂತೋಷ. ಕ್ರಾಂತಿ ಆದ ಬಳಿಕ ಬದಲಾವಣೆ ತರುವ ಸಂತೋಷವೆಂದರೆ ಹೀಗೆ ಇರಬಹುದೇ? ಆಚೀಚೆ ನೋಡಿದೆ ಮಳೆಯಧಾರೆ ಭುವಿ ಬಾನು ಗಳಿಗೆ ಸೇತುವೆಯಾಗಿದೆ.

ಯಕ್ಷಗಾನದ ಭೀಮ ತನ್ನ ಗದೆಯನ್ನು ಹೆಗಲ ಮೇಲೆ ಇಟ್ಟು ಹಾಕುವ ಹೆಜ್ಜೆಯ ಗತ್ತಿನಲ್ಲಿ ತಿರುಗಿ ಬಿದ್ದ ನನ್ನ ಕೊಡೆಯ ಕಳೇ ಬರವನ್ನು ಹೊತ್ತು ನಡೆಯತೊಡಗಿದೆ. "ಹುಚ್ಚು ಮಳೆಯಲಿ ಹೊತ್ತು ನಡೆದಳು ಕೆಟ್ಟ ಕೊಡೆಯಾ ಅಸ್ತಿಪಂಜರ" ಎಂದೆಲ್ಲ ಯಕ್ಷಗಾನದ ಧಾಟಿಯ ಹಾಡುಗಳು ಮೂಡಿಬರತೊಡಗಿದವು ಜೀವನದ ಪರಮ ಆಸೆಯೊಂದು ನೆರವೇರಿದ ಮತ್ತಿನಲ್ಲಿ ತೇಲುತ್ತ ಮನೆಯತ್ತ ಹೆಜ್ಜೆ ಹಾಕುತ್ತಿದ್ದೆ. ನಿಮ್ಮ ಪಾಡಿಗೆ ನೀವು ನಿಮಗಿಷ್ಟ ಬಂದ ಹಾಗೆ ಸಂತೋಷಿಸುತ್ತೇನೆ ಎಂದರೆ ಬಿಟ್ಟೀತೆ ಈ ನರಲೋಕ?

ನನ್ನ ಬಳಿಯೇ ಆಟೋ ಒಂದು ಬಂದು ನಿಂತಿತು. "ಹತ್ಕೊಳ್ಳಿ ಮೇಡಂ ಎಲ್ಲಿಗೆ ಬಿಡಬೇಕು ಹೇಳಿ" ಎಂದಿತು ಪರೋಪಕಾರಿ ಧ್ವನಿ. ತಂದ್ಯಲ್ಲಪ್ಪ ಸಂಚಕಾರ ಎಂದುಕೊಂಡೆ.

ಆದರೆ ಹಾಗೆ ಹೇಳಲಾಗದೆ ಚಡಪಡಿಸಿದೆನಿರಬೇಕು, "ಪರವಾಗಿಲ್ಲ ಮೇಡಂ ದುಡ್ಡು ಎಷ್ಟು ಇದೆ ಅಷ್ಟು ಕೊಡಿ ಮಳೆ ನೋಡಿ ಹೇಗೆ ಸುರಿಯುತ್ತಿದೆ. ನಿಮ್ಮ ಕೊಡೆ ಹಾಳಾಗಿ ನೀವು ನೆನೆದುಕೊಂಡು ಹೋಗುತ್ತಿರುವುದನ್ನು ನೋಡಿ ನಾನೇ ನಿಲ್ಲಿಸಿದೆ" ಅಂದ ಆಟೋ ದಾತ. .ಮಾಡುವುದೇನು ಹತ್ತಿ ಕೂತು ಇಂಥಲ್ಲಿಗೆ ಬಿಡು ಎನ್ನಬೇಕಾಯಿತು. ಮನೆಯ ಗೇಟ್ ತನಕ ರಿಕ್ಷಾ ಹೋಗುವುದಿಲ್ಲವಾದ್ದರಿಂದ ಹಿಂದೆಯೇ ಇಳಿದು ಒದ್ದೆ ಹಣ ಕೊಟ್ಟು ಮತ್ತೆ ಮನೆಯ ತನಕ 'ಮಳೆಯಲ್ಲಿಯೇ ಮನೆಗೆ ಬಂದಳು' ಎನ್ನುತ್ತಾ ತೇಲತೊಡಗಿದೆ.

ಎದುರು ಮನೆಯ ಹಸಿಮೆಣಸಿನಾಕೆ ದೂರದಿಂದಲೇ. ನನ್ನನ್ನು ಗಮನಿಸುತ್ತಾ ನಿಂತಿದ್ದರು,. ಕೊಡೆ ಹಾಳಾಗಿದ್ದಕ್ಕೆ ಚೂರೂ ಬೇಸರಿಸದೇ ನೆನೆಯುವುದೇ ಪರಮೋದ್ದೇಶವೆಂಬಂತೆ ನಿಧಾನಕ್ಕೆ ಬರುತ್ತಿರುವ ನನ್ನನ್ನು ನೋಡಿ ಅವರಿಗೆ ನನ್ನ ತಲೆಯ ಕುರಿತು ಚೂರು ಅನುಮಾನವೂ ಈಗ ಉಳಿದಿಲ್ಲ ಎಂಬುದು ಅವರು ನನ್ನತ್ತ ಬೀರಿದ ಕರುಣಾತಿಶಯದ ದೃಷ್ಟಿಯಲ್ಲೇ ವ್ಯಕ್ತವಾಗುತ್ತಿತ್ತು. ಆಕೆ ನನಗೆ ಕೊಟ್ಟ ಹುಚ್ಚಿಯ ಪಟ್ಟ ಈಗ ಗಟ್ಟಿಯಾದಂತಿತ್ತು. ಮಳೆಗಾಲ ಎಲ್ಲೆಲ್ಲಿ ಏನೇನು ಅನಾಹುತ ಮಾಡುತ್ತದೆಯೋ ಹೇಳಲಾಗದು. ■

# ಮುಂಗಾರು–ಗಾಳಿಪಟಗಳ ದರ್ಬಾರು

ಬಿ ಎಸ್ ಶೈಲಜಾ

ಬೇಸಿಗೆ ರಜಾ ಮುಗಿದು ನಮ್ಮ ಶಾಲೆ ತೆರೆಯುವ ದಿನಕ್ಕೆ ಸರಿಯಾಗಿ ಮುಂಗಾರು ಮಳೆ ಪ್ರತ್ಯಕ್ಷವಾಗುತ್ತಿತ್ತು. ಸಣ್ಣವರಿದ್ದಾಗ ಶಾಲೆ ತಪ್ಪಿತು ಎಂದು ಖುಷಿ ಪಟ್ಟಿದ್ದು ಉಂಟು. ಬರುಬರುತ್ತಾ ಕೋಪ ಬರತೊಡಗಿತು. ಎರಡು ತಿಂಗಳಿಂದ ಕಳೆದುಹೋಗಿದ್ದ ಗೆಳೆಯ ಗೆಳತಿಯರು ಸಿಕ್ಕಿರುವಾಗ ಶಾಲೆ ಮುಗಿಸಿದ ಮೇಲೆ ಆಟ ಆಡಲು ಬಿಡುವುದಿಲ್ಲವಲ್ಲಾ!

ನಮ್ಮ ಮನೆ ಸುತ್ತಲೂ ಹಳ್ಳಕೊಳ್ಳ. ಮಳೆ ಬಂದಾಗ ಒಂದು ದೊಡ್ಡ ಕೆರೆಯೇ ಆಗುತಿತ್ತು. ರಸ್ತೆ ಯಾವುದೋ, ಚರಂಡಿ ಯಾವುದೋ ತಿಳಿಯುತ್ತಿರಲಿಲ್ಲ. ನಮ್ಮ ಶಾಲೆಗೆ ಹೋಗುವ ದಾರಿ ಬಂದ್. ಸುತ್ತು ಬಳಸಿ ದಿನಕ್ಕೊಂದು ದಾರಿ ಕಂಡು ಹಿಡಿದುಕೊಂಡು ಹೋಗುತ್ತಿದ್ದೆವು. ಜೊತೆಗೆ ಜಾರಿ ಬೀಳದ ಹಾಗೆ ನಡೆಯುವುದನ್ನು ಕಷ್ಟಪಟ್ಟು ಕಲಿತಿದ್ದೆವು. ಆಗ ನಾವು ಚಪ್ಪಲಿ ಹಾಕಿಕೊಳ್ಳುತ್ತಿರಲಿಲ್ಲ. ಏಕೆಂದರೆ ಕೆಸರಿನಲ್ಲಿ ಅದು ಸಿಕ್ಕಿ ಹಾಕಿಕೊಂಡು ಹಾಗೇಯೇ ಒಳಕ್ಕೇ ಹೋಗುತ್ತಿತ್ತು. ಛತ್ರಿಗಳನ್ನು ಊರಿಕೊಂಡು ನಡೆದರೆ ಅವು ಒಳಗಿಳಿಯುತ್ತಿದ್ದವು. ಅವನ್ನು ತೆಗೆಯುವಾಗ ಕಾಲುಗಳು ಒಳ ಸೇರುತ್ತಿದ್ದವು. ನಮ್ಮ ಮೇಷ್ಟು ತಮಾಷೆ ಮಾಡುತ್ತಿದ್ದುದು "ನಿಮ್ಮ ಮನೆಗೆ ಹೋಗುವುದು ಎಂದರೆ ಹಿಮಾಲಯ ಏರಿದ ಹಾಗೆ. ದಾರಿಯಲ್ಲಿ ಗಂಗಾ, ಯಮುನೆ ಪ್ರವಾಹ; ದಾಟುವುದೇ ಕಷ್ಟ. ಅಲ್ಲದೆ ಕಾಣದ ಸರಸ್ವತಿಯೂ ಇದೆ. ಅದೇ ಚಪ್ಪಲಿ ಕದಿಯುತ್ತದೆ" ಅಂತ. (ಯಾವುದೋ ಗ್ರಾಮ ಎಂದು ಕೊಳ್ಳಬೇಡಿ. ನಾನು ಹೇಳುತ್ತಿರುವುದು ಬೆಂಗಳೂರು ಜಯನಗರದ ಬಗ್ಗೆ)

ಹಾಗೆ ನೋಡಿದರೆ ನಮಗೆ ಮುಂಗಾರಿನ ಮುಂಚೆ ಬರುವ ಅಬ್ಬರದ ಮಳೆಯದೇ ಕಾಟ ಹೆಚ್ಚು. ಶಾಲೆ ಮುಗಿಸಿ ಮನೆಗೆ ಹೊರಡುವಾಗ ಸರಿಯಾಗಿ ಹಾಜರಾಗುತ್ತಿತ್ತು. ಹೊಸ ಸಮವಸ್ತ್ರ, ಪುಸ್ತಕ ಒದ್ದೆ ಆಗುತ್ತವೆ ಎಂಬುದೇ ಯೋಚನೆ. ಮುಂದೆ ಕಾಲೇಜು ದಿನಗಳಲ್ಲಿ ಸಮವಸ್ತ್ರ ಇಲ್ಲದಿದ್ದರೂ, ಬಸ್ ತಪ್ಪುವ ಆತಂಕ. ಕೆಲಸಕ್ಕೆ ಸೇರಿದ ಮೇಲಂತೂ ಮನೆಗೆ ಹೊರಡುವ ಹೊತ್ತಿಗೆ ಸರಿಯಾಗಿ ವಕ್ಕರಿಸಿತು ಎಂದು ಶಾಪ ಹಾಕಿದ್ದೂ ಉಂಟು. ಹೀಗೊಂದು ಸಂಜೆ, ಮನೆಗೆ ಬರುವಾಗ ಗಾಡಿಯ ಚಕ್ರ ಮುಳುಗುವಷ್ಟು ನೀರು ರಸ್ತೆಯಲ್ಲಿ. ಸರಿ ಇನ್ನೇನು ಮಾಡುವುದು? ಮರದ ಕೆಳಗೆ ನಿಂತೆ. ನೀರು ಕಾಲು ಮುಳುಗುವಷ್ಟು ಮೇಲೇರಿತು. ಮರದ ಕೆಳಗೆ ಡೊಗರು ಮಾಡಿಕೊಂಡಿದ್ದ ಹೆಗ್ಗಣಗಳು ಹೊರಗೋಡಿ ಬಂದವು. ಕಾಲುಗಳ ಮೇಲೆ ಬುಳ ಬುಳ ಎಂದು ಓಡಾಡಿದವು. ವಿಚಿತ್ರವಾದ ಅನುಭವ ಅದು. ಗಾಡಿ ಏರುವಂತಿಲ್ಲ, ಅಲ್ಲೇ ನಿಲ್ಲುವಂತಿಲ್ಲ.

ಹಿಂಗಾರು ಧೋ ಎಂದು ಸುರಿಯುತ್ತದೆ. ಗಲಾಟೆ ಕಡಿಮೆ. ಆದರೂ ಕ್ರುಂಬಿಗಲ್ ರಸ್ತೆಯಲ್ಲಿ ಒಂದು ಸಲ ಭಾರೀ ಟ್ರಾಫಿಕ್ ಜಾಂ! ಲಾಲ್ ಬಾಗ್ ಕೆರೆ ಕೋಡಿ ಬಿದ್ದು ರಸ್ತೆಗೆ ನೀರು ನುಗ್ಗಿತ್ತು. ಜನ ಬಟ್ಟೆಗಳನ್ನು, ಚೌಕಗಳನ್ನು ಹಾಸಿ ರಸ್ತೆಯುದ್ದಕ್ಕೂ ಮೀನು ಹಿಡಿಯುತ್ತಿದ್ದರು!

ಘಟ್ಟದಲ್ಲಿ ಮಳೆ ಸುರಿದರೆ ನಮಗಿಲ್ಲಿ ತಂಗಾಳಿಯ ಸವಲತ್ತು. ಹಾಗಾಗಿಯೇ ಇಡೀ ದೇಶ 38–40 ಡಿಗ್ರಿಗಳಲ್ಲಿ ಧಗಧಗಿಸುತ್ತಿರುವಾಗ ನಮ್ಮ ಬೆಂಗಳೂರು ತಣ್ಣಗಿರುತ್ತದೆ. ಮುಂಗಾರು–ಹಿಂಗಾರುಗಳ ಸಂಭ್ರಮದಲ್ಲಿ ನಮಗೆ ಫ್ಯಾನ್ ಹಾಕಿದಂತೆ ತಂಗಾಳಿ. ಯಾರ ಮನೆಯಲ್ಲೂ ಫ್ಯಾನ್ ಗಳು ಇರಲಿಲ್ಲ; ಫ್ರಿಜ್ ಅಂತೂ ಗೊತ್ತೇ ಇರಲಿಲ್ಲ.

ಮುಚ್ಚಿದ ಕಿಟಕಿಗಳ ಸಂದಿಯಿಂದ ರೋಂಯ್ ಎಂದು ಸದ್ದು ಮಾಡುತ್ತಾ ಗಾಳಿ

ನುಗ್ಗುತ್ತಿತ್ತು. ಅರಳಿ ಮರದ ಕೆಳಗೆ ಎಲೆಗಳ ಕಲರವದಲ್ಲಿ ಮಾತು ಕೇಳುವುದೇ ಕಷ್ಟವಾಗುತ್ತಿತ್ತು. ಮುಂಗಾರಿನಲ್ಲಿ ಮಳೆಗಿಂತ ಗಾಳಿಯದೇ ಆಟ. ಆದ್ದರಿಂದ ಘಟ್ಟಕ್ಕೆ ಮುಂಗಾರು ಕಾಲಿಟ್ಟರೆ ನಾವಿಲ್ಲಿ ಗಾಳಿಪಟ ಹಾರಿಸುತ್ತಿದ್ದೆವು. ದಿನವಿಡೀ ಗಾಳಿ ರಭಸವಾಗಿ ಬೀಸುತ್ತಿದ್ದುದರಿಂದ ಗಾಳಿಪಟವನ್ನು ಎತ್ತರದಲ್ಲಿ ಕಟ್ಟಿಬಿಟ್ಟರೆ ಮೂರ್ನಾಲ್ಕು ದಿನಗಳವರೆಗೆ ಹಾರುತ್ತಿತ್ತು. ಆಮೇಲೆ ಹರಿದುಹೋಗಿಯೋ, ಸೂತ್ರ ಕಿತ್ತು ಹೋಗಿಯೂ ಬೀಳುತಿತ್ತು. ನಮ್ಮ ನೆರೆಮನೆಯವರು ಮಹಡಿಗೆ ಮೆಟ್ಟಲು ಹಾಕಿಸಿಕೊಂಡಿದ್ದರು. ಅದು ಅನುಕೂಲಸ್ಥರ ವೈಭವ. ನಮಗಿಲ್ಲದ್ದು. ಅವರು ಅಲ್ಲಿ ಬಟ್ಟೆ ಒಣಗಿಸಲು ತಂತಿ ಕಟ್ಟಿದ್ದರು. ಆ ಬಟ್ಟೆಗಳನ್ನು ಕ್ಲಿಪ್ ಸಮೇತ ಮುಂದಿನ ಬೀದಿಗೋ, ಯಾರದೋ ಮನೆಗೋ ಎಸೆಯುತ್ತಿದ್ದ ತುಂಟ ಗಾಳಿರಾಯ, ಅವರ ಹುಡುಕಾಟ ವನ್ನು ಕಂಡು ನಗುತ್ತಿದ್ದನೋ ಏನೋ. ಆದರೆ ನಮಗೆ ಅವರು ಅಲ್ಲಿ ಕಟ್ಟಿರುತ್ತಿದ್ದ ಗಾಳಿಪಟದ ಮೇಲೇ ಕಣ್ಣು. ಬೆಳಿಗ್ಗೆ ಎದ್ದ ಕೂಡಲೇ ಗಾಳಿಪಟ ಇನ್ನೂ ಇದೆಯಾ ಎಂದು ಖಚಿತಪಡಿಸಿಕೊಳ್ಳುವುದರಿಂದಲೇ ದಿನದ ಆರಂಭ.



ಸರಿ. ಗಾಳಿಪಟ ಮಾಡುತ್ತಿದ್ದುದು ಹೇಗೆ? ಯಾವಾಗಲೋ ಎಲ್ಲೆಲ್ಲೋ ಸಿಕ್ಕ ತೆಳು ಕಾಗದಗಳನ್ನು ಜೋಪಾನವಾಗಿ ಕಾಪಾಡಿಕೊಂಡಿರುತ್ತಿದ್ದೆವು. ಅಂಗಡಿಯಿಂದ ದಿನಸಿ ಸಾಮಾನುಗಳೆಲ್ಲ ಕಾಗದದ ಪೊಟ್ಟಣಗಳಲ್ಲಿ ಬರುತ್ತಿದ್ದವು. ಅದಕ್ಕೆ ಸುತ್ತಿದ್ದ ಹುರಿ ಜೋಪಾನವಾಗಿ ಗೂಡು ಸೇರುತ್ತಿತ್ತು. ಆದರೆ ಕಡ್ಡಿ? ತೆಂಗಿನ ಮರ ಅಲ್ಲೊಂದು ಇಲ್ಲೊಂದು. ಅವೂ ಚಿಕ್ಕವು. ಆದ್ದರಿಂದ ತೆಂಗಿನ ಕಡ್ಡಿಗೆ ಡಿಮ್ಯಾಂಡೋ ಡಿಮ್ಯಾಂಡು!

ತೆಂಗಿನ ಕಡ್ಡಿ ಪೊರಕೆ ಯಾರ ಬಳಿಯಿರುತ್ತೆ? (ಮನೆಯಲ್ಲಿದ್ದುದನ್ನು ಕೊಡುತ್ತಿರಲಿಲ್ಲವಲ್ಲ!)

ಉತ್ತರ ಸಿಕ್ಕಿತು. ದಿನಾ ಬೀದಿ ಗುಡಿಸುವವಳು. ಆದರೆ ಅವಳು ಪೊರಕೆ ಎಲ್ಲಿ ಇಟ್ಟಿರುತ್ತಾಳೆ? ಮನೆಗಂತೂ ಒಯ್ಯುವುದಿಲ್ಲ. ಇಲ್ಲಿಯೇ ಎಲ್ಲೋ ಇರಬೇಕು. ಇದನ್ನು ಕಂಡುಹಿಡಿಯಲು ಒಂದು ಪತ್ತೆದಾರಿ ತಂಡ ಸಿದ್ಧವಾಯಿತು. ಯಾವುದೋ ಸಿರಿವಂತರ ಬಂಗಲೆಯ ಗೇಟಿನ ಹಿಂದೆ ಅದು ಇರುತ್ತದೆ ಎಂದು ತಿಳಿದಕೂಡಲೇ ಅಲ್ಲಿಗೆ ತಂಡ ಧಾವಿಸಿತು. ಆದರೆ ಗೇಟಿನ ಮುಂದೆ ಕಾಲೂರಿದ್ದೇ ತಡ ನಾಯಿಗಳೆರಡು ಬೊಗಳುತ್ತಾ ಓಡಿ ಬಂದವು. ಎಲ್ಲರೂ ಎದ್ನೋ ಬಿದ್ನೋ ಎಂದು ಓಡಿ ಹೋದರು. ಕೈಲಿ ದಾರ, ಕಾಗದ ಹಿಡಿದ ಚಿಕ್ಕವನೊಬ್ಬ ಬಿದ್ದು ಬಿಟ್ಟ. ನಾಯಿ ಬೊಗಳಿದ್ದು ಕೇಳಿ ಹೊರಗೆ ಬಂದ ಮನೆಯವರು ಅವನನ್ನು ಎಬ್ಬಿಸಿ ಬಂದ ಕಾರಣ ಕೇಳಿದರು. “ಪೊರಕೆ ಕಡ್ಡಿ ಬೇಕೇ? ಅಯ್ಯೋ ಇಡೀ ಗರಿಯನ್ನೇ ತಗೋ” ಎಂದು ಒಂದು ತೆಂಗಿನ ಗರಿಯನ್ನು ಕೊಟ್ಟರು.

ಅಷ್ಟು ಹೊತ್ತಿಗೆ ಓಡಿ ಹೋಗಿದ್ದ ಗೆಳೆಯರು ಹಿಂದಿರುಗಿ ಬಂದರು. ಗರಿಯನ್ನು ಕಂಡು ಹಿರಿಹಿರಿ ಹಿಗ್ಗಿದರು. ನಡೆಯಲಾಗದೆ ಕುಂಟುತ್ತಿದ್ದ ಹೀರೋ ಗೆ ಈಗ ರಾಜೋಪಚಾರ. ಅವನನ್ನು ಅದೇ ಗರಿಯ ಮೇಲೆ ಕೂಡಿಸಿ ಜರೋ ಎಂದು ದರದರನೇ ಎಳೆದುಕೊಂಡು ಹೊರಟರು. ಈ ಮೆರವಣಿಗೆಗೆ ಅದ್ದೂರಿ ಸ್ವಾಗತ ಸಿಕ್ಕಿತು. ಗರಿಯನ್ನು ತರಿದಂತಾಗಿ ಮನೆ ಸೇರುವಷ್ಟರಲ್ಲಿ ಕಡ್ಡಿಗಳೂ ತಯಾರಾಗಿದ್ದವು.

ಆ ವರ್ಷ ಅದೆಷ್ಟು ಗಾಳಿಪಟಗಳು ಹಾರಿದವೋ! ಬಣ್ಣದ ಕಾಗದ ಮುಗಿದು, ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆ ಗಳೆಲ್ಲ ಆಕಾಶಕ್ಕೆ ಏರಿದವು. (ಆಗ ಇಂಗ್ಲಿಷ್ ಪತ್ರಿಕೆಗಳು ಅಷ್ಟು ಜನಪ್ರಿಯವಾಗಿರಲಿಲ್ಲ)

ಈಗಲೂ ಜೂನ್‌ನಲ್ಲಿ ಗಾಳಿಪಟದ ಸ್ಪರ್ಧೆ ನಡೆದರೆ ಎಲ್ಲರೂ ಅವರವರ ಮನೆಯಿಂದಲೇ ಭಾಗವಹಿಸಬಹುದು. ಗುಜರಾತ್ ನಲ್ಲಿ ಜನವರಿಯಲ್ಲಿ ನಡೆಯುವ ಸ್ಪರ್ಧೆಯ ಹಾಗೆ. ಆದರೆ ಅಲ್ಲಿ ದಾರ ಕತ್ತರಿಸುವ ಆಟವೇ ಮುಖ್ಯ. ಅಪಘಾತಕ್ಕೆ ಕಾರಣವಾಗುವ ಗಾಜಿನಪುಡಿಯ ದಾರವು ಹೆಲ್ಮೆಟ್ ಇಲ್ಲದೇ ಹೋಗುವವರ ಮೂಗನ್ನೂ ಕತ್ತರಿಸುತ್ತದೆ. ಬಹುಶಃ ಶೂರ್ಪನಖಿ ಸೇಡನ್ನು ತೀರಿಸಿಕೊಳ್ಳಲು ಹೂಡಿದ ಹಂಚಿಕೆ ಇರಬೇಕು.

ನಮ್ಮೂರಿನ ಸ್ಪರ್ಧೆಯಲ್ಲಿ ಯಾರದ್ದು ಹೆಚ್ಚು ದಿನ ಹಾರುತ್ತದೆ ಎಂದೋ, ಯಾರದ್ದು ಅತಿ ಹೆಚ್ಚು ಎತ್ತರಕ್ಕೆ ಏರುತ್ತದೆ ಎಂದೋ ಬಹುಮಾನ ಕೊಡಬಹುದು. ಶೂರ್ಪನಖಿಯನ್ನು ಧಿಕ್ಕರಿಸಿ ಗಾಜಿನ ಪುಡಿಯ ದಾರವನ್ನು ಬಹಿಷ್ಕರಿಸಬಹುದು. ಡ್ರೋನ್ ನಿಂದ ಸರ್ವೇಕ್ಷಣೆ ಮಾಡಿ ತೀರ್ಪುಗಾರರು ಕುಳಿತಲ್ಲೇ ಬಹುಮಾನ ಕೊಡಬಹುದು! ಎಷ್ಟೊಂದು 'ಬಹುದುಗಳು'! ಕಾದು ನೋಡೋಣ, ಯಾರಿಗಾದರೂ ಈ ಉಪಾಯ ಹೊಳೆಯಬಹುದು. ■



# ಮುಂಬಯಿ ಮತ್ತು ವರ್ಷಾಋತು

ಜಯಶ್ರೀ ದೇಶಪಾಂಡೆ

ಪಕ್ಕದಲ್ಲೇ ಪವಯಿ ಸರೋವರವನ್ನು ಹರಡಿಸಿಕೊಂಡು ಆ ಲೇಕ್ ನಿಂದಾಗಿಯೇ ಸುತ್ತಣ ಪ್ರದೇಶವೆಲ್ಲ ಮೊದಲೇ ಕೊಂಚ ತಣ್ಣಗಿರುವ ಪವಯ್ ಬಡಾವಣೆಯಲ್ಲಿನ ನನ್ನಣ್ಣನ  ಮನೆಗೆ ಮುಂಜಾನೆಯ ಒಂಬತ್ತಕ್ಕೆಲ್ಲ ಠಾಕೋಠೀಕ್ ಬಂದು ಬೆಲ್ ಒತ್ತುತ್ತಿದ್ದ ಮನೆಗೆಲಸದ ಗಂಗೂಬಾಯಿ ಇನ್ನೂ ಪತ್ತೆ ಇರಲಿಲ್ಲ. ಹೇಗೆ ಬಂದಾಳು? ಹಿಂದಿನ ಸಂಜೆಯಿಂದಲೇ ಭೋರಿಡಿದು ಮಳೆ ಬಾರಿಸುತ್ತಿತ್ತು ಮುಗಿಲು.

ಆದರೂ ಹತ್ತು ಗಂಟೆಯ ಹೊತ್ತಿಗೆ ಬಂದವಳು "ಹೇ ಬಗಾ ತಾಯೀ ಆಪಲ ಮುಂಬಯಿಚ ಪಾವೂಸ್ ಮ್ಹಣಜೆ ಸಾರಖ ವೇಡ್ಯಾಸಾರಖಚ ಕರತೇ. ಅಣಿ ಲೋಕಲ್ ತರ ಆಲೀಚ್ ನಾಹೀ..." ಅನ್ನುತ್ತ – ಮುಂಬಯಿ ಮಳೆ ಅಂದರೆ ಸದಾ  ಹೀಗೆ ಹುಚ್ಚು ಹಿಡಿದಂತೆ ಆಡುತ್ತೆ, ಆಗ ಲೋಕಲ್ ಟ್ರೇನು ಸಮಯಕ್ಕೆ ಬರೋದಿಲ್ಲ.. ಅದಕ್ಕೆತಡವಾಯ್ತು". ಅನ್ನುವುದನ್ನು ತನ್ನದೇ ಶಬ್ದಗಳಲ್ಲಿ ಹೇಳಿದಳು.

ನಾನು ಅಣ್ಣನ ಮನೆಯಿರುವ ಮೂವತ್ತೆರಡನೆಯ ಫ್ಲೋರಿನ ಕಿಟಕಿಯೊಳಗಿಂದ, ಮೋಡಗಳೆಲ್ಲ ಒಡೆದು ಚೂರಾಗಿ ಚಿಮ್ಮಿದಂತೆ ದಬಾಯಿಸಿ ಸುರಿಯುತ್ತಿದ್ದ ಲಕ್ಷಗಟ್ಲೆ ಕೊಡ ನೀರನ್ನೇ ನೋಡುತ್ತ ಕೂತಿದ್ದೆ...

ನಿಜವಲ್ಲದೆ ಇನ್ನೇನು? ಅನಿಸಿತು ಅವಳ ಮಾತು. ಈ ಮುಂಬಯಿಕರ್ ಜನ ಮಾತ್ರ ಇಂಥ ಯಾವುದೇ ಪಾವೂಸ್ (ಮಳೆ)ಗೆ ಕಿಂಚಿತ್ತೂ ಬೆಚ್ಚದ, ಸೊಪ್ಪು ಹಾಕಲಾರದ ಗಟ್ಟಿಗರು.

ಹೌದು, ಮುಂಬಯಿಯಲ್ಲಿ ಆಕಾಶ ಒಡೆದು ಬಿದ್ದಂತೆ ಮಳೆ ಆಗುವುದು ವರ್ಷದ ಸುಮಾರು ಜುಲೈ ಸಮಯಕ್ಕೆ. ಒಂದೊಂದು ವರ್ಷ ಸ್ವಲ್ಪ ರಿಯಾಯಿತಿ ತೋರಿಸಿ ಕಡಿಮೆ ಕೊಡುವ ಮನಸ್ಸು ಅಲ್ಲಿನ ವರುಣನಿಗಿರುತ್ತೆ. ಅವನ ಆರ್ಭಟಗಳಿಗೆ ಸಂಪೂರ್ಣ–ವಾಗಿ ಒಗ್ಗಿ ಹೋಗಿದ್ದಾರೆ ಅಲ್ಲಿನ ಜನ.



ಇಡೀ ವರ್ಷದ ಅಗಾಧ ಸೆಕೆ, ಧಗೆ, ಕೊಳೆ ಎಲ್ಲವನ್ನೂ ತನ್ನ ಧಾರೆಯೊಳಗೆ ವಾರಗಳ ಕಾಲ ಮುಳುಗಿಸಿಟ್ಟು ಕ್ಲೀನ್ ಮಾಡುವ ಹುಮ್ಮಸ್ಸು ಈ ಮಾನ್ಸೂನಿನ ಹುಚ್ಚು ಮಳೆಗೆ. ರಸ್ತೆಗಳ ಗುಂಡಿಗಳೊಳಗೆ ಸ್ವಚ್ಛಂದ ತುಂಬಿ ನಿಂತು, ತಗ್ಗುಮನೆಗಳ ಬಿಡಿ, ಎತ್ತರದ ಮಹಡಿಗಳನ್ನೂ ಹೊಕ್ಕು ಬೇಡ ಬರಬೇಡ ಅನ್ನುವ ಜನರ ತಕರಾರು ಲೆಕ್ಕಿಸದೆ ಒಳಗಿನ ಪೀಠೋಪಕರಣ, ಮಂಚ, ಹಾಸಿಗೆ, ಪಾತ್ರೆ ಪುಸ್ತಕಗಳಿಗೆ ಬಲವಂತದ ಸ್ನಾನ ಮಾಡಿಸುವ ಮಳೆಯ ನೀರಿಗೆ

ಅಲ್ಲಿನ ಜೋಪಡಪಟ್ಟಿಗಳೆಂಬ ಕೊಳೆಗೇರಿ ಮನೆಗಳ ಮೇಲೆ ವಿಶೇಷ ಅಗ್ರಹ, ಅನುಗ್ರಹ ಸುರಿಯುವುದೇನಚ್ಚರಿ?

ಆದರೆ ಸಾದಾ ಸೀದಾ ಜನ ಅಲ್ಲ ಅವರೆಲ್ಲ ಕಷ್ಟಗಳಿಗಂಜದ ಗುಂಡಿಗೆಯವರು..

"ಕ್ಯಾ ಸಾಲಾ ಬಾರಿಶ್ ಇಸ್ ಬಾರ್ ತೋ ಕಮಾಲ ಹೀ ಕರ್ದಿಯಾ..ದಿಮಾಗ್ ಫಿರ್ಗಯಾ ಇಸ್ಕಾ" ಅಂತ ಬೈದು, ಬೈದರೂ ಅದೇ ಮಳೆಯಲ್ಲಿ ನೆಂದು, ಆ ನೆನೆತದಲ್ಲೂ ದೈನಂದಿನ ತಮ್ಮ ಯಾವುದೇ ಕಾಯಕಕ್ಕೆ ವಿರಾಮ ಇಲ್ಲವೇ ಇಲ್ಲ..ನಿಂತೂ ನಿಲ್ಲದೆ ನಡೆಯುವುದಕ್ಕೇ ಮುಂಬಯಿ ಅಂತಾರೆ!!

ಒಂದಿನ, ಎರಡು ದಿನ ಹೆಚ್ಚೆಂದರೆ ನಾಲ್ಕು ದಿನ ಮನೆಯಲ್ಲಿ ಕೂತು ಶಾಲೆ ಕೊಟ್ಟ ರಜಾದ ಮಜೆ ತೊಗೊಂಡ ಮಕ್ಕಳಿನ್ನು ಎದ್ದು ಹೊರಡಲೇಬೇಕಿರುವ ದಿನಗಳು ಬಾರದೆ ಇಲ್ಲವಲ್ಲ. ಅಂಥ ಅವರಿಗಾಗಿ ಯಾವ ಸವಲತ್ತೂ ಇಲ್ಲವೆನ್ನುತ್ತ ಧಪಾರೆಂದು ಬಾರಿಸುವ ಮಳೆಯಲ್ಲೇ ರೈನ್ ಕೋಟೇರಿಸಿ, ಶಾಲಾಬ್ಯಾಗು ಬೆನ್ನಿಗೆ ಹೊರಿಸಿ, ಊಟದ ಡಬ್ಬಿ ಹಿಡಿದು ಸ್ಕೂಲ್ ಬಸ್ಸೇರುವ ಮಕ್ಕಳು ಬಲು ಬೇಗ ಮಳೆಯನ್ನು ಒಪ್ಪಿಕೊಂಡುಬಿಡ್ತಾರೆ. ಗಾಲಿಯನ್ನೇ ಮುಳುಗಿಸುವಷ್ಟು ಏರಿದ ರಸ್ತೆಯ ನೀರಿನಲ್ಲಿ ಡುಬುಕ್ ಡುಬಕ್ ಅನ್ನುತ್ತ ಹೊಯ್ದಾಡಿ ಕಡೆಗೂ ಒಮ್ಮೆ ಅವರವರ ಸ್ಟಾಪಿಗೆ ತಂದಿಳಿಸುವ ಸ್ಕೂಲ್ ಬಸ್ಸಿಗೆ ಒಳಗಿದ್ದ ಕೊನೆಯ ಮಗುವೂ ಇಳಿದು ಹೋದಾಗ ಮಹಾ ಯಜ್ಞವನ್ನು ಪೂರೈಸಿದ ಸುಖವಂತೆ.

ರಸ್ತೆ ನಡುವೆ, ಸಮುದ್ರದಂಚಿನಲ್ಲಿ, ಕೆರೆಯಾಗಿರುವ ಆಟದ ಮೈದಾನಗಳಲ್ಲಿ ಛತ್ರಿ ಹಿಡಿದು ನಿಂತ ಟಿವಿ ಮಾಧ್ಯಮದವರು, ಆಕಾಶವಾಣಿಯವರು, ಪತ್ರಿಕೆಗಳವರು ಮಳೆಯ ಸ್ವರೂಪ ವರ್ಣನೆಗೆ, ಅದು ನಡೆಸಿರುವ ಧಾಂಧಲೆಗೆ, ರೈನ್ ಕೋಟಿನಲ್ಲಿ ಮುಖ ಅಷ್ಟೇ ಕಂಡ ಬೈಕು, ಸ್ಕೂಟರ್ ಸವಾರರನ್ನು ಮಳೆಯ ಆರ್ಭಟಕ್ಕೆ ಅವರಿಗಾದ ತೊಂದರೆಗಳ ಬಗ್ಗೆ ಸತತ ಪ್ರಶ್ನೆಗಳನ್ನಿಡುತ್ತ 'ಆಕಾಶ ಕಳಚಿಬಿದ್ದ ಮಳೆ, ಮೋಡ ಒಡೆದ ಮಳೆ..ಟೊರೆನ್ಶಿಯಲ್ ರೇನ್ ಫಾಲ್, ಕ್ಲೌಡ್ ಬರ್ಸ್ಟ್, ರೇನಿಂಗ್ ಕ್ಯಾಟ್ಸ್ ಅಂಡ್ ಡಾಗ್ಸ್' ಅನ್ನುವ ಶಬ್ದ ವಿಶೇಷಣಗಳನ್ನು ಬಳಸುತ್ತ ಮಹಾನಗರಪಾಲಿಕೆ, ಪಿ ಡಬ್ಲೂಡಿ, ನಗರಾಡಳಿತ ಇಲಾಖೆಯ ಅಧಿಕಾರಿಗಳು ಮತ್ತು ಮಂತ್ರಿಗಳ ಜನ್ಮ ಜಾಲಾಡುತ್ತಾರೆ...ಯಾವುದೇ ಜನ್ಮ ಜಾಲಾಟವೂ ಏನೂ ಪರಿಣಾಮ ಬೀರದೆಂದು ತಿಳಿದಿದ್ದರೂ ಆ ಕಾರ್ಯಕ್ರಮ ಅತೋನಾತವಾಗಿ ನಡೆದುಬಿಟ್ಟಿರುತ್ತೆ.

ನೀರು ತುಂಬಿದ ಗುಂಡಿಗಳಲ್ಲೇ ಅವರಿವರನ್ನು ನಿಲ್ಲಿಸಿ ಅವರ ಅನುಭವ ಕೇಳಿ ಅದಕ್ಕಿನ್ನಷ್ಟು ಬಣ್ಣ ಬಳಿದು ಫೋಟೋ ವೀಡಿಯೋ ಸಮೇತ ಲೈವ್ ಜಗತ್ತಿಗೆ ತಲುಪಿಸಿದರೆ ಅವರ ಜವಾಬ್ದಾರಿ ಮುಗೀತು...ಇಂಥ ಅವ್ಯವಸ್ಥೆ ಕರಾವಳಿಯ ಮಳೆಗಾಲದ, ವಿಶೇಷವಾಗಿ ಸಮುದ್ರದಂಚಿನ ಸಮಸ್ತ ಊರುಗಳಿಗೆ ಇತ್ತೀಚಿನ ವರ್ಷಗಳಲ್ಲಿ ಸಹಜ ಅನ್ನುವಂತಾಗಿದೆ.

ಮನೆಗಳ ಟೀವಿಗಳಲ್ಲಿ ಇದನ್ನು ಕಾಣುತ್ತ ಅವರೊಡನೆ ತಮ್ಮದೂ ಹಿಡಿಶಾಪಗಳನ್ನು ಬೆರೆಸುತ್ತ ಈ ಹಿಂದೆ ತಾವನುಭವಿಸಿದ ಇಂಥದೇ ಪೀಡೆಯ ನೆನಪನ್ನು ಇವತ್ತಿನದರೊಂದಿಗೆ ಹೋಲಿಸುತ್ತ ಕೆಟ್ಟು ಹೋದ ಕಾಲದ ಬಗ್ಗೆ ಇನ್ನಷ್ಟು ವಿಶ್ಲೇಷಣೆ ಮಾಡುತ್ತ ಇಂಥ ಪರಿಸ್ಥಿತಿಗೆ ಕಾರಣಗಳನ್ನು ಹುಡುಕಹೋಗುತ್ತಾರೆ. ಕೊನೆಗೆ ಸೋತು ಕೈ ಚೆಲ್ಲಿ 'ಪಾವೂಸ ಥಾಂಬಲ್ಯಾವರಚ ಬಘೂಯಾ..' (ಮಳೆ ನಿಂತ ಮೇಲೆಯೇ ನೋಡಿದ್ರಾಯ್ತು) ಅನ್ನುತ್ತ ತಮ್ಮ ಹಲವೆಂಟು ಕಾರ್ಯಕ್ರಮಗಳನ್ನು ಅನಿರ್ದಿಷ್ಟ ಕಾಲಕ್ಕೆ ಮುಂದೂಡುತ್ತಾರೆ.. ಇನ್ನು ಹಲವರು "ತ್ಯಾಚಾತ್ ಕಾಯ್ ? ಆಪಲ ಆಪಣ ಕರೂಯಾ?" (ಮಳೆ ಇದ್ರೇನಾಯ್ತು ನಮ್ಮ ಕೆಲಸ ಮುಗ್ಸೋಣ) ಅನ್ನುವವರು.

ಮುಂಬಯಿಯ ನರನಾಡಿ, ರಕ್ತ ನಾಳಗಳಾಗಿ ಹರಿದಾಡುವ ರೈಲು, ಲೋಕಲ್, ಮೆಟ್ರೋಗಳಿಗೆಲ್ಲ ಕೊಂಚ ಅಲ್ಲಲ್ಲೇ ನಿಂತು ಸುಧಾರಿಸಿಕೊಳ್ಳುವ ಸಮಯ. ಉಸಿರು ಹೊರಹಾಕುತ್ತ ಠಸ್ಸೆಂದು ಎಂಜಿನ್ ಹೂಸು ಬಿಟ್ಟು ಕಣ್ಣು ಮಿಟುಕಿಸಿ ನಾನೀಗ ಚುಕುಬುಕು ಅನ್ನಲಾರೆ.. ಅನ್ನುತ್ತವೆ.. '

"ಚ್ಯಾಯಲಾ..(ಮರಾಠೀ ಬೈಗಳು) ಸಗಳೇ ಲೋಕಲ್ ಠಪ್ಪ..." (ಎಲ್ಲಾ ಲೋಕಲ್ ರೈಲು ನಿಂತ್ಹೋತು) ಅನ್ನುತ್ತ ತಮ್ಮ ಬದುಕಿನ, ಅಂದಂದಿನ ಗಳಿಕೆಯ ಮೂಲವಾದ ತರಕಾರಿ, ಮೀನು, ಮೊಟ್ಟೆ, ಹಣ್ಣು, ಇನ್ನೇನೇನೋ ದಿನಬಳಕೆ ಸಾಮಾನಿನ ರಾಶಿ ಮನೆಯ ಮೂಲೆ ಹಿಡಿದು ಕೂತಿದ್ದನ್ನು ಕಾಣುತ್ತ ಕೊರಗುವ ರಸ್ತೆಬದಿ ಮಾರಾಟಗಾರರ ಪಡಿಪಾಟಲು.. ಮುಂಬಯಿಯ ಮುಕ್ಕಾಲುಪಾಲು ಜನರ ಹೊಟ್ಟೆಗೆ ಆಹಾರ ಒದಗಿಸುವವರೇ ಇವರು. ಈ ನಗರದ ಬದುಕಿನ ಅತ್ಮಗಳಿವರು.

"ಅರೇ..ಶೂಟಿಂಗ್ ಕ್ಯಾನ್ಸಲ್...ಚಲೋ ಕಂಹೀ ಮಿಲ್ಕೇ ಟೈಮ್ ಪಾಸ್ ಕರೇಂಗೇ.." ಅಂತ ಒಬ್ಬರನ್ನೊಬ್ಬರು  ನಿರಂತರ ಮೊಬೈಲ್ ಮೂಲಕ ಎಳೆದುಕೊಳ್ಳುವ ಟಿವಿ, ಸಿನಿಮಾ ತಾರೆಗಳ ಮುಖದೊಳಗೆ ಒಂದಿಷ್ಟು ವಿಶ್ರಾಂತಿ ಕಂಡ ಖುಶಿ!

ಗುಡುಗು, ಸಿಡಿಲುಗಳ  ಲೆಕ್ಕಾಚಾರದೊಂದಿಗೆ ಸಮುದ್ರಕ್ಕೆ ಇನ್ನಷ್ಟು ನೀರು ತುಂಬಿಸುವ ಮಳೆಯನ್ನೇ ಹದಿನೈದಿಪ್ಪತ್ತು ಅಡಿಗಳೆತ್ತರಕ್ಕೆ ಎತ್ತಿ ಎತ್ತಿ ಬೀಚುಗಳಂಚಿನ ಬೆಂಚು, ಕಟ್ಟೆ, ಫೂಟ್ ಪಾತಗಳಿಗೆ ಬೀಸಿ ಬಡಿದರೆ ಸಮುದ್ರದ ಆ  ಉಬ್ಬರದ ಅಬ್ಬರವನ್ನು ಕಂಡು ಸುಖಿಸುವ ಕೆಲವು ಜನ– ಹೆಚ್ಚಾಗಿ ಪ್ರವಾಸಿಗರು–ಅದಕ್ಕೆಂದೇ ಮೆರೀನ್ ಡ್ರೈವಿನಂಥ ಜಾಗಗಳಿಗೆ  ಓಡುವುದಿದೆ.

ಇದೇ ಕಾರಣಕ್ಕೆ ಮಳೆಗಾಲದಲ್ಲಿನ ಮುಂಬಯಿ ಅಂದರೆ ನನಗೊಂದು ವಿಶೇಷ ಮೆಚ್ಚು..ಆ ಸಮಯದಲ್ಲಿ ಅಲ್ಲಿದ್ದರೆ ಇಂಥ ಸಾಗರ ಮೊರೆತದಾಟ ನೋಡಲು ಹೋಗದಿರಲಾರೆ...ಒಮ್ಮೆ ಹೀಗಾಯ್ತು. ಮಧ್ಯಾಹ್ನದ ವರೆಗೂ ಸುಮ್ಮನಿದ್ದ ಆಕಾಶ ಮೂರು ಗಂಟೆಯಷ್ಟೊತ್ತಿಗೆ ಅದರ ನೀರ ಹೊಟ್ಟೆಯ ಕೊಡ ಒಡೆದು ಬೋರಲಾಗಿಸಿ ಒದ್ದೊದ್ದು ಬಾರಿಸಿತು. ಆಕಾಶದ ಮೋಡಗಳ ಅಪ್ಪಿಕೊಳ್ಳುವ ಹುಮ್ಮಸ್ಸು ಹೊಕ್ಕು ಕೆಳಗಿನ ಸಮುದ್ರ ಎದ್ದು ನೆಗೆಯಿತು.. ನೋಡ ನೋಡುವಷ್ಟರಲ್ಲಿ ಹದಿನೆಂಟಡಿ ಎತ್ತರದ ಬ್ರಹ್ಮಾಂಡದಂಥ ರಕ್ಕಸ ತೆರೆಗಳ ಉಕ್ಕಿ ಕಿವಿ ಗಡಚಿಕ್ಕಿಸುವ ಸದ್ದಿನೊಂದಿಗೆ ಮೆರೀನ್ ಡ್ರೈವ್‌ನ ಮೈಲಿಗಟ್ಲೆಯುದ್ದದ ತಡೆಗೋಡೆಯನ್ನು ಹಾರಿ ಬಂದು ನನಗೆ ನಿಂತಲ್ಲೇ ಸಂಪೂರ್ಣ ಜಲಾಭಿಷೇಕ! ಒಂದು ಕ್ಷಣ ಸಾಗರವೇ ನನ್ನನ್ನು ಒಳಗೆಳೆದುಕೊಳ್ಳಲು ಬಂತೋ ಅನ್ನುವ ದಿಗಿಲು, ಭ್ರಮೆ ಮೂಡಿಸಿ ಕೈ ಕಾಲುಗಳೆಲ್ಲ ತತ್ತರಬಿತ್ತರ ಆಗುತ್ತ ಕಣ್ಣು ಮೂಗಲೆಲ್ಲ ಹೊಕ್ಕ ಉಪ್ಪು ನೀರು ಉಸಿರುಗಟ್ಟಿಸುತ್ತೇನೋ ಅನಿಸುವಾಗಲೇ ಬಂದಷ್ಟೇ ರುದ್ರ ರಭಸ ಜೋರಿನಲ್ಲಿ ಅಲ್ಲೇ ಕುಸಿದು ಕಳಕಳ ವರ್ಷಾ ಧಾರೆ ರಸ್ತೆ, ಫೂಟ್ಪಾತ್, ಅಲ್ಲಿದ್ದ ಗಿಡಮರದಂಥ ಸಮಗ್ರವನ್ನೂ ಹೊಚ್ಚಿ ಮುಚ್ಚಿತು..

ಟ್ಯಾಕ್ಸಿ ಹಿಡಿದು ಮನೆಗೆ ಮರಳಿ ಬಂದು ಕಾಫಿ ಕುಡಿದು ಮಲಗಿದ ಮೇಲೆಯೂ ಅರಬ್ಬೀ ಸಮುದ್ರ ನನಗೆ ಎರಚಿದ ಜಲಾಭಿಷೇಕದ ಅನಿರ್ವವಚನೀಯತೆ ಕಡಿಮೆಯಾಗಲೇ ಇಲ್ಲ.. ಅದೊಂದು ಕಣ್ಮುಚ್ಚಿ ಒಳಗೊಳ್ಳಬೇಕಾದ ಸುಖವಾಗಿ ನನ್ನ ನೆನಪಿನಲ್ಲಿಳಿದಿದೆ.. ಇನ್ನೊಮ್ಮೆ, ಮತ್ತೊಮ್ಮೆ ಮಗುದೊಮ್ಮೆಗೂ ಮಳೆಗಾಲದ ಆ ವರ್ಷಾಧಾರೆ...

ಮುಂಬಯಿ ಮೆರೀನ್ ಡ್ರೈವಿನ ಆ ಜಲಾಭಿಷೇಕ ಬೇಕೆನಿಸಿ ಮನಸ್ಸು ಕಾಯುತ್ತಿರುತ್ತೆ!

■

# ಬೆಂಗಳೂರು ಮತ್ತು ಮುಂಗಾರು....

**ಎಚ್. ಗೋಪಾಲಕೃಷ್ಣ**

ಮಾರ್ಚ್ ತಿಂಗಳ ಕೊನೆವಾರದಲ್ಲಿ ಒಂದು ಮಳೆ ಬಂದು ಆಗಲೇ ಬಿಸಿಲಿಗೆ ಬಸವಳಿದಿರುವ ಭೂ ತಾಯಿಗೆ ಒಂದು ರೋಷ್ಟು ತಂಪು ಎರಚುತ್ತೆ. ಆಮೇಲೆ ಬೀಳುವ ಬಿರು ಬಿರು ಉರಿ ಬಿಸಿಲಿಗೆ ಭೂಮಿ ಬಾಯಿ ತೆರೆದು ಕೊಂಡು ಆಕಾಶ ನೋಡುತ್ತಾ



ನೋಡುತ್ತಾ ಏನಪ್ಪಾ ದೇವರೇ ನನ್ನ ಗತಿ ಹೀಗಾಯ್ತೆ ಅಂತ ಪರಿತಪಿಸುತ್ತಾ ಪತರ ಗುಟ್ಟಿ ಹೋಗಿರುತ್ತೆ.ಭೂಮಿಯಲ್ಲಿ ಆಕಾಶಕ್ಕೆ ಬಿಟ್ಟ ಬಾಯಿ ಅಗಲ ಆಗುತ್ತಾ ಆಗುತ್ತಾ ಒಡಲೊಳಗಿಂದ ಬಿಸಿ ಗಾಳಿ ಹೊರಗೆ ಚಿಮ್ಮತ್ತಾ ಚಿಮ್ಮತ್ತಾ ಜೀವನ ಅಸಹನೀಯ ಅನಿಸುತ್ತಾ .....

ಇದೇ ಸಮಯದಲ್ಲೇ ಕೆರೆಯ ಅಂಗಳದಲ್ಲಿ ಮತ್ತೊಂದು ಪ್ರಸಂಗ ಬಿಚ್ಚಿಕೊಳ್ಳುತ್ತಾ ಇರುತ್ತೆ. ನಿಮ್ಮ ಮನೆ ಪಕ್ಕದಲ್ಲೋ ಅಥವಾ ಸುತ್ತಮುತ್ತಲಿನ ಎಲ್ಲೋ ಒಂದು ಕೆರೆ ಇಲ್ಲವೇ? ಕೆರೆ ಇಲ್ಲ ಅಂದರೆ ನೀವು ಜೀವನದ ಒಂದು ಅಭೂತ ಪೂರ್ವ ಅನುಭವದಿಂದ ವಂಚಿತರು ಅಂತ ಹೇಳಬೇಕು ಅಷ್ಟೇ!

ಕೆರೆಯ ನೀರು ಒಣಗುತ್ತಾ ಒಣಗುತ್ತಾ ದಡದಿಂದ ದೂರ ಒಳಮುಖವಾಗಿ ಕುಗ್ಗುತ್ತಾ ಹೋಗುತ್ತದೆ. ಆಗ ನೋಡಿ ಪ್ರಕೃತಿಯ ಚಮತ್ಕಾರ.ಮಾರ್ಚ್ ತಿಂಗಳ ಮೊದಲು ಹಸಿರು ಮರಗಳಿಂದ ಒಣಗಿದ ಎಲೆಗಳು ಉದುರಿ ಉದುರಿ ಬೋಳು ಬೋಳು ಕಾಣುತ್ತಿತ್ತು ತಾನೇ? ಈಗ ಅವು ಚಿಗುರುತ್ತಿವೆ. ಸಣ್ಣ ಹಸಿರು ಹಸಿರು ಎಲೆಗಳು ತಲೆಯಲ್ಲಿ ಅಂತಹ ಒತ್ತು ಇಲ್ಲದ ಹೂವಿನ ಸರವನ್ನು ತುರುಬಿಗೆ ಸಿಕ್ಕಿಸಿಕೊಂಡ ಹಾಗೆ ಕಾಣುತ್ತದೆ.

ಅವುಗಳ ಕೊರಳ ಒಳಗಿಂದ ಹಕ್ಕಿಯ ಹಾಡು ಕೇಳುತ್ತೆ. ನಿಮ್ಮ ಮನೆಯ ಮುಂದಿನ ಮಾವಿನ ಮರದಲ್ಲಿ ಎಳೆ ಚಿಗುರು ಮತ್ತು ಮಾವಿನ ಕಾಯಿಗಳು. ಅದನ್ನು ಅರಸಿ ಬರುವ ಅಳಿಲುಗಳ ಸಂತೋಷ ತುಂಬಿದ ದನಿ ನಿಮ್ಮ ಮನೆ ತುಂಬುತ್ತದೆ. ಮಾವಿನ ಕಾಯಿಯ ಸಮೂಹದಲ್ಲಿ ದೋರೆ ಹಣ್ಣು ಹುಡುಕುವ ಕೋಗಿಲೆ ಗಿಳಿ ಗಳ ಮಾತು ಕಿವಿಯ ಮೇಲೆ ಬಿದ್ದು ಅವುಗಳ ಭಾಷೆ ಬರುವ ಹಾಗಿದ್ದರೆ ಪ್ರಪಂಚ ಏಸೊಂದು ಸುಖವಿತ್ತು ಏಸೊಂದು ತೃಪ್ತಿಯಿತ್ತು ಎಂದು ಅನಿಸುತ್ತದೆ. ಸಂಪಿಗೆ ಮರದಿಂದ ಹೂವಿನ ಸುವಾಸನೆ ಇಡೀ ಬಡಾವಣೆಯನ್ನು ಆವರಿಸಿರುತ್ತೆ.ಮಾವಿನ ಮರದಲ್ಲಿ ಎಳೆ ಚಿಗುರು ಬಿಟ್ಟು ಸುತ್ತಲ ಪರಿಸರಕ್ಕೆ ಒಂದು ಒಳ್ಳೆಯ ಘಮ ಘಮ ಬೀರುವ (ಘಮ ಘಮಾಡಿಸ್ತೀದೀ ಮಲ್ಲಿಗಿ..) ಸಮಯದಲ್ಲಿ ಇತ್ತ ಕೆರೆ ಅಂಗಳದಲ್ಲಿ ಮತ್ತೊಂದು ವಿಶಿಷ್ಟ ಪ್ರಯೋಗಕ್ಕೆ

ಭೂರಮೆಯ ರಂಗ ಸಿದ್ಧಗೊಂಡಿದೆ.

ಕೆರೆ ನೀರು ಅರೆ ಬರೆ ಬತ್ತಿರುವ ಈ ಹೊತ್ತಿನಲ್ಲಿ ಅಸಂಖ್ಯಾತ ಜಲಚರಗಳು ಗೋಚರಿಸುತ್ತವೆ. ದೇಶ ವಿದೇಶಗಳಿಂದ ಅನ್ನ ಅರಸಿ ಬರುವ ವಿವಿಧ ರೀತಿಯ ಜಾತಿಗಳ ವಿವಿಧ ಬಣ್ಣಗಳ ನೀರು ಹಕ್ಕಿಗಳು ಒಟ್ಟಾರೆ ನಿಂತು ತಮಗೆ ಅಂದಿನ ಆಹಾರ ಕೊಟ್ಟ ದೇವರಿಗೆ ಕೃತಜ್ಞತೆ ಸಲ್ಲಿಸುತ್ತವೆ! ಅದೇ ಖುಷಿಯಲ್ಲಿ ಜೋಡಿ ಸೇರುತ್ತವೆ ಮತ್ತು ತಮ್ಮ ಪೀಳಿಗೆ ಬೆಳೆಯಲು ತಮ್ಮ ಕೊಡುಗೆ ನೀಡುತ್ತವೆ. ಸುತ್ತ ಮುತ್ತಲಿನ ಮರಗಿಡಗಳಲ್ಲಿ ಗೂಡು ಕಟ್ಟುತ್ತವೆ...

ನಡು ಬಿಸಿಲಿನಲ್ಲಿ ಬೆವರು ಸುರಿಸುತ್ತಾ ನಡೆದಾಡುವ ಅಜ್ಜಂದಿರು ತಮ್ಮ ನೆನಪು ಹರವುತ್ತಾರೆ. ಬಿಸಿಲು ಕಳೆದ ಸಲಕ್ಕಿಂತ ಈ ಸಲ ಹೆಚ್ಚು ಎನ್ನುವುದು ಸಾರ್ವಕಾಲಿಕ ಸತ್ಯ ವಾಗುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಲ ಚಳಿಯೂ ಹೆಚ್ಚು ಎಂದು ಇನ್ನೊಂದು ಅಜ್ಜ ಸಪ್ಲಿಮೆಂಟ್ ಕೊಡುತ್ತದೆ. ಕೊನೆಗೆ ಸಾರ್ವತ್ರಿಕವಾಗಿ ಈ ವರ್ಷದ ಬಿಸಿಲು ಹೆಚ್ಚು, ಈ ವರ್ಷದ ಮಳೆ ಹೆಚ್ಚು, ಈ ವರ್ಷದ ಚಳಿ ಸಹ ಹೆಚ್ಚು ಎನ್ನುವ ಒಮ್ಮತಕ್ಕೆ ಬರುತ್ತಾರೆ. ಜತೆಗೆ ಈ ವರ್ಷ ಎಲ್ಲದರ ಬೆಲೆಯೂ ಏರಿದೆ ಎನ್ನುವ ಅಭಿಪ್ರಾಯ ಮೂಡುತ್ತದೆ ಮತ್ತು ಇದಕ್ಕೆ ಸರ್ವಾನುಮತ ಸಿಗುತ್ತದೆ!...ಈ ಸಲ ಮಾನ್ ಸೂನ್ ನಿಧಾನವಂತೆ ಎನ್ನುವ ಮಾತು ಶುರು ಆಗುತ್ತದೆ. ಮಾನ್ ಸೂನ್ ಆಗಲೇ ಬಂಗಾಲದಲ್ಲಿ ಬಂದಿದೆ ಎಂದು ಒಂದು ಅಜ್ಜ ನ್ಯೂಸ್ ಕೊಡುತ್ತೆ.

ಈ ಮಾತು ಕತೆ ನಡೆದ ಒಂದೇ ವಾರಕ್ಕೆ ಆಕಾಶದಲ್ಲಿ ಮೋಡಗಳು ಪೈಪೋಟಿಯಲ್ಲಿ ಗುಂಪು ಕಟ್ಟುತ್ತವೆ....

ಮೇ ಮೂರನೇ ಅಥವಾ ನಾಲ್ಕನೇ ವಾರದಲ್ಲಿ ಕೇರಳದಲ್ಲಿ ಮಳೆ ಆರ್ಭಟ ಶುರು. ಒಂದೆರೆಡು ದಿವಸದಲ್ಲಿ ಅದು ಬೆಂಗಳೂರಿಗೂ ಹಾಜರು. ಇಲ್ಲಿನ ಮುಂಗಾರು ಅಂದರೆ ಒಂದು ರೀತಿ ಸುಖ ದುಃಖ ನೋವು ನಲಿವು ಎಲ್ಲದರ ಸಮ್ಮಿಶ್ರ ಸರ್ಕಾರ ಇದ್ದಹಾಗೆ. ಮಳೆ ಹೆಚ್ಚಾದರೆ ಹೆಚ್ಚಾದರೆ ಏನು ಮಳೆ ಬಂದರೆ ಅದೂ ಸಾಧಾರಣ ಮಳೆ ಆದರೇನೇ ರಸ್ತೆ ನೀರು ತುಂಬಿ ಹರಿಯುತ್ತೆ. ಮೋರಿ ಯಾವುದು ರಸ್ತೆ ಯಾವುದು ಗೊತ್ತಾಗದೇ ವಾಹನ ಓಡಿಸುವವರು ಪರದಾಡುತ್ತಾರೆ. ಪಾದಚಾರಿಗಳು ಫುಟ್ ಪಾತ್ ಮಧ್ಯದ ಹಳ್ಳದಲ್ಲಿ ಕಾಲಿಟ್ಟು ಮೊಗಚಿಕೊಳ್ಳುತ್ತಾರೆ. ನಾಲ್ಕು ಚಕ್ರಗಳ ವಾಹನ ನಡೆಸುವವರು.. ಅಂದರೆ ಫೋರ್ ವೀಲರ್ಸ್ ನವರು ಗಂಟೆ ಗಟ್ಟಲೆ ರಾತ್ರಿ ಹಗಲು ರಸ್ತೆಯಲ್ಲಿಯೇ ಟ್ರಾಫಿಕ್ ಜಾಮ್ ಆಗಿ ಸಿಕ್ಕಿಕೊಂಡು ತಮ್ಮ ನಸೀಬನ್ನು ಹಳಿಯುತ್ತಾರೆ. ಒಂದು ಎರಡು ದಿವಸದ ಒಂದು ಗಂಟೆ ಎರಡು ಗಂಟೆ ಮಳೆಗೆ ಬೆಂಗಳೂರು ನಡುಗಿ ಹೋಗಿಬಿಡುತ್ತೆ. ಬಡಾವಣೆಗಳಲ್ಲಿ ಮನೆ ಒಳಗೆ ಹೊರಗೆ.. ಎಲ್ಲೆಲ್ಲೂ ನೀರೋ ನೀರು!ಹಾವು ಮುಂಗಸಿ ದಾರಿ ತಪ್ಪಿ ಮನೆಗೆ ನುಗ್ಗುತ್ತವೆ..

ಕಾರ್ಪೋರೇಷನ್ ಹೀಗೆ ಬಿದ್ದ ಮಳೆ ನೀರು ತೆಗೆದು ಜನರ ಕಷ್ಟ ಕಡಿಮೆ ಮಾಡಲು ಹರಸಾಹಸ ಪಡುತ್ತೆ. ತಗ್ಗು ಪ್ರದೇಶಕ್ಕೆ ಬೋಟ್ ಸೇವೆ ಸಹ ಕೊಡುತ್ತೆ.

ಇಲ್ಲಿನ ಅತಿ ಹಿರಿಯ ಗೋಪಣ್ಣ ಇಂತಹ ಮಳೆ ಬರೋದು ಮಂತ್ರಿಗಳು ಭರವಸೆ ಕೊಡೋದು...ಎಲ್ಲವೂ ಲಾಗಾಯ್ತಿನಿಂದ ನಡೆದುಕೊಂಡು ಬಂದಿರೋ ಸಂಪ್ರದಾಯ ಅನ್ನುತ್ತಾನೆ. ಗೋಪಣ್ಣನಿಗೆ ಈಗ ಮುನ್ನೂರರ ಮೇಲೆ ಏಜು. ಅವನ ಮಾತಿನಲ್ಲಿ ಸತ್ಯ ಇದೆ ಅನಿಸುತ್ತೆ.

ನಮ್ಮ ಸಿವಿಕ್ ಸಿಬ್ಬಂದಿ ಅಹೋರಾತ್ರಿ ಜನರ ಯೋಗಕ್ಷೇಮ ವಿಚಾರಿಸುತ್ತವೆ. ಮಳೆ ಗಾಳಿಗೆ ಬಿದ್ದ ಮರಗಳ ತೆರವು, ಕೈ ಕೊಟ್ಟ ಕರೆಂಟನ್ನು ಮತ್ತೆ ಕೊಡುವುದು, ಶಾಕ್

ಹೊಡೆಸಿಕೊಂಡ ಸಂಸಾರವನ್ನು ಸಠಿ ರಕ್ಷಿಸುವುದು, ಮೋರಿಯಲ್ಲಿ ಕೊಚ್ಚಿ ಹೋದವರನ್ನು ಶೋಧಿಸುವುದು ... ಮೊದಲಾದ ಜನೋಪಯೋಗಿ ಕಾರ್ಯಗಳನ್ನು ವಾರ್ ಫುಟಿಂಗ್ ಮಾದರಿಯಲ್ಲಿ ಅಂದರೆ ಯುದ್ಧದೋಪಾದಿಯಲ್ಲಿ ಮಾಡುತ್ತವೆ. ಕೆಲವು ಮೋರಿ ಗಳು ತಮ್ಮ ಹೊಟ್ಟೆ ಬಗೆಸಿಕೊಂಡು ಕರುಳು ಡಿ ಟಾಕ್ಸ್ ಮಾಡಿಸಿಕೊಂಡು ರಸ್ತೆ ಅಂಚಿನಲ್ಲಿ ಅವಶೇಷ ಚೆಲ್ಲಿರುತ್ತವೆ. ಇವು ಮುಂದಿನ ಮಾನ್ ಸೂನ್ ನಲ್ಲಿ ಅಂತಿಮ ಕ್ರಿಯೆಗೆ ಸಜ್ಜಾಗುತ್ತವೆ.

ಇನ್ನೊಂದು ಅಂದರೆ ನಮ್ಮೂರಲ್ಲಿ ಅಂದರೆ ಬೆಂಗಳೂರಲ್ಲಿ ಮುಂಗಾರು ಎಲ್ಲಾ ಕಡೆಯೂ ಒಂದೇ ಸಮ ಸುರಿಯದು. ಕಾರಣ ಅದಕ್ಕೆ ಸಾಮಾಜಿಕ ನ್ಯಾಯದ ಪಾಠ ಆಗಿಲ್ಲ. ಸೋಶಿಯಲ್ ಜಸ್ಟಿಸ್ ಎನ್ನುವುದು ಅದಕ್ಕೆ ತಿಳಿಯದು. ಎಲ್ಲರಿಗೂ ಸಮಪಾಲು ಎನ್ನುವ ತತ್ವದ ಅರಿವಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು ಎನ್ನುವ ಮೂಲಭೂತ ಪಾಠ ಅದಕ್ಕೆ ತಿಳಿಯುದು. ಈ ಕಾರಣದಿಂದ ಕೆಲವು ಕಡೆ ಹೆಚ್ಚು ಮುಂಗಾರು ಸುರಿದರೆ ಮತ್ತೆ ಕೆಲವು ಕಡೆ ಅಷ್ಟು ಸುರಿಯದು.



ಹೆಚ್ಚು ಕಮ್ಮಿ ಒಂದು ಒಂದೂವರೆ ತಿಂಗಳು ಮಳೆ ಸುರಿದು ಬೆಂಗಳೂರು ಸಂಪೂರ್ಣ ಎಣ್ಣೆ ಸ್ನಾನ ಅಂದರೆ ಅಭ್ಯಂಜನ ಮಾಡಿಕೊಂಡ ಹಾಗೆ ನಳನಲಿಸುತ್ತದೆ.

ಮುಂಗಾರು ಒಂದೆರೆಡು ದಿನ, ವಾರ ಸುರಿಯುತ್ತೆ ನೋಡಿ, ನಮ್ಮೂರಿಗೆ ಬೇರೆ ಊರಿಂದ ಬಂದಿದ್ದ ಹಕ್ಕಿ ಪಕ್ಕಿಗಳು ಪರಾರಿ ಆಗಿಬಿಡುತ್ತೆ! ಮತ್ತೊಂದು ಮುಂಗಾರಿಗೆ ಆಸೆಯಿಂದ ಕಾಯುತ್ತದೆ. ಅದೇ ಕಾಯುವಿಕೆ ಎಲ್ಲರಲ್ಲೂ ಹುಟ್ಟುಹಾಕಿದೆ.....!

ಮುಂಗಾರು ಮುಗಿಯುವ ಸ್ವಲ್ಪ ಮೊದಲು ಕೆರೆ ತುಂಬಿರುತ್ತದೆ, ಎಲ್ಲೆಲ್ಲೂ ತಂಪು ಅಂದರೆ ತಂಪು. ಕೆರೆ ಅಂಚಿನ ಮರಗಿಡಗಳು ಹಸಿರು ಹೊದ್ದು ಮನ ಸೆಳೆಯುತ್ತವೆ. ಕೆರೆ ಕೋಡಿ ಹರಿಯುವುದೂ ಉಂಟು. ಕೆರೆ ಕೋಡಿ ಹರಿಯುವ ನೋಟವೇ ಒಂದು ಆಪ್ತ ಅನುಭವ. ಮಣ್ಣು ಮಿಶ್ರಿತ ಕೆಂಪುನೀರು ಏರಿಯನ್ನು ದಾಟಿ ಹೊರ ಹೋಗುವ ದೃಶ್ಯ ತವರಿನಿಂದ ಗಂಡನ ಮನೆಗೆ ಹೊರಟ ಹೆಣ್ಣಿನ ನೆನಪನ್ನು ತರುತ್ತದೆ ಎಂದು ನನ್ನ ಕವಿಮಿತ್ರರು ಹೇಳುತ್ತಾರೆ! ಎಂತಹ ಒಳ್ಳೆಯ ಉಪಮೆ ಅನಿಸುತ್ತದೆ. ಮುಂಗಾರಿನ ಸೊಬಗು ಒಂದು ರೀತಿಯದಾದರೆ ಹಿಂಗಾರಿನ ಸೊಬಗು ಮತ್ತೊಂದು ಬಗೆ. ಹಿಂಗಾರಿನ ಬಗ್ಗೆ ಮುಂದೆ ಯಾವಾಗಲಾದರೂ ಬಿಡುವು ಮಾಡಿಕೊಂಡು ಭೇಟಿಸಿ, ಆಗ ಹೇಳುತ್ತೇನೆ.

■

# ಮಳೆ ಬಂತು ಮಳೆ

**ಬೇಲೂರು ರಾಮಮೂರ್ತಿ**

ಸೋಮುಗೂ ಮಳೆಗೂ ಅವಿನಾಭಾವ ಸಂಬಂಧ. ಅವನ ಬದುಕುತಿರುವು ಪಡೆದಿದ್ದೇ ಒಂದು ಮಳೆಗಾಲದ ದಿನ. ಈಗ ಒಂದೈವತ್ತು ವರ್ಷಗಳ ಹಿಂದಿನ ದಿನಗಳನ್ನು ನೆನಪಿಸಿಕೊಂಡರೆ ಮಲೆನಾಡಿನಲ್ಲಿ ಮಳೆ ಷುರುವಾಯ್ತು ಅಂದರೆ ಜನಜೀವನವೆಲ್ಲಾ ಏರುಪೇರು. ಸ್ವಾತಿ ಮಳೆಯನ್ನು ಮುತ್ತಿನ ಮಳೆ ಅನ್ನೋರು. ಚಿತ್ತೆ ಮಳೆಯನ್ನು ಕುರುಡು ಚಿತ್ತೆ ಅನ್ನೋರು. ಏಕೆಂದರೆ ಚಿತ್ತೆ ಮಳೆ ಷುರುವಾದರೆ ಅದು ನಿಲ್ಲುತ್ತಲೇ ಇರಲಿಲ್ಲ. ಸ್ವಲ್ಪ ಹೊತ್ತು ತುಂತುರು, ನಂತರ ತುಸು ಜೋರು, ಇನ್ನೂ ಸ್ವಲ್ಪ ಹೊತ್ತಾದ ಮೇಲೆ ಜೋರು, ಹೀಗೆ ಸುರಿಯುತ್ತಲೇ ಇರುತ್ತಿತ್ತು. ಆದರೆ ಮಳೆ ಬರ್‍ತಿದೆ ಅಂದರೆ ಯಾವ ಕೆಲಸವೂ ನಿಲ್ಲುತ್ತಿರಲಿಲ್ಲ. ಕೊಡೆ ಹಿಡಿದುಕೊಂಡೋ, ಗೋಣಿ ಚೀಲದಲ್ಲಿ ಮಾಡಿದ ರೈನ್‌ಕೋಟಿನಂತಹ ಗೊರಸು ಎನ್ನೋ ವಸ್ತುವನ್ನು ತಲೆಯ ಮೇಲೆ ಹಾಕಿಕೊಂಡು ಓಡಾಡಿಕೊಂಡು ಕೆಲಸ ಮಾಡೋರು. ಶಾಲೆಗೆ ಹೋಗೋ ಮಕ್ಕಳಿಗೆ ಬಹಳ ಕಷ್ಟವಿತ್ತು. ತಾಪತ್ರಯ ಅಂದರೆ ಬಟ್ಟೆಗಳು ಒಣಗುತ್ತಿರಲಿಲ್ಲ, ಹಂಡೆ ಒಲೆಗೆ ಒಣಗಿದ ಸೌದೆ ಸಿಗುತ್ತಿರಲಿಲ್ಲ. ಆಗಿನ ಕಾಲದಲ್ಲಿ ಮನೇಲಿ ಒಂದೇ ಛತ್ರಿ ಇರೋದು, ಮಕ್ಕಳು ಹತ್ತಾರು. ಒಂದೊಂದು ಮಗೂಗೆ ಒಂದೊಂದು ಛತ್ರಿ ಅಂತಕೊಂಡ್ಕೊಂಡು ಇಟ್ಕೊಳೋ ಕಾಲ ಅದಾಗಿರಲಿಲ್ಲ.



ಸೋಮುನೂ ಇದೇರೀತಿ ಬೆಳೆದಿದ್ದ. ಅವನು ಸ್ಕೂಲಿಗೆ ಹೋಗುವಾಗ ಬಟ್ಟೆ, ಪುಸ್ತಕದ ಬ್ಯಾಗು ನೆನೆಸಿಕೊಂಡು ಹೋಗದ ದಿನವೇ ಇರಲಿಲ್ಲ. ನಾನು ಶಾಲೆಯಲ್ಲಿ ಓದಿದ ದಿನಗಳನ್ನು ನಾನು ನೆನೆಸ್ಕೊತಾ ಇರ್‍ತೀನಿ, ಯಾಕೆಂದರೆ ನಾನು ಶಾಲೆಗೆ ಹೋಗ್ತಾ ಇದ್ದದ್ದೇ ಮಳೇಲಿ ನೆನ್ಕೊಂಡು ಅಂತ ತನ್ನ ಜೋಕಿಗೆ ತಾನೇ ನಗ್ತಿದ್ದ. ಆದರೆ ಮಳೆಯನ್ನು ನಾನು ನನ್ನ ಉಸಿರು ಇರೋವರೆಗೂ ಮರೆಯೋಲ್ಲ. ಅವತ್ತು ನಾನು ನನ್ನ ತಂದೆಯ ಮಾತು ಕೇಳದೇ ಹೋಗಿದ್ದರೆ, ಮಳೆಗೆ ಹೆದರಿದ್ದರೆ ಅಂತ ಆ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾನೆ.

ಮದುವೆ ಮಾಡ್ಕೊಳೋ ಅಂತ ಸೋಮು ಅಪ್ಪ ಎಷ್ಟು ಹೇಳಿದರೂ ಈಗ ಬೇಡ, ಇನ್ನೊಂದು ವರ್ಷ ಕಳೀಲಿ ಅಂತ ತಳ್ಕೊಂಡೇ ಬಂದಿದ್ದ ಮಗನನ್ನು ಹಳ್ಳಕ್ಕೆ ತಳ್ಳಲು ಅವರ ಅಪ್ಪ ಕಾಯುತ್ತಾ ಇದ್ದು ಅದಕ್ಕೊಂದು ಉಪಾಯ ಮಾಡಿದರು. ಒಂದು ದಿನ ಅವರು ಸೋಮುನ ಕರೆದು ಒಂದು ಕವರ್ ಅವನ ಕೈಗೆ ಕೊಟ್ಟುಇದನ್ನು ಶೇಖರಪ್ಪನವರಿಗೆ ಕೊಟ್ಟುಬಾ ನಾನು ಕೊಟ್ಟೆ ಅಂತ ಹೇಳಿ ಅವರು ಏನು ಹೇಳ್ತಾರೆ ಅಂತ ಕೇಳ್ಕೊಂಡು ಬಾ ಅಂತ ಹೇಳಿದರು. ಶೇಖರಪ್ಪನವರ ಮನೆ ಇದ್ದುದು ಮಾವಿನ ತೋಪಿನಿಂದ ಆಚೆಗೆ. ಸುಮಾರು ಮೂರು ಕಿಲೋಮೀಟರು ನಡೆಯಬೇಕಿತ್ತು. ಆಗಿನ ಕಾಲದಲ್ಲಿ

ಸೈಕಲ್ಲೇ ಅಪರೂಪ ಅಂದ್ರೆ ಇನ್ನು ಸ್ಕೂಟರು ಎಲ್ಲಿಂದ ಬರಬೇಕು. ಮಳೆ ಬೇರೆ ಬರೋ ಹಾಗಿತ್ತು. ಸರಿ ಹೀಗೆ ಹೋಗಿ ಹಾಗೆ ಬೇಗ ಬಂದು ಬಿಡೋಣ ಅಂತ ಸೋಮು ನಡೆದೇ ಹೊರಟ. ಸ್ವಲ್ಪದೂರ ಹೋದನೋ ಇಲ್ಲವೋ ಸಣ್ಣಗೆ ಮಳೆ ಷುರುವಾಯಿತು. ಮೂರು ಕಿಲೋಮೀಟರು ದಾರಿಯಲ್ಲಿ ಎಲ್ಲೂ ನಿಲ್ಲುವಂತಿರಲಿಲ್ಲ. ಮರದ ಕೆಳಗೆ ನಿಂತರೆ ಮಳೆ ಹನಿಗಿಂತ ಜೋರು ಹನಿಗಳು ಬೀಳುತ್ತಿತ್ತು. ಸರಿ ಬೇಗ ಬೇಗ ನಡೆದೇ ಹೋಗೋಣ ಅಂತ ಅಪ್ಪಕೊಟ್ಟ ಕವರನ್ನು ಜೋಪಾನ ಮಾಡಿಕೊಂಡು ಹೊರಟ.

ಶೇಖರಪ್ಪನವರ ಮನೆಗೆ ಹೋಗೋ ಹೊತ್ತಿಗೆ ಚನ್ನಾಗಿ ನೆಂದೇ ಹೋಗಿದ್ದ. ಮನೆ ಬಾಗಿಲು ತಟ್ಟಿದಾಗ ತೆರೆದದ್ದು ಸುಂದರ ತರುಣಿ. ಸೋಮು ಶೇಖರಪ್ಪನವರು ಇದಾರಾ, ಅವರಿಗೆ ಈ ಕಾಗದ ಕೊಡಬೇಕಾಗಿತ್ತು ನಮ್ಮ ತಂದೆ ಕೊಟ್ಟಿದಾರೆ ಅಂದ. ಹುಡುಗಿ ಪಿಳಿಪಿಳಿ ಕಣ್ಣುಬಿಟ್ಟಳು. ಕುತ್ತಿಗೆ ತಿರುಗಿಸಿ "ಹೌದಾ ಮಳೇಲೇ ಹೋಗಿ ಕೊಟ್ಟುಬಾ ಅಂದ್ರಾ, ಅಷ್ಟೊಂದು ಅರ್ಜಂಟಾ" ಅಂತ ಕೇಳಿದಳು."ಇಲ್ಲಾ ನಾನು ಬರ್ತಿದ್ದೆ ಆಗ ಮಳೆ ಬಂತು ಅಷ್ಟೇ" ಅಂದ. "ಹೌದಾ ಕೊಡಿ ಕಾಗದನಾ" ಅಂದು ಕೈ ನೀಡಿದಳು. "ನೀವು ಶೇಖರಪ್ಪನಾ" ಅಂತ ಕೇಳಿದ. ಹುಡುಗಿ ತನ್ನ ತಲೆ ಮೇಲೆ ತಾನೇ ಮೆತ್ತಗೆ ತಟ್ಟಿಕೊಂಡು "ಅಯ್ಯೋ ನನ್ನನ್ನು ನೋಡಿದರೆ ಶೇಖರಪ್ಪನ ಹಾಗೆ ಕಾಣಿಸ್ತೀನಾ, ನಾನು ಅವರ ಮಗಳು ಕೊಡ್ರೀ ಕಾಗದಾನಾ" ಅಂದು ಸೋಮು ಕೈನಿಂದ ಕಾಗದಕಿತ್ಕೊಂಡು "ಅಯ್ಯೋ ಬನ್ರೀ ಒಳಗೆ ಎಷ್ಟು ನೆಂದಿದೀರ ಟವಲು ಕೊಡ್ತೀನಿ ಒರೆಸ್ಕೊಳಿ ಬಿಸಿಬಿಸಿ ಕಾಫಿಕೊಡ್ತೀನಿ" ಅಂದು ಕಾಗದದ ಸಮೇತ ಸೋಮುನ ಮನೆಯೊಳಗೆ ಎಳೆದುಕೊಂಡಳು. ಟವಲು ತಂದುಕೊಟ್ಟರೂ ಒರೆಸಿಕೊಳ್ಳದೇ ಸುಮ್ಮನೇ ನೋಡುತ್ತಾ ನಿಂತ ಸೋಮುನ ನೋಡಿ "ಅಯ್ಯೋ ಬೇಗ ಒರೆಸ್ಕೊಳ್ರೀ ಇಲ್ಲದಿದ್ರೆ ನೆಗಡಿ ಆಗುತ್ತೆ" ಅಂದಾಗ ಸೋಮು ತಕ್ಷಣ ತಲೆಗೂದಲನ್ನು ತಿಕ್ಕಿತಿಕ್ಕಿ ಒರೆಸಿಕೊಂಡ. ಯಾವುದೋ ಹುಡುಗಿ, ತರುಣಿ, ಹೀಗೆ ಹತ್ತಿರ ನಿಂತುಟವಲು ಕೊಟ್ಟು ನಾನು ಒರೆಸಿಕೊಳ್ಳೋದನ್ನು ಹೀಗೆ ನೋಡ್ತಾ ನಿಂತಿರೋದು ಸೋಮುಗೆ ಇರಸು ಮುರುಸಾಯಿತು. ಕಾಗದ ಕೊಟ್ಟು ಬಾ ಅಂದ್ರೆ ಕಾರುಬಾರು ಮಾಡ್ಕೊಂಡು ಬಂದಿದೀಯ ಅಂತ ತಂದೆ ಬೈಯಬಹುದು ಅಂತ ಭಯವಾಗಿ ಹುಡುಗಿ ಕಡೆ ಹೆಚ್ಚು ನೋಡಲಿಲ್ಲ. ಸೋಮು ಮೆತ್ತಗೆ "ಶೇಖರಪ್ಪನವರು ಇಲ್ವಾ" ಅಂತ ಕೇಳಿದ. "ಅಯ್ಯೋ ಕೂತ್ಕೊಳ್ರೀ ಅವರು ಈಗ ಬರ್ತಾರೆ ಅಷ್ಟರಲ್ಲಿ ಕಾಫಿ ಕೊಡ್ತೀನಿ ಕುಡೀತಾ ಇರಿ" ಅಂದು ಒಳಗೆ ಹೋದಳು.

ಕಾಫಿ ತಂದ ಹುಡುಗಿ ತನ್ನ ಕೈ ಬೆರಳುಗಳನ್ನು ಸೋಮು ಕೈ ಬೆರಳುಗಳಿಗೆ ಸೋಕೋ ಹಾಗೆ ಕೊಟ್ಟು "ಬಿಸಿ ಇದೆ ಬಿಗಿಯಾಗಿ ಹಿಡ್ಕೊಳಿ" ಅಂದು ಸೋಮು ಹತ್ತಿರನೇ ಕೂತ್ಕೊಂಡ್ಳು. ಕಾಫಿ ಕುಡಿಯುತ್ತಾ ಸೋಮು "ನೀವು ಅವರ ಮಗಳಾ" ಅಂತ ಕೇಳಿದ. "ಇಲ್ಲ ಅವರ ಮನೆಗೆಲದ ಮಂಗಮ್ಮ" ಎಂದು ಹುಸಿಮುನಿಸು ತೋರಿ "ಕೇಳೋದು ನೋಡು, ಹೌದು ಅವರ ಮಗಳೇ, ಹೆಸರು ಸೌಮ್ಯ ಡಿಗ್ರಿ ಆಗಿದೆ. ಅಪ್ಪ ಅಮ್ಮ ಇಬ್ಬರೂ ಅವರ ಸ್ನೇಹಿತರ ಮನೆಗೆ ಹೋಗಿದಾರೆ ಇನ್ನೇನು ಬಂದು ಬಿಡ್ತಾರೆ ನಿಮ್ಮ ಹೆಸರು ಏನು"ಅಂತ ಕೇಳಿದಳು."ನಾನು ಸೋಮುಸುಂದರ್, ಎಲ್ಲರೂ ನನ್ನನ್ನು ಸೋಮು ಅಂತಕರೀತಾರೆ. ನಮ್ಮ ತಂದೆಗೆ ಒಬ್ಬನೇ ಮಗ. ಒಂದು ದೊಡ್ಡ ಕಂಪನಿಯಲ್ಲಿ ಅಕೌಂಟೆಂಟ್ ಆಗಿದೀನಿ" ಅಂದ. ಹೊರಗೆ ಮಳೆ ಜೋರಾಗಿ ಹುಯ್ಯುತ್ತಿತ್ತು. ಆಗಾಗ ಗುಡುಗು ಸಿಡಿಲು ಸಹ ಬರುತ್ತಿತ್ತು. ಸೋಮುಗೆ ಅಲ್ಲಿಂದ ಬೇಗ ಹೋಗಬೇಕು ಅಂದರೂ ಸಾಧ್ಯವಾಗುತ್ತಿರಲಿಲ್ಲ. "ನಿಮಗೆ ಯಾವ ಬಜ್ಜಿ ಇಷ್ಟ ಅಂತ ಸೌಮ್ಯ ಕೇಳಿದಾಗ ಸೋಮು ನನಗೆ ಯಾವ ಬಜ್ಜಿಯೂ ಇಷ್ಟ ಇಲ್ಲ ಆದರೆ ನಮ್ಮಜ್ಜಿ ಇಷ್ಟ" ಅಂದು ಇದೊಂದು

ದೊಡ್ಡ ಜೋಕು ಅನ್ನುವಂತೆ ನಕ್ಕ. "ಟೈಂ ಪಾಸ್‌ಗೆ ಚನ್ನಾಗಿರುತ್ತೆ ಇರಿ ಬಜ್ಜಿ ಮಾಡ್ಕೊಂಡು ಬರ್ತೀನಿ" ಅಂದು ಒಳಗೆ ಹೋದ ಸೌಮ್ಯ ಹದಿನೈದು ನಿಮಿಷ ಬಿಟ್ಟು ತಟ್ಟೆಯಲ್ಲಿ ಬಿಸಿಬಿಸಿ ಬಾಳೆಕಾಯಿ ಬಜ್ಜಿ ಮಾಡ್ಕೊಂಡು ಬಂದು ಸೋಮುಗೆ ಕೊಟ್ಟು "ತಗೊಳಿ ನಿಮ್ಮಜ್ಜಿನ ನೆನಸಿಕೊಂಡು ತಿನ್ನಿ"ಅಂದು ನಕ್ಕಳು. "ಹೋಗ್ಲಿ ಅಂತ ನಿಮಗೋಸ್ಕರ ತಿನ್ತಿದೀನಿ" ಅಂದ. ಸೋಮುಗೆ ಇಬ್ಬಗೆಯ ಚಿಂತೆ. ಇಲ್ಲಿಂದ ಆದಷ್ಟು ಬೇಗ ಹೊರಟು ಹೋಗಬೇಕು ಅನ್ನೋ ಆತುರ. ಆದರೆ ಈ ಹುಡುಗಿಯ ಜೊತೆ ಇನ್ನಷ್ಟು ಹೊತ್ತು ಮಾತಾಡ್ತಾ ಕೂತಿರಬೇಕು ಅಂತ ಮನದಾಸೆ. ಸ್ವಲ್ಪ ಮಳೆ ಕಡಿಮೆ ಆಯಿತೋ ಇಲ್ಲವೋ ಸೋಮು ಆತುರದಿಂದ ಹೊರಟು ನಾನು ಬರ್ತೀನಿ ನಿಮ್ಮ ತಂದೆಗೆ ಈ ಕಾಗದ ಕೊಟ್ಟುಬಿಡಿ ಅಂದು ಮನೆಯಿಂದ ಆಚೆ ಬಂದ. ಸೌಮ್ಯ "ರೀ ಮಳೆ ಇನ್ನೂ ಬರ್ತಿದೆ ಕಣ್ರೀ" ಅಂತ ಹೇಳುತ್ತಿದ್ದರೂ ಹೊರಟೇ ಬಿಟ್ಟ.

ಮರುದಿನ ಆಫೀಸಿನಲ್ಲಿ ಈ ವಿಚಾರ ತಿಳಿಸಿದಾಗ ಎಲ್ಲರೂ ಥತ್ ದರಿದ್ರದವನೇ ಎಂಥಾ ಗೋಲ್ಡನ್ ಛಾನ್ಸ್ ಮಿಸ್ ಮಾಡ್ಕೊಂಡ್ಯಲ್ಲೋ ನಮಗಾದರೂ ಅಂಥಾ ಛಾನ್ಸ್ ಸಿಗಬಾರದಿತ್ತಾ ಅಂತ ಹೊಟ್ಟೆ ಉರಿದುಕೊಂಡರು. ಸೋಮುಗೆ ಮರೆತೇನೆಂದರೆ ಮರೆಯಲಿ ಹ್ಯಾಂಗೆ ಎನ್ನುವಂತೆ ಮಳೆ, ನೆನೆದುಕೊಂಡು ಹೋಗಿದ್ದು, ಬಾಗಿಲು ತೆಗೆದ ತರುಣಿ, ಮಾತುಕತೆ, ಬಜ್ಜಿ ಎಲ್ಲವೂ ಪದೇ ಪದೇ ನೆನಪಾಗುತ್ತಿತ್ತು. ಒಂದು ವಾರ ಹೋದ ಮೇಲೆ ಅಪ್ಪನ ಬಳಿ ಹೋಗಿ ಅಪ್ಪಾ ನೀನು ಕೊಟ್ಟಕಾಗದವನ್ನು ಶೇಖರಪ್ಪನವರಿಗೆ ಕೊಡೋಕಾಗ್ಲಿಲ್ಲ, ಅವರ ಮಗಳ ಕೈಗೆ ಕೊಟ್ಟು ಬಂದಿದ್ದೆ, ಅದು ಅವರಿಗೆ ತಲುಪಿತಂತಾ ಅಂತ ಕೇಳಿದ. ಗೊತ್ತಿಲ್ಲ ಕಣೋ ಅವರು ಏನೂ ಹೇಳೇ ಇಲ್ಲ ಅಂದಿದ್ದಕ್ಕೆ ನಾನು ಮತ್ತೆ ಹೋಗಿ ಕೇಳಿಕೊಂಡು ಬರ್ಲಾ ಅಂತ ಕೇಳಿದ್ದಕ್ಕೆ ಹೋಗಿ ಬಾ ಅಂದರು. ಹೀಗೆ ಸೋಮು ಒಂದಲ್ಲ ಒಂದು ನೆಪ ಹಾಕಿಕೊಂಡು ಶೇಖರಪ್ಪನವರ ಮನೆಗೆ ಹೋಗಿ ಸೌಮ್ಯಳನ್ನು ಮಾತಾಡಿಸಿಕೊಂಡು ಬರ್ತಿದ್ದ. ಇದನ್ನು ಗಮನಿಸಿದ ಅವರಪ್ಪ ಒಂದು ದಿನ ಏನೋ ನೀನು ನಿನ್ನ ಮದುವೆ ಬಗೆಗೆ ಏನೂ ಹೇಳ್ಲೇ ಇಲ್ಲ ಅಂತ ಕೇಳಿದ್ದಕ್ಕೆ ಸೋಮು ನೀವು ಹೇಳಿದಂತೆ ಆಗಲಿ ಅಂದ. ಶೇಖರಪ್ಪನವರ ಮಗಳು ಸೌಮ್ಯ ಓಕೆನೇನೋ ಅಂತ ಕೇಳಿದ್ದಕ್ಕೆ ಸೋಮು ತಲೆಕೆರೆಯುತ್ತಾ ನೀವು ಹೇಗೆ ಹೇಳಿದರೆ ಹಾಗೆ ಅಂದ. ಶೇಖರಪ್ಪ ಕಳ್ಳ ಬಡ್ಡೀಮಗ ಅಂದ್ಕೊಂಡು ಶೇಖರಪ್ಪನವರ ಜೊತೆ ಮಾತಾಡಿ ನಮ್ಮ ಐಡಿಯಾ ಕೆಲಸ ಮಾಡ್ತು. ಇನ್ನೇನು ವಾಲಗ ಊದಿಸಿ ಬಿಡೋಣ ಅಂದರು. ಸೋಮು ನಿಶ್ಚಿತಾರ್ಥದ ದಿನಾನೂ ಮಳೆ, ಮದುವೆಯ ದಿನಾನೂ ಮಳೆ.

ಹೀಗೆ ಸೋಮು ಬಾಳಿನಲ್ಲಿ ಮಳೆ ಮಹತ್ತರವಾದ ಪಾತ್ರ ವಹಿಸಿದೆ. ಈಗಲೂ ಸೋಮು ಮಳೆ ಅಂತ ಅವತ್ತು ನಾನು ನಮ್ಮಪ್ಪನ ಮಾತು ಕೇಳದೇ ಹೋಗಿದ್ದರೆ ನನ್ನ ಜೀವನದಲ್ಲಿ ಬಹು ದೊಡ್ಡ ಲಾಸ್ ಆಗ್ತಿತ್ತು ಅಂದು ಸಂತೋಷಪಟ್ಟರೆ ಸೋಮಿ ಇದೆಲ್ಲಾ ನಮ್ಮಪ್ಪ ನಿಮ್ಮಪ್ಪನ ನಾಟಕ ಅಂತಗೊತ್ತಿದ್ದರೆ ಅವತ್ತು ನೀವು ಮಳೇಲಿ ನೆನ್ಕೊಂಡು ಬಂದಾಗ ನಾನು ಬಾಗಿಲು ತೆಗಿತಾನೇ ಇರ್ಲಿಲ್ಲ. ಬಾಗಿಲು ತೆಗೆದಿದ್ರಿಂದ ನನಗೆ ಬೇರೆ ಅವಕಾಶನೇ ಇಲ್ಲದ ಹಾಗಾಯ್ತು ಅಂದು ಕಣ್ಣು ಹೊಡೆದು ಮಳೆ ಮಳೆ ಮಳೆ ಮಳೆ ಒಲವಿನಾ ಸುರಿಮಳೆ ಎಂದು ಹಾಡುತ್ತಾ ಸೋಮುನ ತಬ್ಬುತ್ತಾಳೆ. ಮಳೆಯಿಂದ ನಮ್ಮ ಮನೆಯಲ್ಲಿ ಪ್ರೀತಿಯ ಸುರಿಮಳೆ, ಆನಂದದ ಸೋನೆಮಳೆ ನಿರಂತರವಾಗಿದೆ ಅಲ್ವೇನ್ರೀ ಅಂತಾಳೆ. ಈಗಲೂ ಜೋರುಮಳೆ ಬಂತೂ ಅಂದ್ರೆ ಸೋಮು ಸೋಮಿ ಇಬ್ಬರೂ ಕಿಟಕಿಯಿಂದ ಆಚೆ ದೃಷ್ಟಿ ಹಾಯಿಸಿ ಆಗಸದಿಂದ ಸುರಿಯುತ್ತಿರುವ ಮಳೆಯನ್ನೇ ನೋಡುತ್ತಾ ಕಳೆದು ಹೋಗಿಬಿಡ್ತಾರೆ. ■

# ಕನ್ನಡ ಸಾಹಿತ್ಯ ಲೋಕದಲ್ಲಿ ಮಳೆ

**ನಾರಾಯಣ ರಾಯಚೂರು**

ಮಳೆ ಎನ್ನುವುದು ಕೇವಲ ಕಾವ್ಯದ ವಸ್ತುವಾಗಿ ಮಾತ್ರವಲ್ಲದೆ, ಹರಟೆ ಮತ್ತು ವಿನೋದಕ್ಕೂ ಸಾಕ್ಷಿಯಾಗಿದೆ. ಸಾಹಿತಿಗಳು ಮತ್ತು ಜನಪದರು ಮಳೆಯನ್ನು ಹಾಸ್ಯಮಯವಾಗಿ ಕಂಡ ಕೆಲವು ಉದಾಹರಣೆಗಳು ಇಲ್ಲಿವೆ:

**1. ಬಿ.ಎಂ. ಶ್ರೀಕಂಠಯ್ಯ (ಬಿ.ಎಂ.ಶ್ರೀ) ಅವರ ಪ್ರಸಂಗ**

ಕನ್ನಡದ ಹೆಸರಾಂತ ಸಾಹಿತಿ ಬಿ.ಎಂ.ಶ್ರೀ ಅವರು ಒಮ್ಮೆ ಮಳೆಯಲ್ಲಿ ನೆನೆಯುತ್ತಾ ಬರುತ್ತಿದ್ದರಂತೆ. ಅದನ್ನು ನೋಡಿದ ಮಿತ್ರರೊಬ್ಬರು, "ಏನ್ ಸಾರ್, ಇಷ್ಟು ದೊಡ್ಡ ಸಾಹಿತಿಗಳು ಹೀಗೆ ಮಳೆಯಲ್ಲಿ ನೆನೆಯುತ್ತಿದ್ದೀರಲ್ಲ?" ಎಂದು ಕೇಳಿದಾಗ, ಶ್ರೀಯವರು ನಗುತ್ತಾ, "ಮಳೆ ಅಂದ್ರೆ ಆಕಾಶದಿಂದ ಬೀಳುವ ಕವಿತೆ ಇದ್ದಂತೆ, ಆ ಕವಿತೆಯ ಸಾಲುಗಳನ್ನು ಮೈಮೇಲೆ ಅಂಟಿಸಿಕೊಳ್ಳುತ್ತಿದ್ದೇನೆ ಅಷ್ಟೇ!" ಎಂದು ಚಮತ್ಕಾರವಾಗಿ ಉತ್ತರಿಸಿದ್ದರಂತೆ.

**2. ಕವಿ ಮತ್ತು ಛತ್ರಿ (ಹರಟೆ ಪ್ರಸಂಗ)**

ಕವಿಗಳ ಗೋಷ್ಠಿಯೊಂದರಲ್ಲಿ ಒಬ್ಬ ಕವಿ ಮಳೆಯ ಬಗ್ಗೆ ಸುದೀರ್ಘವಾದ ಕವಿತೆ ಓದುತ್ತಿದ್ದರಂತೆ. ಹೊರಗೆ ನಿಜವಾಗಿಯೂ ಮಳೆ ಸುರಿಯುತ್ತಿತ್ತು. ಕವಿತೆ ಮುಗಿಸಿ ಹೊರಬಂದಾಗ ಅವರ ಛತ್ರಿ ಕಾಣೆಯಾಗಿತ್ತು. ಪಕ್ಕದಲ್ಲಿದ್ದ ಗೆಳೆಯ ಕೇಳಿದನಂತೆ, "ಏನ್ ಸಾರ್, ಮಳೆ ಬಗ್ಗೆ ಅಷ್ಟು ಅದ್ಭುತವಾಗಿ ಬರೆದ್ರಿ, ಈಗ ಮಳೆಯಲ್ಲೇ ಹೋಗ್ತಿದ್ದೀರಲ್ಲ?". ಅದಕ್ಕೆ ಆ ಕವಿ, "ನನ್ನ ಕವಿತೆ ಕೇಳಿ ಮೋಡಗಳಿಗೆ ಎಷ್ಟು ಸಂತೋಷ ಆಯ್ತು ಅಂದ್ರೆ, ನನ್ನ ಛತ್ರಿಯನ್ನೇ ನೆನಪಿನ ಕಾಣಿಕೆಯಾಗಿ ಇಟ್ಟುಕೊಂಡುಬಿಟ್ಟವೆ!" ಎಂದರಂತೆ.

**3. ಜಿ.ಪಿ. ರಾಜರತ್ನಂ ಅವರ ಶೈಲಿಯ ಹಾಸ್ಯ**

ರಾಜರತ್ನಂ ಅವರ 'ರತ್ನನ ಪದಗಳು' ಶೈಲಿಯಲ್ಲಿ ಒಂದು ಪುಟ್ಟ ಹಾಸ್ಯ ಹೀಗಿದೆ:

ಒಬ್ಬ ಕುಡುಕ ಮಳೆಯಲ್ಲಿ ಒದ್ದೆಯಾಗಿ ನಿಂತಿದ್ದಾಗ ಗೆಳೆಯ ಕೇಳಿದನಂತೆ, "ಯಾಕೋ ಮಳೆಯಲ್ಲಿ ನಿಂತಿದ್ದೀಯಾ?" ಎಂದು. ಅದಕ್ಕೆ ಅವನು, "ನೋಡೋ, ಈ ಮಳೆ ಹನಿಗಳೆಲ್ಲ ಸೋಡಾ ತರಹ ಕಾಣ್ತಿವೆ, ಆಕಾಶದಿಂದ ಯಾರಾದ್ರೂ ವಿಸ್ಕಿ ಮಳೆ ಸುರಿಸ್ತಾರಾ ಅಂತ ಕಾಯ್ತಿದ್ದೀನಿ!" ಅಂದನಂತೆ.

**4. ಸಾಹಿತಿ ಮತ್ತು ಪ್ರವಾಹ**

ಒಬ್ಬ ಸಾಹಿತಿಯ ಮನೆಗೆ ಮಳೆ ನೀರು ನುಗ್ಗಿತ್ತು. ಅವರ ಕೃತಿಗಳೆಲ್ಲ ನೀರಿನಲ್ಲಿ ತೇಲುತ್ತಿದ್ದವು. ಅದನ್ನು ನೋಡಿದ ನೆರೆಯವರು ಸಂಕಟ ಪಡುತ್ತಿದ್ದರೆ, ಸಾಹಿತಿ ಮಾತ್ರ ಶಾಂತವಾಗಿ ನಗುತ್ತಾ ಅಂದರಂತೆ: "ಪರವಾಗಿಲ್ಲ ಬಿಡಿ, ನನ್ನ ಸಾಹಿತ್ಯಕ್ಕೆ ಅಷ್ಟು ಶಕ್ತಿ ಇದೆ ಅಂತ ಈಗ ಗೊತ್ತಾಯ್ತು; ಅವು ಭೂಮಿ ಮೇಲೆ ಅಷ್ಟೇ ಅಲ್ಲ, ನೀರಿನ ಮೇಲೂ ಪ್ರಭಾವ ಬೀರುತ್ತಿವೆ (ತೇಲುತ್ತಿವೆ)!"

**5. ಜನಪದ ಶೈಲಿಯ ತುಣುಕು**

ಹಳ್ಳಿಗಳಲ್ಲಿ ಮಳೆ ಬಾರದೇ ಇದ್ದಾಗ ಮಾಡುವ ಪ್ರಾರ್ಥನೆಯಲ್ಲಿ ಒಂದು ತಮಾಷೆಯ ಮಾತಿದೆ:

"ದೇವ್ರೇ, ರೈತರಿಗೆ ಬೆಳೆ ಬರಲಿ ಅಂತ ಮಳೆ ಸುರಿಸು ಅಂದ್ರೆ, ನೀನು ಕೊಡೆ (umbrella) ಮಾರುವವರಿಗೆ ವ್ಯಾಪಾರ ಆಗ್ಲಿ ಅಂತ ಇಷ್ಟು ಜೋರಾಗಿ ಮಳೆ ಸುರಿಸ್ತಿದ್ದೀಯಲ್ಲಪ್ಪಾ!" ಇದು ಮಳೆಯ ಅತಿಯಾದ ಆರ್ಭಟವನ್ನು ವ್ಯಂಗ್ಯ ಮಾಡುವ ರೀತಿ. ■

# ಬಂಗಾಡಿಯಲ್ಲಿ ಮುಂಗಾರು

**✍ಶಿವಕುಮಾರ್**

ಎರಡು ದಶಕಗಳ ಹಿಂದಿನ ಮಾತು. ಒಮ್ಮೆ ಮಿತ್ರ ಶೇಷಗಿರಿ ಮನೆಗೆ ಬಂದು, " ಬಂಗಾಡಿಯಲ್ಲಿರುವ ನಮ್ಮ ಅಕ್ಕನ ಮಗ ಶರತ್ ಒಮ್ಮೆ ಮನೆಗೆ ಬಂದು ಹೋಗು ಅಂತ ದುಂಬಾಲು ಬಿದ್ದಿದ್ದಾನೆ. ನೀವೂ ಬಂದರೆ ನಿಮ್ಮ ಕಾರಿನಲ್ಲೇ ಅಲ್ಲಿಗೆ ಹೋಗಿಬರಬಹುದು" ಅಂತ ಒಂದು ಸಲಹೆಯನ್ನು ನನ್ನ ಮುಂದಿಟ್ಟರು. "ಬಂಗಾಡಿ? ಎಲ್ಲಿ ಬರುತ್ತೆ ಅದು ?" ನಾನು ಕೇಳಿದೆ "ಧರ್ಮಸ್ಥಳಕ್ಕೆ ತುಂಬ ಹತ್ತಿರ. ಶಿರಾಡಿ ಘಾಟ್ ಮೂಲಕ ಧರ್ಮಸ್ಥಳ ಸೇರಿ ಅಲ್ಲಿಂದ ಹದಿನೈದು ಕಿಲೋಮೀಟರ್ ಹೋದರೆ ಬೆಳ್ತಂಗಡಿ ಸಿಗುತ್ತೆ. ಅಲ್ಲಿ ನಮ್ಮ ನೆಂಟರಿದ್ದಾರೆ. ಶರತ್ ಅಲ್ಲಿಗೇ ಬಂದು ನಮ್ಮನ್ನು ಬಂಗಾಡಿಗೆ ಕರೆದೊಯ್ಯುತ್ತೇನೆಂದು ಹೇಳಿದ್ದಾನೆ. ಅಲ್ಲಿಂದ ಬಂಗಾಡಿ ಬಹು ಹತ್ತಿರ "ಶೇಷಗಿರಿ ಉತ್ತರಿಸಿದರು. ಹೇಗೂ ನನಗೂ ಬಿಡುವಿತ್ತು. ಮಾರನೆಯ ದಿನ ಹೊರಡುವುದೆಂದು ನಿರ್ಧರಿಸಿದ ನಂತರ, ಶೇಷಗಿರಿ ನಮ್ಮಲ್ಲಿಯೇ ಉಳಿದುಕೊಂಡರು. ಮಾರನೆಯ ಬೆಳಗ್ಗೆ ತಿಂಡಿ ಮುಗಿಸಿ, ಕುಣಿಗಲ್ ದಾರಿ ಹಿಡಿದೆವು. ಆ ದಿನಗಳಲ್ಲಿ ನಾನೇ ಕಾರ್ ಚಾಲನೆ ಮಾಡುತ್ತಿದ್ದೆ. ಸ್ವಂತ ಚಾಲನೆಯಲ್ಲಿ ಒಂದು ಖುಷಿ ಇರುತ್ತದೆ. ತೆರೆದ ಕಿಟಕಿಯಿಂದ ಭರ್ರೋ ಎಂದು ಬೀಸುತ್ತಿರುವ ಗಾಳಿ, ಮುಂದೆ ಮೈಲಿಗಟ್ಟಲೆ ಹಾಸಿರುವ ರಸ್ತೆ, ಬಯಲು ಸೀಮೆಯಾಗಿದ್ದರಿಂದ ಯಾವ ತಡೆಯಿಲ್ಲದೆ ದಿಗಂತದವರೆಗೂ ಚಾಚಿರುವ ಆಗಸ, ಮಳೆ ಮೋಡಗಳು ಮುಸಗಿದ್ದರಿಂದ ಉಂಟಾಗಿದ್ದ ತಣ್ಪು, ಇವೆಲ್ಲಾ ನಮ್ಮ ಯಾತ್ರೆಯನ್ನು ಅಹ್ಲಾದಕರವಾಗಿಸಿತ್ತು.

ಹಾಸನದಲ್ಲಿ ಒಂದು ಕಾಫಿ ಬ್ರೇಕ್. ಅದರ ನಂತರ ನೇರವಾಗಿ ಸಕಲೇಶಪುರ ಮಾರ್ಗವಾಗಿ ಧರ್ಮಸ್ಥಳ ಸೇರಿದೆವು. ದೇವರ ದರ್ಶನವಾದನಂತರ ನಮಗೆ ದೊರಕಿದ ಧರ್ಮದೂಟ ಬಹು ರುಚಿಕಟ್ಟಾಗಿತ್ತು. ಅಲ್ಲಿಂದ ಬೆಳ್ತಂಗಡಿ ಅರ್ಧ ಘಂಟೆಯ ಪಯಣ.

ಬೆಟ್ಟಗುಡ್ಡಗಳ ಹಾದಿ. ಇಕ್ಕೆಲಗಳಲ್ಲೂ ಹೆಮ್ಮರಗಳ ನೆರಳು. ಸುತ್ತಿ ಬಳಸಿ ಸಾಗುತ್ತಿದ್ದಂತೆ, ಪಕ್ಕದ ಬೆಟ್ಟದ ಸೆರಗಿನಲ್ಲಿ ಅನೇಕ ಸಣ್ಣಪುಟ್ಟ ಝರಿಗಳು ಮಿನಿ ಜಲಪಾತಗಳನ್ನು ಸೃಷ್ಟಿಸಿದ್ದವು. ಬೆಳ್ತಂಗಡಿಯಲ್ಲಿ ಡಾಕ್ಟರ್ ತ್ರಿಯಂಬಕ ತುಳುಪುಳೆಯವರ ಮನೆಯನ್ನು ಸೇರಿದಾಗ ಸಂಜೆ ನಾಲ್ಕರ ಸಮಯವಾಗಿತ್ತು. ಇವರು ಶೇಷಗಿರಿಯ ತಂದೆಯ ಕಡೆಯ ಸಂಬಂಧ. ಮಂಗಳೂರು ಹೆಂಚಿನ ಮನೆ. ಹೊರಗೆ ವಿಶಾಲವಾದ ಜಗಲಿ. ಒಳಗೆ ಕಂಭಗಳಿದ್ದ ಹಜಾರ. ಮನೆಯಲ್ಲಿದ್ದ ಅನೇಕ ಜನಗಳನ್ನು ತುಳಪುಳೆಯವರು ನನಗೆ ಪರಿಚಯಿಸಿದರು. ಕಾಫಿಸೇವೆಯಾಗುತ್ತಿದ್ದಂತೆ, ಶರತ್ ಚಂದ್ರ ನಮ್ಮನ್ನು ಬಂಗಾಡಿಗೆ ಕರೆದೊಯ್ಯಲು ಬಂದ. ಹೊರಡುವ ಸಮಯ ಬಂದಾಗ ನಾನು ಕಾರನ್ನು ಸ್ಟಾರ್ಟ್ ಮಾಡಲು ಹೊರಟೆ. ಶರತ್, "ನಿಮ್ಮ ಕಾರು ನಮ್ಮ ಬಂಗಾಡಿ ಇಳಿಜಾರನ್ನು ಹತ್ತಲಾರದು. ಅದಕ್ಕಾಗಿಯೇ ಈ ಫೋರ್ ವೀಲ್ ಡ್ರೈವ್ ಜೀಪನ್ನು ತಂದಿದೀನಿ. ಲಗ್ಗೇಜನ್ನೆಲ್ಲಾ ಜೀಪಿಗೆ ವರ್ಗಾವಣೆ ಮಾಡಿಬಿಡಿ" ಎಂದ. ಕಾರನ್ನು ಡಾಕ್ಟರ ಸುಫರ್ದಿಗೆ ಬಿಟ್ಟು, ಸೂಟ್‌ಕೇಸನ್ನು ಜೀಪಿನಲ್ಲಿಟ್ಟು ನಾವೂ ಜೀಪು ಹತ್ತಿ ಬಂಗಾಡಿಗೆ ಹೊರಟೆವು.

ಅಲ್ಲಿಂದ ಬಂಗಾಡಿಗೆ ಕೇವಲ ಹತ್ತು ಕಿಲೋಮೀಟರುಗಳಿದ್ದರೂ, ಈ ಕಚ್ಚಾ ರಸ್ತೆ, ಹೇರಳವಾದ ತಿರುವುಗಳು, ಜಿನುಗುತ್ತಿರುವ ಮಳೆ ಇವೆಲ್ಲದರ ದೆಸೆಯಿಂದ ಪಯಣ ಸುದೀರ್ಘವಾಗಿದ್ದಂತೆ ಕಂಡಿತು. ಕೊನೆಗೂ ಶರತ್ ನ ಮನೆ ಸೇರಿದೆವು. ಮನೆ ಇದ್ದ

ಜಾಗ ಬೆಟ್ಟದ ಇಳಿಜಾರಿನ ಅರ್ಧ ಹಂತದಲ್ಲಿ ಮಟ್ಟಸ ಮಾಡಿದ ನೆಲ. ಮನೆಯ ಹಿಂಭಾಗದಿಂದ ಬೆಟ್ಟ ಅನಾಮತ್ತಾಗಿ ಆಗಸಕ್ಕೇರಿತ್ತು. ಮುಂಭಾಗದಲ್ಲಿ ಗದ್ದೆಗೆ ಮಾಡಿದ ಜಾಗದಲ್ಲಿ ಭತ್ತದ ಪಯಿರು ಬೆಳೆದು ನಿಂತಿತ್ತು. ಮನೆಯನ್ನು ಪ್ರವೇಶಿಸಿದ ತಕ್ಷಣ ಒಂದು ವಿಶಾಲವಾದ ಹಜಾರದಲ್ಲಿ ಕಾಲಿಟ್ಟೆವು. ಮನೆಯೊಡತಿ ಭಾರತಿ ಬಹು ಆದರದಿಂದ ನಮ್ಮನ್ನು ಬರಮಾಡಿಕೊಂಡರು. ಸ್ವಲ್ಪ ಹೊತ್ತಿನಲ್ಲೇ ಅವಲಕ್ಕಿ ಮತ್ತು ಹಲಸಿನ ಹಪ್ಪಳ ನಮ್ಮ ಮುಂದೆ ಪ್ರತ್ಯಕ್ಷವಾಗಿತ್ತು. ಅವಲಕ್ಕಿ ಮೆಲ್ಲುತ್ತಾ ನಾನು ಹಜಾರದ ಕಿಟಕಿಯಿಂದಾಚೆಗೆ ದೃಷ್ಟಿ ಹಾಯಿಸಿದೆ. ದೂರದಲ್ಲಿ ಗುಡ್ಡದ



ಮೇಲಿನ ಅಂಚಿನಲ್ಲಿ ಸಾಲಾಗಿ ನಿಂತಿದ್ದ ಮರಗಳ ನೀಲಿ ಮಿಶ್ರಿತ ಹಸಿರು, ಸ್ವಲ್ಪ ಹತ್ತಿರ ಬಂದಂತೆ ಗುಡ್ಡದ ಬುಡದಲ್ಲಿದ್ದ ಹೆಮ್ಮರಗಳ ಗಾಢ ಹಸಿರು, ಅದರ ಮುಂದೆ ಇದ್ದ ಗದ್ದೆಯಲ್ಲಿ ಹರಡಿದ್ದ ಪಚ್ಚೆ ಹಸಿರಿನ ಭತ್ತದ ಪಯಿರು, ಗದ್ದೆಯ ಗಿಡಗಳ ಅಂಚಿನಲ್ಲಿದ್ದ ಬೇಲಿಯ ಒಣ ಹಸಿರು, ಕೈಬೀಸಿ ಕರೆಯುವಂತೆ ತೋರುತ್ತಿದ್ದ ತೆಂಗಿನಗರಿಗಳ ಹಳದಿ ಮಿಶ್ರಿತ ಹಸಿರು, ಈ ಎಲ್ಲ ಹಸಿರಿನ ಸಂಭ್ರಮವನ್ನು ಕಣ್ಣುಗಳು ಹೀರಿಕೊಳ್ಳುತ್ತಿದ್ದಂತೆ, ಕುವೆಂಪು ಉದ್ಗರಿಸಿದ "ಮೇಲೆ ನೋಡೆ ಕಣ್ಣ ತಣಿಪ, ನೀಲ ಪಟದಿ ವಿವಿಧ ರೂಪ ಜಾಲಗಳನು ಸೃಷ್ಟಿಸಿರ್ಪ ಚಿತ್ರ ಚತುರನಾರ್" ಸಾಲುಗಳು ನೆನಪಿಗೆ ಬಂದವು.

ಸಂಜೆ ಮಾತನಾಡುತ್ತಾ ಕುಳಿತಿದ್ದಾಗ, ನಾನು, "ಶರತ್, ನೀವು ನಿಜಕ್ಕೂ ಅದೃಷ್ಟವಂತರು ಕಣ್ರೀ, ಇಂತಹ ಸೌಂದರ್ಯವಿರುವ ಪ್ರಕೃತಿಯ ಮಡಿಲಲ್ಲಿ, ಜೀವಯಾತ್ರೆಯನ್ನು ಸಾಗಿಸುವ ಯೋಗ ದೊರಕಿದೆ." ಅಂತ ಹೇಳಿದಾಗ, ಶರತ್ ಆ ಮನೆಯ ಇತ್ತೀಚಿನ ಇತಿಹಾಸವನ್ನು ನಮ್ಮ ಮುಂದೆ ಬಿಚ್ಚಿಡಲು ಪ್ರಾರಂಭಿಸಿದ. "ನಮ್ಮ ತಾತ ಇಲ್ಲಿಗೆ ಬಂದು ನೆಲವನ್ನ ಸಮತಟ್ಟು ಮಾಡಿ ಸಾಗುವಳಿ ಪ್ರಾರಂಭಿಸಿದಾಗ ಇದೆಲ್ಲಾ ಬರಿಯ ಕಾಡು. ನಮ್ಮ ತಂದೆ ಕಾಲಕ್ಕೆ ಈ ಮನೆ, ಆ ಮುಂದಿನ ಗದ್ದೆ ಎಲ್ಲಾ ಕೈಗೆ ಬಂದಿದ್ದವು. ಖ್ಯಾತ ಲೇಖಕ ಶಿವರಾಮ ಕಾರಂತರು ನಮ್ಮ ತಂದೆಯವರಿಗೆ ಪರಿಚಯ. ಕಾರಂತರು ಒಮ್ಮೆ ಇಲ್ಲಿಯೇ ಒಂದು ತಿಂಗಳು ತಂಗಿದ್ದು "ಬೆಟ್ಟದ ಜೀವ"

ಕಾದಂಬರಿಯನ್ನು ಬರೆದದ್ದಂತೆ. ಅವರು ಸೃಷ್ಟಿಸಿದ ಕೆಳಬೇಲು ಗೋಪಾಲಯ್ಯನ ಪಾತ್ರಕ್ಕೆ ನಮ್ಮ ತಾತನ ಜೀವಿತವೇ ಸ್ಫೂರ್ತಿ ಅಂತ ನಮ್ಮ ತಂದೆ ಹೇಳುತ್ತಿದ್ದರು.."

ಅಷ್ಟು ಹೊತ್ತಿಗೆ ಭಾರತಿಯವರು ಬಂದು ನಮ್ಮನ್ನು ಊಟಕ್ಕೆ ಎಬ್ಬಿಸಿದರು. ನೀರು ದೋಸೆ, ಪತ್ರೊಡೆ, ಇವುಗಳ ಜೊತೆಗೆ ಹಲಸಿನ ಕಾಯಿ ಹುಳಿ ಮಾಡಿತ್ತು.. ಭಾರತಕ್ಕ "ನೀವು ಬಯಲು ಸೀಮೆಯವರಿಗೆ ನಮ್ಮ ಕಡೆಯ ರುಚಿ ಪರಿಚಯಿಸುವ ಅಂತ ತೇಟ್ಲಾ ಮಾಡಿರುವೆ" ಅಂದರು.

"ತೇಟ್ಲಾ ? ಹಾಗೆಂದರೇನು?" ಅಂತ ನಾನು ಕೇಳಿದೆ.

"ಮಳೆಗಾಲದಲ್ಲಿ ಈ ಖಾದ್ಯವನ್ನ ಕೆಸುವಿನ ಎಲೆ ಮತ್ತು ಹಲಸಿನ ಬೀಜದ ಗಸಿಯಿಂದ ಮಾಡುವ ವಾಡಿಕೆ. ಉಪಯೋಗಿಸುವ ಕೆಸುವಿನ ಎಲೆ ಅತೀ ಎಳೆಯದಾಗಿರಬೇಕು. ಅಂತಹ ಎಲೆಯನ್ನು ಆರಿಸಿ ತಂದು, ಒಂದೊಂದಾಗಿ ಸ್ವಚ್ಛಗೊಳಿಸಿ, ಸುರುಳಿ ಮಾಡಿ, ಅದನ್ನೇ ಮಡಿಚಿ ಗಂಟು ಹಾಕಬೇಕು. ಇದರೊಂದಿಗೆ ಹಲಸಿನ ಬೀಜ ಹಾಕಿ ಮಾಡುವ ತೇಟ್ಲಾ ಗಸಿ ಇದು. ತಿಂದು ನೋಡಿ" ಎಂದರು ಭಾರತಕ್ಕ. ದೇವರ ದಯದಿಂದ ಹೊಸ ರುಚಿಯಾಗಿದ್ದರೂ ತಿನ್ನಲು ಸಾಧ್ಯವಾಗಿತ್ತು. ಖಾದ್ಯವನ್ನು ಹೊಗಳಿ ಹರಸಿ ಊಟ ಮುಗಿಸಿದೆ.

ಮಾರನೆಯ ಬೆಳಗ್ಗೆ ಮುಂಡಾಜೆ ಜಲಪಾತನೋಡುವ ಉಮೇದು. ಮಳೆಯಲ್ಲೇ ಛತ್ರಿ ಹಿಡಿದು ಸಾಲಾಗಿ ಹೊರಟೆವು. ಗದ್ದೆಯ ಬದುವಿನ ಮೇಲೆ ನಡೆದು, ಕಾಡಿನ ಕುರುಚಲುಗಳನ್ನು ದಾಟುತ್ತಾ ನಡೆಯುತ್ತಿದ್ದಾಗ ಮಳೆಯಂತೂ ಚಿಟಿ ಚಿಟಿ ಬರುತ್ತಲೇ ಇತ್ತು. ಮಳೆ ಅಷ್ಟಿದ್ದರೂ ಛಳಿ ಇರಲಿಲ್ಲ ನೋಡಿ. ನಾನು ಕಾಲಿಗೆ ರನ್ನರ್ಸ್ ಹಾಕಿಕೊಂಡು ಜೀನ್ಸ್ ಧರಿಸಿದ್ದರೂ, ಯಾವುದೋ ಮಾಯದಲ್ಲಿ ಜಿಗಣೆಗಳು, ಕಾಲನ್ನು ಹತ್ತಿ ರಕ್ತ ಪಿಪಾಸುಗಳಾಗಿದ್ದವು. "ಹೊಗೆ ಸೋಪ್ಪು ಉಜ್ಜಿ. ಅವು ತಾನಾಗಿಯೇ ಬಿದ್ದು ಹೋಗುತ್ತವೆ" ಅಂತ ಶರತ್ ಸಲಹೆ ಮಾಡಿದರು. ಶೇಷಗಿರಿ ತಮ್ಮ ಜೇಬಿನಿಂದ ಸಿಗರೇಟ್ ತೆಗೆದು ಕೊಟ್ಟರು. ಶರತ್ ಮಾತು ಸತ್ಯವಾಗಿತ್ತು.

ಬಂಡಾಜೆ ಜಲಪಾತ ಸೇರುವ ಹೊತ್ತಿಗೆ ಮಳೆ ನಿಂತು ಶುಭ್ರ ಆಕಾಶದಲ್ಲಿ ಬೆಳಗಿನ ಸೂರ್ಯ ಬೆಳಗುತ್ತಿದ್ದ. ಬೆಟ್ಟದ ಮೇಲಿನಿಂದ ಧುಮುಕುತ್ತಿದ್ದ ಶರಾವತಿಯ ಜಲಧಾರೆ, ಗಿರಿಯ ಬುಡದಲ್ಲಿ ಬುಗ್ಗೆ ಎಬ್ಬಿಸುತ್ತಿದ್ದಂತೆ ಸೂರ್ಯ ಕಿರಣಗಳು ಕಾಮನ ಬಿಲ್ಲೊಂದನ್ನು ಸೃಷ್ಟಿಸಿದ್ದವು. ಆಗ ಮೊಬೈಲ್‌ಗಳ ಬಳಕೆ ಇಂದಿನಂತಿರಲಿಲ್ಲ. ಹಾಗಾಗಿ ಕಂಡದ್ದನ್ನೆಲ್ಲಾ ಫೋಟೋ ಹಿಡಿಯುವ ಬದಲು ಮೌನದಿಂದ ದೃಶ್ಯವನ್ನು ಸ್ವಾದಿಸುವ ಸೌಭಾಗ್ಯ ನಮ್ಮದಾಗಿತ್ತು. ಮನೆಗೆ ಹಿಂತಿರುಗಿದಾಗ ಮಧ್ಯಾಹ್ನ ಎರಡು ಗಂಟೆ. ಓಡಾಡಿದ್ದರಿಂದ ಮೂಡಿದ್ದ ಹಸಿವು, ತಿಂದದ್ದೆಲ್ಲವನ್ನೂ ರುಚಿಕರವಾಗಿಸಿತ್ತು. ಮಧ್ಯಾಹ್ನ ಮಲಗಿ ಎದ್ದಾಗ ಸಂಜೆ ಆರು ಘಂಟೆ. ಶರತ್ ತಾನು ನಿರ್ಮಿಸಿದ ವಾಟರ್ ಟರ್ಬೈನ್ ತೋರಿಸಲು ನಮ್ಮನ್ನು ಕರೆದೊಯ್ದ. ಅವರ ಮನೆ ಹತ್ತಿರದಲ್ಲಿ ಒಂದು ಅಬ್ಬಿ ಹಾದು ಹೋಗುತ್ತಿತ್ತು.. ಅದಕ್ಕೊಂದು ಚಿಕ್ಕ ತಡೆಯನ್ನು ಕಟ್ಟಿ, ಕೊಳವೆಯ ಮೂಲಕ ಆ ನೀರನ್ನು ಮನೆಯ ಪಕ್ಕಕ್ಕೆ ಹಾಯಿಸಲಾಗಿತ್ತು. ಅಲ್ಲೊಂದು ನೀರಿನ ಟರ್ಬೈನ್ ಹಾಗೂ ಜನರೇಟರ್. ನೀರಿನ ವೇಗವನ್ನು ನಿಯಂತ್ರಿಸಲು ಒಂದು ಕವಾಟ ಇತ್ತು. "ನಮ್ಮಲ್ಲಿ ಪವರ್ ಷಟ್ ಡೌನ್ ಆಗುತ್ತಲೇ ಇರುತ್ತೆ. ಆ ಸಮಯದಲ್ಲಿ ಇದು ಬಹಳ ಉಪಯೋಗಕರ" ಅಂತ ಶರತ್ ವಿವರಿಸಿದ.

ಮಾರನೆಯ ಬೆಳಗ್ಗೆ ನಾವು ಭಾರತಿಯವರಿಗೆ ವಿದಾಯ ಹೇಳಿ ಬೆಳ್ತಂಗಡಿಗೆ ಜೀಪಿನಲ್ಲಿ ಹಿಂತಿರುಗಿದೆವು. ಅಲ್ಲಿ ಡಾಕ್ಟರ ಮನೆಯ ಮುಂದೆ ಒಂದು ಸಣ್ಣ ಗುಂಪು ನಿಂತಿತ್ತು. ನಾನು ಜೀಪಿನಿಂದ ಇಳಿದೊಡನೆಯೇ ಎಲ್ಲರೂ ಬಹು ಗೌರವದಿಂದ ನನಗೆ ನಮಸ್ಕರಿಸಿದರು. "ಇದೇನಪ್ಪಾ ವಿಚಿತ್ರ" ಎಂದುಕೊಂಡೇ ನಾನು ಶೇಷಗಿರಿಯ ಜೊತೆ ಮನೆಯೊಳಗೆ ಹೋದೆ. ಡಾಕ್ಟರು ಬಹು ವಿಶ್ವಾಸದಿಂದ ನಮ್ಮನ್ನು ಬರಮಾಡಿಕೊಂಡರು. ನನ್ನನ್ನು ಕುರಿತು ಅವರು," ನಿಮ್ಮ ಖ್ಯಾತಿ ಬೆಳ್ತಂಗಡಿಗೂ ಹರಡಿರುವಂತೆ ಕಾಣ್ತದಲ್ಲಾ ಮಾರಾಯ್ರೇ?" ಅಂತ ನಗಾಡಿದರು. ನನಗೆ ಏನು ಹೇಳುವುದಕ್ಕೂ ತೋಚಲಿಲ್ಲ.

ಶರತ್ ಒಳಗೆ ಬಂದು, ಲಗ್ಗೇಜನ್ನೆಲ್ಲಾ ಕಾರಿನಲ್ಲಿಟ್ಟಿರುವುದಾಗಿ ಹೇಳಿದ. ಡಾಕ್ಟರೊಡನೆ

ನಾವೆಲ್ಲಾ ಹೊರಕ್ಕೆ ಬಂದೆವು. ಡಾಕ್ಟರು ಹೊರಗೆ ನಿಂತಿದ್ದ ಗುಂಪಿನ ಮುಖಂಡನನ್ನು ಕುರಿತು, "ಇವರು ಬೆಂಗಳೂರಿನ ಖ್ಯಾತ ಹಾಸ್ಯ ಸಾಹಿತಿಗಳು. ನಮ್ಮಲ್ಲಿಗೆ ಬಂದದ್ದು ನಮ್ಮ ಸುಯೋಗ" ಅಂತ ಹೇಳಿದರು. ಬಂದವರೆಲ್ಲಾ ತಬ್ಬಿಬ್ಬಾಗಿ ಒಬ್ಬರನ್ನೊಬ್ಬರು ನೋಡಿಕೊಂಡು, ಅವಸರದಲ್ಲಿ ನಮಸ್ಕರಿಸಿ ಹೊರಟುಬಿಟ್ಟರು.

ನನಗೆ ಏನೊಂದೂ ಅರ್ಥವಾಗಲಿಲ್ಲ. ಕೊನೆಗೆ ಡಾಕ್ಟರೇ ವಿವರಿಸಬೇಕಾಯಿತು.

"ನೋಡಿ ಯಜಮಾನ್ರೇ, ಮೊನ್ನೆ ನೀವು ಬಂದಾಗ ಜುಬ್ಬಾ ಪಾಯಿಜಾಮ ಹಾಕಿಕೊಂಡು ಬಂದಿದ್ರಲ್ಲಾ. ಆಗ ನೀವು ಥೇಟ್ ದೇನೇಗೌಡರಂತೇ ಕಾಣುತ್ತಿದ್ರಿ. ನಮ್ಮ ಸುಬ್ಬು " ಇವರು ದೇವೇಗೌಡ್ರಾ?" ಅಂತ ನನ್ನನ್ನ ಪ್ರಶ್ನಿಸಿದ. ನಾನು ಕೀಟಲೆಗಾಗಿ ಹೌದು ಎಂದು ಬಿಟ್ಟಿದ್ದೆ. ಅವನು ಅದನ್ನೇ ನಂಬಿ ಇವತ್ತು ತನ್ನ ಚೇಲರನ್ನೆಲ್ಲಾ ಕರೆತಂದಿದ್ದ. ಇವತ್ತು ನಿಜ ತಿಳಿಸಿದೆ" ಅಂತ ಡಾಕ್ಟರು ನಗುತ್ತಾ ಹೇಳಿದರು.

ನಾವೂ ನಗುತ್ತಾ ಬೆಂಗಳೂರು ದಾರಿ ಹಿಡಿದೆವು.

■



# ಮಳೆಯ ಅವಾಂತರ

ಸಿ.ಎ.ವಿಲಾಸ ನಾ ಹುದ್ದಾರ

ನನ್ನ ಮಗಳು ವಿಶಾಖಾ(ಪೂಜಾ) ಪುಣೆಯಿಂದ ಬಂದಿದ್ಲು. ನನ್ನ ತಮ್ಮ ಶರದ ಮತ್ತ ಅವನ ಧರ್ಮಪತ್ನಿ ಶುಭದಾ ಅವರ್ನ ಭೆಟ್ಟಿ ಆಗ್ಲಿಕ್ಕೆ ಅವರ ಮನೀಗೆ ಸಂಜೀಮುಂದ ಹೋಗಿದ್ವಿ. ಅವರ ಮನೀ ಆಗ, ಅಂದ್ರ ಮೇ, 2022 ರೊಳಗ ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರದೊಳಗ ಇತ್ತು. ನಾನು, ನನ್ನ ಮಗಳು,ಸೊಸಿ ಶ್ವೇತಾ ಮತ್ತ ಮೊಮ್ಮಕ್ಕಳಾದ ಆರೋಹಿ ಮತ್ತ ಅವ್ನಿ ಹೋಗಿದ್ವಿ. ನನ್ನ ಮಗಾ ಪವನ ಆಗ ಹೊರ ದೇಶಕ್ಕ ಹೋಗಿದ್ದ ಹಿಂಗಾಗಿ ನಾನ ಕಾರಿನ ಡ್ರೈವರ್ ಆಗ್ಬೇಕಾತು. ಸಾಧಾರಣ ಸಂಜೀ 5.00 ಘಂಟೆಕ್ಕ ಅವರ ಮನೀಗೆ ಹೋದ್ವಿ. ಒಂದ ಮೂರ ತಾಸ ಹರಟೀ ಹೊಡದ ಊಟಕ್ಕ ಕೂತ್ವಿ. ನಾವು ಹರಟೀ ಹೊಡೀಬೇಕಾದ್ರ ಹೊರಗ ಕುಂಭದ್ರೋಣ ಮಳೀ ಸುರು ಆಗಿತ್ತು. ಊಟ ಮುಗಿಯೂತನಕಾ ಮಳೀ ನಿಂತಿತ್ತು. ಭಾಳ ಲೇಟ ಆಗ್ತದ ಮತ್ತ ಹುಡುಗುರು ಮತ್ತ ಹೆಣ್ಮಕ್ಕಳು ಇದ್ದಾರಂತ ನಾ ಹೇಳಿ 10.00 ಘಂಟೆಕ್ಕ ಹೋಗೂಣು ನಡೀರಿ ಅಂತ ಎಲ್ಲರ್ನೂ ಎಬ್ಬಿಸಿದೆ. ಯಾಕಂದ್ರ ಈ ಹೆಣ್ಮಕ್ಕಳ ಹರಟೀ ಮುಗಿಯೂ ದಿಲ್ಲ. ಮಗಳ ಇದ್ರಂತೂ ಮುಗಿಯುವದೇ ಇಲ್ಲಾ.

ಅಷ್ಟರೊಳಗ ಶರದ "ನೋಡು ಮಳೀ ಭಾಳ ಆಗೇದ... ಸುಮ್ನ ಇವತ್ತ ರಾತ್ರಿ ಇಲ್ಲೇ ಮಲ್ಕೊಂಡ ನಾಳೆ ಮುಂಜಾನೆ ಹೋಗ್ರೀ" ಅಂತ ವಾರ್ನ್ ಮಾಡಿದ. ನಮಗ ಅವನ ಮನೀಯಿಂದ ಗೋಪಾಲನ್ ಆರ್ಕೇಡ್ ಎದುರಿಗೆ ಇರೋ ನಮ್ಮ ಮನೀಗೆ ಬರೋ ಹಾದೀ ಒಳಗ ನೈಸ್ ರೋಡ್‌ನ ಅಂಡರ್ ಪಾಸ್ ಒಳಗ ನೀರ ಬಂದ್ರ ಅಷ್ಟ ತ್ರಾಸ ಇತ್ತ. ನಾ ಅನ್ಕೊಂಡೆ ಒಂದ ವೇಳ್ಯಾಕ್ಕ ಅಲ್ಲಿ ನೀರ ಏನರೇ ಬಂದಿದ್ರ ತಿರಿಗಿ ಬಂದ್ರಾತ ಅಂತ ವಿಚಾರ ಮಾಡಿದೆ. ಅದನ್ನ ಶರದಗ ಹೇಳಿ ಅಲ್ಲಿಂದ ಹೊಂಟ್ವಿ. ಶರದ ಅರ್ಧಾ ಮನಸ್ಸಿನಿಂದ ನಮಗ ಹೋಗ್ಲಿಕ್ಕೆ ಬಿಟ್ಟಾ.

ಮೊಮ್ಮಕ್ಕಳಿಗೆ ಇನ್ನೂ ನಿದ್ದಿ ಬಂದಿರ್ಲಿಲ್ಲಾ. ಪೂಜಾ ಅತ್ಯಾ ಮತ್ತ ಮಮ್ಮಾನ ಜೋಡಿ ನಕ್ಕೋತ ಕೆಲ್ಕೋತ ಹಿಂದಿನ ಸೀಟಿನೊಳಗ ಕೂತಿದ್ರು. ನನ್ನ ಮನಸ್ಸಿನೊಳಗ ಸ್ವಲ್ಪ ಹೆದ್ರಿಕಿ ಇದ್ರೂ ಅವರ ಮುಂದ ತೋರಿಸಿಕೊಳ್ಳೋ ಹಂಗ ಇರ್ಲಿಲ್ಲಾ. ನಾನೂ ಅವರ ಮಾತಿಗೆ ನಕ್ಕೋತ ಡ್ರೈವ್ ಮಾಡ್ಲಿಕತ್ತಿದ್ದೆ. ಅಂಡರ್ ಪಾಸ್‌ನೊಳಗ ಹೆಚ್ಚಿಗೆ ನೀರ ಹರೀತಿರ್ಲಿಲ್ಲಾ. ಬದುಕಿದೆಯಾ ಬಡ ಜೀವವೇ ಅಂತ ಅನ್ಕೋತ ಸಾಧ್ಯ ಆದಷ್ಟು ಫಾಸ್ಟ ಆಗಿ ಡ್ರೈವ್ ಮಾಡ್ಲಿಕತ್ತೆ. ಹೊರಗಿನ ಜಗತ್ತಿನೊಳಗ ಎನು ನಡೀಲಿಕತ್ತದ್ದ ಅನ್ನೊ ಖಬರ್ ಇಲ್ದ ತಮ್ಮ ಹರಟೀ ಒಳಗ ಮಗ್ನ ಆಗಿದ್ರು. ವಿಷ್ಣುವರ್ಧನ ರಸ್ತೆಯಿಂದ ರಾಜರಾಜೇಶ್ವರಿ ಕಡೆಗೆ ಹೋಗೋ ಕೆಂಚನಹಳ್ಳಿ ರಸ್ತೆಗೆ ಬಂದೆ. ಅಲ್ಲೆಲ್ಲಾ ಗಾಡಿಗಳು ಅಡ್ಯಾಡ್ಲಿಕತ್ತದ್ದು ನೋಡಿ ಮನಸ್ಸಿಗೆ ಸಮಾಧಾನ ಆತು. ಅರಾಮ ಆಗಿ ಡ್ರೈವ್ ಮಾಡಕೋತ ಡಬಲ್ ರೋಡ್, ರಿಲಾಯನ್ಸ್ ಡಿಜಿಟಲ್ ದಾಟಿ ಮುಂದ ಬರೋತನಕಾ ಗಾಡೀ ಎಲ್ಲ ಸುರಳೀತವಾಗಿ ಓಡ್ಯಾಡಲಿಕ್ಕತ್ತಿದ್ವು. ಇನ್ನೇನ ಐದ ಮಿನಿಟಿನೊಳಗ ಮನ್ಯಾಗ ಇರ್ತೀವಿ ಅಂತ ಮನಸ್ಸಿನೊಳಗ ಮಂಡಿಗಿ ತಿನ್ಕೋತ ಡ್ರೈವ್ ಮಾಡ್ಲಿಕತ್ತಿದ್ದೆ. ಸ್ವಲ್ಪ ಮುಂದ ಹೋಗೋದಕ್ಕ ಯಾಕೋ ಸಂಶಯ ಬಂತು. ನನ್ನ ಮುಂದ ಹೊಂಟಿದ್ದ ಕಾರು ಸ್ವಲ್ಪ ಸಾವಕಾಶ ಆದ್ಹಂಗ ಅನಿಸ್ತು. ಮುಂದಿನ ದೃಶ್ಯ ನೋಡಿ ಎದಿ ಝುಲ್ ಅಂತು. ಸಾಲಕ ಗಾಡಿ ನಿಂತಾವ. ಈಗಷ್ಟ ಸುಗಮ ಸಂಚಾರಕ್ಕ ಅಡ್ಡಿ ಆಗೇದ ಅಂತ ಅನಿಸಿ, ಕೆಳಗ




ಇಳದ ಮುಂದ ಹೋಗಿ ವಿಚಾರಣೆ ಮಾಡಿದೆ. ಆಗ ಗೊತ್ತಾತು ನಾಯಂಡ-ಹಳ್ಳಿಕಡೀಂದ ಮತ್ತ ಸುತ್ತ-ಮುತ್ತಲಿನ ಕಡಿಂದ ಮತ್ತ ಅಲ್ಲಿ ಇದ್ದ ಗಟಾರ ಒಡ್ಡು ಒಡೆದು ಜೋರಾಗಿ ನೀರ ಹರದ ಬಂದು ಗೋಪಾಲನ್ ಆರ್ಕೆಡ್ ಹತ್ರ ಇರೋ ಸರ್ಕಲ್ ನೀರಿನಿಂದ ಮುಚ್ಚಿ ಹೋಗೇದ. ಯಾರಿಗೂ ಈಕಡೆಯಿಂದ ಆಕಡೆ, ಆಕಡೆಯಿಂದ ಈಕಡೆ ಬರ್ಲಿಕ್ಕೆ ಸಾಧ್ಯನ ಇರ್ಲಿಲ್ಲಾ. ನಮ್ಮ ಮನೀಗೆ ಹೋಗಬೇಕಂದ್ರ ಆ ಸರ್ಕಲ್ ದಾಟೀನ ಹೋಗಬೇಕು. ಏನ ಮಾಡ್ಬೇಕಾ ಅಂತಾ ವಿಚಾರ ಮಾಡ್ಲಿಕತ್ತಿದ್ದೆ, ಆಗ ನಮ್ಮ ಮುಂದಿನ ಕಾರ್ ಅಲ್ಲೇ ಎಡಕ್ಕ ಇರೋ ಓಣಿಯೊಳಗ ಹೊದದ್ದು ನೋಡಿದೆ. ಕಾರಿನೊಳಗ ಕೂತು ಪರಿಸ್ಥಿತಿ ಸೊಸಿಗೆ,ಮಗಳಿಗೆ ಹೇಳಿದೆ. ಮೊಮ್ಮಕ್ಕಳು ನಿದ್ದಿ ಬಂದು ತೂಕಡ್ಸಲಿಕ್ಕತ್ತಿದ್ರು. ಭೊಲೋ ಆತು ಅನ್ಕೊಂಡ್ವಿ. ನಾವು  ಎಡಕ್ಕ ಓಣಿಯೊಳಗ ಕಾರ ಹೊರಳಿಸಿ ಗ್ಲೋಬಲ್ ವಿಲೇಜ್‌ದೊಳಗ ಹಾಯ್ದು ಮೈಸೂರ್ ರಸ್ತೆಕ್ಕ ಬಂದು ಬಿ.ಡಿ.ಎ. ಕಾಂಪ್ಲೆಕ್ಸ ಮುಂದಿನಿಂದ ಬೆಂಗಳೂರು ಯುನಿವ್ಹರಸಿಟಿ ದಾಟಿ ಎಡಕ್ಕ ಇರೋ ರಸ್ತೆ ಮುಖಾಂತರ ನಮ್ಮ ಮನೀಗೆ ಬರೋ ವಿಚಾರ ಮಾಡಿ ನಾನೂ ಮುಂದ ಹೋಗ್ತಿರೋ ಕಾರ್ ಬೆನ್ನಹತ್ತಿದೆ. ಸುಮಾರು ಎಂಟು-ಹತ್ತಸರ್ತೆ ಎಡಕ್ಕ ಬಲಕ್ಕ ತಿರ್ಕೋತ ಇನ್ನೇನ ಮೈಸೂರ್ ರಸ್ತೆ ಮುಟ್ಟಬೇಕಂದ್ರ ಅಲ್ಲ್ಯೂ ನೀರ ಹರದು ರಸ್ತೆ ಬಂದ ಆಗ್ಬಿಟ್ಟಿತ್ತು. ನಾನರೇ ಅಂಥಾ ಎಕ್ಸಪರ್ಟ ಡ್ರೈವರ್ ಅಲ್ಲಾ. ಕಾರ ತಿರಿಗಿಸಿಕೋಬೇಕಂದ್ರ ಸಾಕಾಗಿ ಬಿಟ್ತು. ಸಣ್ಣ ರೋಡ್, ಕಗ್ಗತ್ತಲ ಬ್ಯಾರೆ , ದೈರ್ಯ ಮಾಡಿ ಕಣ್ಣ ಮುಚ್ಚೇ ಯೂ ಟರ್ನ ತೊಗೊಂಡೆ. ಇನ್ನೂ ನನಗ ಆಶ್ಚರ್ಯ ಅನಸ್ತದ ಅದ ಹೆಂಗ ತೊಗೋಂಡೆ ಅಂತ.

ಇನ್ನೇನ ಮಾಡೋದಪಾ ಅಂತ ವಿಚಾರ ಮಾಡ್ಲಿಕತ್ತಿದ್ದೆ. ನನ್ನ ಸೊಸಿ ಮೊದ್ಲೇಕ್ ವಿಷ್ಣುವರ್ಧನ ರಸ್ತೆಯಲ್ಲಿರೋ ಒಂದ ಕಂಪನಿಯೊಳಗ ಕೆಲಸಾ ಮಾಡ್ತಿದ್ಲು. ಅವಳ ಹೇಳಿದ್ಲು ನಾ ಎಲ್ಲೆ ಯೂ ಟರ್ನ ತೊಗೊಂಡಿದ್ದೆಲ್ಲಾ ಆ ರಸ್ತೆ ವಿಷ್ಣುವರ್ಧನ ರಸ್ತೆ ಕಡೆ ಹೋಗ್ತದ ಅಂತ. ಇಲ್ಲಿಂದ ನನ್ನ ತಮ್ಮನ ಮನೀಗೆ ಹೋಗೋ ಬದ್ಲು ವಿಷ್ಣವರ್ಧನ ರಸ್ತೆ ಮುಖಾಂತರ ಕೆಂಗೇರಿಗೆ ಹೋಗಿ ಅಲ್ಲಿಂದ ನಮ್ಮ ಮನೀ ಕಡೆ ಹೋಗಬಹುದು ಅಂತ ವಿಚಾರ ಮಾಡಿ ವಿಷ್ಣುವರ್ಧನ ರಸ್ತೆ ಮುಟ್ಟೇದ್ವಿ. ಅಲ್ಲಿಂದ ಯಾವದ ತ್ರಾಸ ಇಲ್ಲದ ಹತ್ತ ಮಿನಿಟಿನೊಳಗ ಕೆಂಗೇರಿ ಮುಟ್ಟಿ ಬೆಂಗಳೂರು ಯುನಿವ್ಹರಸಿಟಿ ಕಡೆ ಹೊಂಟ್ವಿ. ಮೊಮ್ಮಕ್ಕಳು ಆಗಲೇ ಮಲ್ಕೊಂಡಿದ್ರು. ಕೆಂಗೇರಿಯಿಂದ ಯಾವದ ಅಡೆತಡೆ ಇಲ್ಲದ ಖಷಿಯಿಂದ ಡ್ರೈವ್ ಮಾಡ್ಕೊಂಡ ಹೋಗ್ಲಿಕತ್ವಿ. ಆದ್ರ ನಮ್ಮ ಖುಷಿ ಅಲ್ಪ ಕಾಲದ್ದು. ಯಾಕಂದ್ರ ಬಿಡಿಎ ಕಾಂಪ್ಲೆಕ್ಸ್‌ನಿಂದ ಎಲ್ಲಾ ಗಾಡಿಗಳನ್ನ ತಿರಗಿ ಕಳಿಸ್ಲಿಕತ್ತಿದ್ರು. ಯಾಕ ಅಂತ ಕೇಳೀದ್ರ, ನೀರ ಬೆಂಗಳೂರು ಯುನಿವ್ಹರ್‌ಸಿಟಿತನಕಾ ಹರದು ಅಲ್ಲಿಂದ ಮುಂದ ಎಲ್ಲಾ ರಸ್ತೆ

ಬಂದ ಆಗಿದ್ವು. ಅದಕ್ಕ ನಮಗ ಗ್ಲೋಬಲ್ ವಿಲೇಜ್‌ನಿಂದ ನಮಗ ಬರ್ಲಿಕ್ಕೆ ಆಗಿರಲಿಲ್ಲ. ಇದು ನಮ್ಮ ತಲಿಗೆ ಮೊದ್ಲ ಹೊಳದಿದ್ರ ನಾವು ಅಲ್ಲಿಂದ ಶರದನ ಮನೀಗೆ ಹೋಗಬಹುದಾಗಿತ್ತು. ಕಾಲ ಮಿಂಚಿ ಹೋಗಿತ್ತು.

ನಾವು ಈಗ "ಬ್ಯಾಕ್ ಟು ಸ್ಕೇರ್ ಒನ್" ಗೆ ಬಂದಿದ್ವಿ. ಏನ ಮಾಡಬೇಕು. ಎಲ್ಲೂ ರೋಡ್ ಲೈಟ್ ಇಲ್ಲಾ. ನನ್ನ ಜೋಡಿ ಹೆಂಗಸರು ಮತ್ತು ಮಕ್ಕಳು. ನನಗ ಭಾಳ ಟೆನ್ಸನ್ ಆಗ್ಲಿಕತ್ತು. ಏನ ಮಾಡೋದು ಅಂತ ವಿಚಾರ ಮಾಡಿದಾಗ ನಮಗ ಹೊಳೆದದ್ದು ನಮ್ಮ ಬೀಗರಾದ ಉಪೇಂದ್ರ ಕಟ್ಟಿ ಅವರ ಹೆಸರು. ಶ್ವೇತಾ ತನ್ನ ತಂದೆಗೆ ತಕ್ಷಣ ಪೋನ್ ಮಾಡಿದ್ಲು. ಆಗ ಸುಮಾರು ರಾತ್ರಿ 12.30 ಆಗಿರಬೇಕು. ಅವರಿಗೂ ಘಾಬರಿ. ಇಂಥಾ ಅಡ್ಡ ಹೊತ್ನಾಗ ಯಾಕ ಫೋನ ಮಾಡ್ಯಾಳಂತ. ಶ್ವೇತಾ ನಮ್ಮ ಪರಿಸ್ಥಿತಿ ಹೇಳಿದ್ಲು. ಅವರು ತಕ್ಷಣ ಬಂದ ಬಿಡ್ರೀ ಅಂದ್ರು, ಮತ್ತೊಂದು ಯೂ ಟರ್ನ ತೊಗೊಂಡು ಕೆಂಗೇರಿ ಮುಖಾಂತರ ರಿಂಗ ರೋಡ ಹಿಡದು ಭಾರತ ನಗರ(ಮಾಗಡಿ ರೋಡ್)ದೊಳಗ ಇರೋ ಉಪೇಂದ್ರ ಮನೀಗೆ ಮುಟ್ಟೇದ್ವಿ. ಹಾದಿಯೊಳಗ ಸಾಕಷ್ಟು ಗಿಡಾ ಬಿದ್ದಿದ್ವು.. ಅದ್ರ ನಮ್ಮ ಪುಣ್ಯಾಕ ಎಲ್ಲಾ ಗಿಡಾ ರಸ್ತೆ ಮ್ಯಾಲಿಂದ ತಗದ ಹಾಕಿದ್ರು. ನಾವು ಮನೀ ಮುಟ್ಟಿ ಮಲ್ಕೊಂಡಾಗ ಬೆಳಗಿನ 2.00 ಘಂಟೆ ಆಗಿತ್ತು. ನನಗ ಮುಂಜಾನೆ 4.00 ಘಂಟೆಕ್ಕ ಎಚ್ಚರ ಆದಾಗ ಗೂಗಲ್ ಮ್ಯಾಪ್ ನೋಡೀದೆ, ನಮ್ಮ ಮನೀ ರಸ್ತೆ ಇನ್ನೂ ಕೆಂಪ ತೋರಸ್ತಿತ್ತು. ಆದ್ರ ಮುಜಾನೆ 7.00 ಘಂಟೆಗೆ ನೋಡಿದಾಗ ಹಸರ ಬಣ್ಣಕ್ಕ ತಿರಗಿತ್ತ. ಚಾ ಕುಡದ ನಮ್ಮ ಮನೀ ಮುಟ್ಟಿದಾಗ ನನ್ನ ಮನಸ್ಸು ಅನುಭವಿಸಿದ ನಿರುಮ್ಮಳತೆ ವರ್ಣಿಸಲಿಕ್ಕೆ ಸಾಧ್ಯವಿಲ್ಲ.

ಅಬ್ಬಾ.. ಈಗ ನೆನಸಿಕೊಳಲಿಕ್ಕೆ, ಬರೀಲಿಕ್ಕೆ ಮಜಾ ಅನಸ್ತದ ಆದ್ರ ಆ ನಾಲ್ಕು ತಾಸು ನಾ ಅನುಭವಿಸಿದ ಮನಸ್ಸಿನ ಆತಂಕ, ತಳಮಳ ಅಕ್ಷರದೊಳಗ ಮೂಡಿಸಲಿಕ್ಕೆ ಬರೋದ ಇಲ್ಲಾ. ಆದ್ರೂ ಪ್ರಯತ್ನಾ ಮಾಡೇನಿ. ನಮ್ಮ ಈ ತ್ರಾಸಿಗೆ ಯಾರನ್ನ ಬೈಬೇಕ, ಜವಾಬ್ದಾರನ್ನಾಗಿ ಮಾಡ್ಬೇಕ ... ಮಳೆರಾಯನನ್ನೋ, ಬಿ.ಬಿ.ಎಮ್.ಪಿ.ಯನ್ನೋ, ಅಥವಾ ಖುದ್ಧಾಗೊ ನಮ್ಮನ್ನೋ ..... ಅನ್ನೋದು ಓದುಗರ ನಿರ್ಧಾರಕ್ಕ ಬಿಟ್ಟದ್ದು.

............................ ಶ್ರೀ ಕೃಷ್ಣಾರ್ಪಣಮಸ್ತು ..................................



# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಳ

- ✓ ಮಾಲಿಗೆ ಮನೆಗೆಲಸದಲ್ಲಿ ನೆರವಾಗಲು ದೇವರು ಮಳೆಗಾಲವನ್ನು ಸೃಷ್ಟಿಸಿದನಂತೆ.
- ✓ ಛಾವಣಿ ಸೋರ್ತಿದ್ದರೆ ಟೆನ್ಷನ್ ಬೇಡ, ಫ್ರೀ ವಾಟರ್ ಫಾಲ್ಸ್ ಅಂತ ಖುಷಿ ಪಡಿ.
- ✓ ಥಂಡರ್ ಈಸ್ ಜಸ್ಟ್ ಕ್ಲೌಡ್ಸ್ ಆರ್ಗ್ಯೂಯಿಂಗ್ ಓವರ್ ಪಾರ್ಕಿಂಗ್ ಸ್ಪೇಸ್.
- ✓ ಮಂಡ್ಯ ಹುಡುಗ: ಮಳೆಗೆ ರಾಗಿ ಮುದ್ದೆ ಜತೆ ಬಸ್ಸಾರು. ಬೆಂಗಳೂರು ಹುಡುಗ: ಮಳೆಗೆ ಮ್ಯಾಗಿ ಜತೆ ಹಾಟ್‌ಸ್ಪಾರು.
- ✓ ಸಂ ಪೀಪಲ್ ವಾಕ್ ಇನ್ ದಿ ರೇನ್. ಅದರ್ಸ್ ಜಸ್ಟ್ ಗೆಟ್ ವೆಟ್.
- ✓ ಪ್ರತಿಯೊಂದು ಮಳೆ ಹನಿಯೂ ಭೂಮಿಗೆ ಬಡಿಯುವ ಪ್ರೇಮ ಪತ್ರ.
- ✓ ಇಫ್ ಯು ವಾಂಟ್ ದಿ ರೇನ್‌ಬೊ ಯು ಹ್ಯಾವ್ ಗಾಟ್ ಟು ಪುಟ್ ಅಪ್ ವಿತ್ ದಿ ರೇನ್.
- ✓ ಮಣ್ಣಿನ ಪರಿಮಳ ಮತ್ತು ಮಳೆಯ ಸಿಂಚನ ಜಗತ್ತಿನ ಅತ್ಯಂತ ಸುಂದರ ಸಮ್ಮಿಲನ.
- ✓ ಮಳೆ ಬರುತ್ತಿದ್ದರೆ ಛಾವಣಿ ರಿಪೇರಿ ಸಾಧ್ಯವಿಲ್ಲ. ಮಳೆ ಇಲ್ಲದಿದ್ದರೆ ರಿಪೇರಿ ಅವಶ್ಯಕತೆ ಇಲ್ಲ.
- ✓ ರೇನಿ ಡೇಸ್: ವೆನ್ ಈವನ್ ದಿ ಸನ್ ಸೇಸ್ ಐ ಆಮ್ ವರ್ಕಿಂಗ್ ಫ್ರಂ ಹೋಂ.
- ✓ ಮಳೆ ಮಿತವಾಗಿ ಸುರಿದರೆ ಹಬ್ಬ, ಮಿತಿ ಮೀರಿದರೆ ಅಬ್ಬಬ್ಬ.
- ✓ ಅಮ್ಮ: ಲೇ ಮಗನ, ಮಳಿ ಬರ್‍ತೈತಿ ಸಾಮಾನು ಒಳಗೆ ತಗಾ
  ಮಗ: ಯಾಕಮ್ಮಾ, ನೆನೆದು ಹೋಗ್ತವೇನು?
  ಅಮ್ಮ: ಇಲ್ಲಲೇ, ತೋಯ್ದು ಹೋದರೆ ನಿನ್ನ ಅಪ್ಪನ ಬೈಗಳ ಮಳಿ ಶುರುವಾಗ್ತದೆ.
- ✓ ರೇನ್ ಈಸ್ ಬ್ಯೂಟಿಫುಲ್... ಅಂಟಿಲ್ ದಿ ಪವರ್ ಗೋಸ್ ಆಫ್.
- ✓ ಶಾಲಾ ದಿನಗಳಲ್ಲಿ ಮಳೆ ಬಂದರೆ ರಜೆ ಕೊಡ್ತಾರ ಅಂತ ದೇವರಲ್ಲಿ ಬೇಡಿಕೊಳ್ತಿದ್ವಿ, ಈಗ ಮಳೆಯಾದರೆ ವರ್ಕ್ ಫ್ರಂ ಹೋಂ ಕೊಡಲಿ ಅಂತ ಬೇಡಿಕೊಳ್ತೀವಿ.
- ✓ ನೆನೆಯಲು ಬಯಸುವವರಿಗೆ ಛತ್ರಿ ಬೇಕಾಗುವದಿಲ್ಲ.
- ✓ ಪ್ರವಾಹಕ್ಕೆ ನಾನು ಕಾರಣ ಎಂದು ಯಾವ ಒಂದು ಮಳೆ ಹನಿಯೂ ಭಾವಿಸುವದಿಲ್ಲ.
- ✓ ಪ್ಲಾಂಟ್ಸ್ ಕ್ರೇವ್ ಫಾರ್ ರೇನ್.. ಐ ಕ್ರೇವ್ ಫಾರ್ ಎ ರೂಫ್.
- ✓ ಮಳೆ ಸುರಿದುದರಿಂದ ಪಿಕ್‌ನಿಕ್ ಹಾಳಾಗಬಹುದು ಆದರೆ ಅದು ರೈತನ ಬೆಳೆ ಉಳಿಸಿದರೆ ಮಳೆಯನ್ನು ದೂಷಿಸಲು ಸಾಧ್ಯವೆ?
- ✓ ಡೋಂಟ್ ಬಿ ಆ್ಯಂಗ್ರಿ ವಿತ್ ದಿ ರೇನ್. ಇಟ್ ಸಿಂಪ್ಲಿ ಡಸ್ ನಾಟ್ ನೊ ಹೌ ಟು ಫಾಲ್ ಅಪ್‌ವರ್ಡ್ಸ್. ■

# ಬೆಂಗಳೂರಿನ ರಸ್ತೆಗಳು

**ಪ್ರಶಾಂತ ಶ್ರೀಕಂಠಯ್ಯ**

**ಬಿದ್ದ ಎರಡು ಮೂರು ದಿನದ ಮಳೆಗೆ, ನಮ್ಮ ಬೆಂಗಳೂರಿನ ರಸ್ತೆಗಳು ಹೇಗಾಗಿದೆ ಎಂದು ತಮಗೆಲ್ಲಾ ಗೊತ್ತೇ ಇದೆ. ಇದನ್ನೇ ಯಾರ್ಯಾರು ಹೇಗೆ ವರ್ಣಿಸಬಹುದು ನೋಡಿ;**

**ರೋಮ್ಯಾಂಟಿಕ್ ಕವಿ, ಕವಿತೆ ಬರೆದರೆ ;**

ಆಹಾ ಅದೆಷ್ಟು ಚೆಂದ
ಉಬ್ಬು ತಗ್ಗುಗಳಿಂದ ಕೂಡಿದ
ಷೋಡಶಿಯಂತೆ ಅಂದ.




**ನೇತಾರರು ಹೀಗನ್ನುತ್ತಾರೆ;**

ಗುಂಡಿ ಅನ್ನುವುದು ಗುಂಡಿಯಲ್ಲಾ
ಇದು ಅಭಿವೃದ್ಧಿಯ ಬಂಡಿ
ಮುರಿದರೂ ಜನರ ಮಂಡಿ
ನಮ್ಮ ಒಡೆತನದ ಆಸ್ಪತ್ರೆಯಲ್ಲೇ
ನೀವು ಬಂದಿ.

**ಐಟಿ, ಬಿಟಿ ದಿಗ್ಗಜರು;**

ಗುಂಡಿ ರಸ್ತೆಗಳು ಅಭಿವೃದ್ಧಿಯ
ದಾರಿಗಳಲ್ಲಾ ಆರ್ಥಿಕತೆಯ
ಪತನದ ಹೆದ್ದಾರಿ
ಏನಾದರೂ ಹೇಳಿದರೆ
ಬಿಟ್ಟು ಹೋಗಿರೆನ್ನುವರು
ಬೆಂದಕಾಳೂರು ರೀ.

**ಸಿನಿಮಾದಲ್ಲಿ ಹೀರೋ ಹೀರೋಯಿನ್ ವರ್ಣನೆ;**

ಚೆಲುವೆ ನಿನ್ನ ಮುಖ
ನೋಡಿದಾಕ್ಷಣ ನನ್ನ
ಮೈ ಜುಂ ಅಂತು
ಪ್ರೀತಿಯಿಂದಲ್ಲಾ
ಬೆಂಗಳೂರಿನ ರಸ್ತೆಗಳ
ನೆನಪಿನಿಂದ.

**ದವಾಖಾನೆ ;**

ದವಾಖಾನೆಯ ಮುಂದೆ
ಇತ್ತೊಂದು ಫಲಕ
ಇಲ್ಲಿ ಎಲ್ಲಾ ಮೂಳೆ ಮುರಿತಕ್ಕೂ
ಕಟ್ಟುತ್ತೇವೆ ಕಟ್ಟು
ಬೆಂಗಳೂರಿನ ರಸ್ತೆಯಲ್ಲಿ
ಮೂರಿದ ಮೂಳೆಗೆ
ಗೊತ್ತಿಲ್ಲ ಬ್ರಹ್ಮನಿಗೂ
ಕಟ್ಟು ಕಟ್ಟುವ ಗುಟ್ಟು.

# ಶ್ರದ್ಧಾಂಜಲಿ

## ಶ್ರೀಯುತ ಎಚ್ ಎಸ್ ಬಾಬು



ಗಣೇಶ ಹೆಗ್ಗಡೆ ಎಂಬ ಕಾವ್ಯನಾಮದಡಿ ಅಪರಂಜಿಗೆ ಅತ್ಯುತ್ತಮ ನಗೆ ಲೇಖನಗಳನ್ನು ಬರೆಯುತ್ತಿದ್ದ ಶ್ರೀಯುತ ಎಚ್.ಎಸ್.ಬಾಬು ಇನ್ನಿಲ್ಲ. ಮಾರ್ಚ್ 2011ರಲ್ಲಿ ತಮ್ಮ ಲೇಖನ "ಕಮಲಾನಗರದ ಕ್ರಿಕೆಟ್ ಮ್ಯಾಚ್" ದೊಂದಿಗೆ ಅಪರಂಜಿಯ ಲೇಖಕ ಬಳಗಕ್ಕೆ ಪದಾರ್ಪಣ ಮಾಡಿದ ಬಾಬು ರವರು ಅಂಪರಂಜಿಗೆ ಇಂದಿನವರೆಗೂ ಮೂವತ್ತಕ್ಕೂ ಹೆಚ್ಚು ಬರಹಗಳನ್ನು ನೀಡಿದ್ದಾರೆ. ಇವರದ್ದು ಚುಚ್ಚಿ ಕೆಣಕುವ ಹಾಸ್ಯವಲ್ಲ. ಮುದವನ್ನು ನೀಡುವ ತಿಳಿಹಾಸ್ಯ. ಇತ್ತೀಚೆಗೆ ಇವರು ತಮ್ಮ ಲೇಖನವೊಂದರಲ್ಲಿ ಗ್ಯಾಸ್ ಕಾಲೇಜಿನಲ್ಲಿ ಗ್ಯಾಸ್ ಸಿಗುವ ನಗೆಕಿಡಿಯೊಂದನ್ನು ಹಾರಿಸಿದ್ದು ನೆನಪಿಗೆ ಬರುತ್ತದೆ. ಸನ್ಮಿತ್ರ ಬಾಬು ರವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಅಪರಂಜಿ ಭಗವಂತನಲ್ಲಿ ಪ್ರಾರ್ಥಿಸುತ್ತಾಳೆ. ಬಾಬುರವರ ಕುಟುಂಬವರ್ಗದವರಿಗೆ ಈ ಅಗಲುವಿಕೆಯನ್ನು ಭರಿಸುವ ಶಕ್ತಿಯನ್ನು ಆ ಕರುಣಾಮಯಿಯು ದಯಪಾಲಿಸಲಿ ಎಂದು ಹಾರೈಸುವೆ. ಓಂ ಶಾಂತಿಃ ಶಾಂತಿಃ ಶಾಂತಿಃ

# ಮಾಯದಂತ ಮಳೆ ಬಂತಣ್ಣ...

ಎನ್.ವಿ.ರಘುರಾಂ.

ಮಧ್ಯಾಹ್ನ ಮೂರು ಗಂಟೆ. ಆರಾಮ ಕುರ್ಚಿಯಲ್ಲಿ ಕುಳಿತುಕೊಂಡೆ ಒಂದು ಸಣ್ಣ ತೂಕಡಿಕೆ ಮುಗಿಸಿ ಕಣ್ಣು ಬಿಟ್ಟಾಗ ಆಗಲೇ ವಾತಾವರಣ ತಣ್ಣಗಾಗಿ, ಕಪ್ಪು ಮೋಡಗಳು ಪಶ್ಚಿಮದಿಂದ ಪೂರ್ವಕ್ಕೆ ಬರುತ್ತಾ ಇರುವುದು ಕಾಣುತ್ತಿತ್ತು. ಹೊರಗೆ ಬಂದು ತಾರಸಿಯ ಕೆಳಗೆ ನೋಡುತ್ತಾ ನಿಂತೆ. ಮನೆ ಮುಂದಿನ ತುಳಸಿಕಟ್ಟೆಯ ಮೇಲೆ ಮಳೆಹನಿಗಳು ಸಣ್ಣದಾಗಿ ತಾಳ ಹಾಕಲು ಪ್ರಾರಂಭ ಮಾಡಿತು. ದೂರದಲ್ಲಿ ಗುಡುಗು ತನ್ನ ತಬಲಾವನ್ನು ಹುರಿಗೊಳಸಿ, ಬಾರಿಸಿ ಶಬ್ದವನ್ನು ಪರೀಕ್ಷಿಸಿ ನೋಡುತ್ತಿರುವಂತೆ ಕೇಳುತ್ತಿತ್ತು. ಒಳಗಿನಿಂದ ಮನದನ್ನೆಯೂ ಬಂದು ನನ್ನ ಪಕ್ಕ ನಿಂತಳು.



"ಮಾಯದಂತ ಮಳೆ ಬಂತಣ್ಣ..." ಹಾಡು ಗುನುಗುವುದಕ್ಕೆ ಪ್ರಾರಂಭ ಮಾಡಿದಳು. ಕೆಲವು ಹಾಡುಗಳು ಕೇವಲ ಹಾಡುಗಳಲ್ಲ. ಅವು ಕಾಲಯಂತ್ರಗಳು. 'ಮಾಯದಂತ ಮಳೆ ಬಂತಣ್ಣ...' ಅಂಥ ಹಾಡುಗಳಲ್ಲಿ ಒಂದು. ನಾನು ಹೈಸ್ಕೂಲಿನಲ್ಲಿ ಇರುವಾಗ ಈ ಹಾಡು ಪ್ರಥಮಬಾರಿಗೆ ಕೇಳಿದ್ದು. ಐದು ದಶಕಗಳ ನಂತರವೂ, ಈ ಹಾಡು ಕೇಳಿದರೆ ಆಗುವ ಸಂತೋಷ ಅಷ್ಟಿಷ್ಟಲ್ಲ......ಈ ಮಳೆ ನೋಡಿದರೆ ಹಳೆಯ ನೆನಪುಗಳು ಬಿಸಿಬೇಳೆ ಬಾತಿನ ಹೊಗೆಯಂತೆ ಒಂದೊಂದಾಗಿ ಮೇಲೇಳುತ್ತವೆ. ಕೆಲವು ಮುಖಗಳು, ಕೆಲವು ಧ್ವನಿಗಳು, ಕೆಲವು ಹಾಡುಗಳು ಮಳೆಹನಿಗಳ ಜೊತೆ ಮನಸ್ಸಿನಂಗಳಕ್ಕೆ ಮತ್ತೆ ಮರಳಿ ಬರುತ್ತವೆ. ಆ ದಿನವೂ ಹಾಗೇ ಆಯಿತು.

"ಮದುವೆ ಗೊತ್ತಾದಾಗ ಇದೇ ತರ ಮಳೆ ಬರುವ ಸೂಚನೆ ಸಿಕ್ಕಿತ್ತು. ಆಗ ನೀನು ಕೊಡೆ ಹಿಡಿದು ಬರೋಕೆ ಹೇಳಿದ್ದೆ. ಆದರೆ ನಾನು ಕೊಡೆ ಮರೆತು ಬಂದಿದ್ದೆ" ಎಂದು ಹಳೆಯದನ್ನು ನೆನಪಿಸಿಕೊಂಡು ಹೇಳಿದೆ.

"ಹೌದು ರೀ, ನಿಮ್ಮ ಮರೆವಿನ ಸ್ವಭಾವದ ಮೊದಲ ತುಂತುರು ಹನಿಗಳು ಅದೆಂದು ನಂತರ ಗೊತ್ತಾಯಿತು!"

"ಹಾಗಾದರೆ ಈಗ?"

"ಈಗ ಅದು ಧಾರಾಕಾರ ಮಳೆಯಾಗಿದೆ. ನಿನ್ನೆ ಹಣ್ಣು, ತರಕಾರಿ, ಕಾಫೀ ಪುಡಿ, ತೆಳು ಅವಲಕ್ಕಿ ತರೋಕೆ ಹೇಳಿದ್ದೆ. ಏನೇನು ತಂದಿದ್ದೀರಿ, ನೆನಪಿದೆಯಾ?"

"ಕಾಫೀ ಪುಡಿ ತಂದೆ" ತಲೆ ಕೆರೆದುಕೊಳ್ಳುತ್ತಾ "ಅಯ್ಯೋ... ಉಳಿದಿದ್ದು ಮಳೆಯ ನೀರಿನ ಜೊತೆ ಹರಿದು ಹೋಯ್ತು!"

"ನೋಡಿ! ನಿಮ್ಮ ನೆನಪು ಅನ್ನೋದು ಆಕಾಶದಲ್ಲಿ ಕಾಣುವ ಮಿಂಚಿನಂತೆ. ಒಂದು ಕ್ಷಣ ಹೊಳೆಯುತ್ತೆ, ಮುಂದಿನ ಕ್ಷಣ ಕಣ್ಮರೆಯಾಗುತ್ತೆ"

"ನಿನ್ನ ಕೋಪವೂ ಕಡಿಮೆಯಿಲ್ಲ. ಮಿಂಚಿನ ಜೊತೆಗೆ ಬರುವ ಗುಡುಗುಗಳು"

ಇಬ್ಬರಿಗೂ ನಗು ಬಂತು.

"ಬನ್ನಿ, ಬಿಸಿ ಕಾಫಿ ಕುಡಿಯುವರಂತೆ" ಎನ್ನುತ್ತಾ ಆಕೆ ಒಳಗೆ ಹೋದಳು. ನಾನು ಆಕೆಯನ್ನು ಹಿಂಬಾಲಿಸಿದೆ.

ಹೊರಗೆ ಮಳೆ ಹಿತವಾಗಿ ಸುರಿಯಲು ಪ್ರಾರಂಭ ಮಾಡಿತ್ತು. ಅಂಗಳದಲ್ಲಿದ್ದ ಮಾವಿನ ಮರ ಗಾಳಿಗೆ ತೂಗುತ್ತಿರುವುದು ಕಿಟಕಿಯಿಂದ ಕಾಣುತ್ತಿತ್ತು.

"ಆದರೂ ಒಂದು ವಿಷಯ ಹೇಳಬೇಕು. ಈ ಮಳೆ ನಮ್ಮ ಜೀವನದಂತಿದೆ" ಎಂದೆ.

"ಹೇಗೆ?"

"ಬದುಕಿನಲ್ಲಿ ಮೊದಲ ಕೆಲವು ವರ್ಷಗಳಲ್ಲಿ ತೊಂದರೆಗಳು ಸೋನೆ ಮಳೆಯಂತೆ ಕಂಡೆವು. ಮಕ್ಕಳು ಚಿಕ್ಕವರಿದ್ದಾಗ ಜವಾಬ್ದಾರಿಗಳು ಧಾರಾಕಾರ ಮಳೆಯಾಗಿ ಸುರಿದವು. ಕೆಲವೊಮ್ಮೆ ಖರ್ಚುಗಳು ಬಿಟ್ಟುಬಿಡದ ಮಳೆಯಾದವು. ಕೆಲವೊಮ್ಮೆ ಸಮಸ್ಯೆಗಳು ರಣಚಂಡಿ ಮಳೆಯಂತೆ ಅಪ್ಪಳಿಸಿದವು."

"ಆದರೂ ನಾವು ನೆನೆಯದೆ ನಿಂತೆವಲ್ಲ?" ಮನದನ್ನೆ ಕೇಳಿದಳು.

"ಹೌದು. ಏಕೆಂದರೆ ನೀನು ಕೊಡೆಯಾಗಿದ್ದೆ."

ಅವಳು ಜೋರಾಗಿ ನಕ್ಕಳು. "ಅದನ್ನು ಒಪ್ಪಿಕೊಂಡಿದ್ದಕ್ಕೆ ಧನ್ಯವಾದಗಳು."

"ಕೆಲವೊಮ್ಮೆ ತುಂತುರು ಹನಿಗಳ ತರಹ ಸಣ್ಣ, ಸಣ್ಣ ಜಗಳಗಳು. ಕೆಲವೊಮ್ಮೆ ಜೋರು ಮಳೆಯ ತರಹ ದೊಡ್ಡ ವಾದಗಳು. ಆದರೆ ಕೊನೆಗೆ ನೆಲ ಹಸಿರಾಗುವಂತೆ, ನಮ್ಮ ಮನಸ್ಸೂ ಮತ್ತೆ ಹಸಿರಾಗುತ್ತಿತ್ತು" ಎಂದೆ.

"ಅಯ್ಯೋ! ಇವತ್ತು ಕವಿ ಮೂಡ್ಗೆ ಹೋಗಿದ್ದೀರಾ?"

"ಮಳೆಗಾಲದಲ್ಲಿ ಕವಿಯಾಗದವರು ಯಾರು?"

"ಅದೇನೋ ಸತ್ಯ. ಆದರೆ, ಹಿಂದುಗಡೆ ಕೊಟ್ಟಿಗೆಯಲ್ಲಿ ಎರಡು ಹೆಂಚು ಒಡೆದಿದೆ, ನಾಳೆನೇ ಅಲ್ಲಿ ಹೊಸ ಹೆಂಚು ಹಾಕಿಸಬೇಕು"

"ಅಯ್ಯಯ್ಯೋ! ನಾನು ಕಾವ್ಯ ಹೇಳುತ್ತಿದ್ದೆ, ನೀನು ಮತ್ತೆ ವಾಸ್ತವಕ್ಕೆ ತಂದೆ"

"ಅದೇ ಹೆಂಡತಿಯ ಕೆಲಸ! ಗಂಡ ಮೋಡವಾದರೆ, ಹೆಂಡತಿ ನೆಲವಾಗಬೇಕು. ಇಲ್ಲದಿದ್ದರೆ ಮಳೆ ಎಲ್ಲಿಗೆ ಬೀಳುತ್ತದೆ?"

"ಅದ್ಭುತ! ಹಾಗಿದ್ದರೆ ನಾನು ಮೋಡ, ನೀನು ನೆಲ"

"ಹೌದು. ಆದರೆ ಮಳೆಗಾಲದ ಮೋಡದ ತರಹ ವರ್ಷದಲ್ಲಿ ಮೂರು ತಿಂಗಳು ಸಂಬಳ ತಂದರೆ ಆಗುವುದಿಲ್ಲ! ಪ್ರತಿ ತಿಂಗಳೂ ಸರಿಯಾಗಿ ಸಂಬಳ ತಂದು ಕೊಡಬೇಕು!"

ಮತ್ತೆ ಇಬ್ಬರೂ ನಕ್ಕೆವು. ಮಳೆ ಇನ್ನಷ್ಟು ಜೋರಾಯಿತು.

"ನೋಡು, ಮಳೆ ನಮ್ಮ ಮಾತು ಕೇಳಿ ಚಪ್ಪಾಳೆ ತಟ್ಟುತ್ತಿದೆ!" ಎಂದೆ

"ಇಲ್ಲಾರೀ, ಅದು ಹಾಡು ಹೇಳುತ್ತಿದೆ"

ಹೌದಾ! ಯಾವ ಹಾಡು?"

"ಮಾಯದಂತ ಮಳೆ ಬಂತಣ್ಣ, ಮಾತಿನೊಳಗೆ ನಗು ತಂತಣ್ಣ..."

ಹೊರಗೆ ಮಳೆ ತನ್ನ ಪಾಡಿಗೆ ತಾನು ಸುರಿಯುತ್ತಿತ್ತು. ಮನೆಯೊಳಗೆ ನೆನಪುಗಳು, ಹಾಸ್ಯ ಮತ್ತು ನಾಲ್ಕು ದಶಕದ ಒಡನಾಟ ಮಳೆಹನಿಗಳಂತೆ ಜಿನುಗುತ್ತಿತ್ತು. ಮಳೆ ನಿಂತರೂ ಆ ಮಾತುಗಳ ತೇವ ಮಾತ್ರ ಇನ್ನೂ ಬಹಳ ಕಾಲ ಒಣಗುವುದಿಲ್ಲ ಎಂಬುದು ಇಬ್ಬರಿಗೂ ಗೊತ್ತಿತ್ತು. ■

# ಮಳೆ ತಂದ ಅವಾಂತರ

**ಕುಮುದಾ ಪುರುಷೋತ್ತಮ್**

ಕಿಟಕಿಯಿಂದ ಹೊರಗೆ ಗುಡುಗು ಮಿಂಚುಗಳ ಜೊತೆ ಮೆರವಣಿಗೆಯಲ್ಲಿ ಸಾಗುತ್ತಾ ಆಗಾಗ ಆನೆಕಲ್ಲುಗಳನ್ನು ಉದುರಿಸುತ್ತಾಸಾಗಿದ್ದ ಮಳೆರಾಯನನ್ನೇ ನೋಡುತ್ತಾ ನಿಂತಿದ್ದೆ.



ಇದ್ಯಾವ ಮಳೆ? ಮುಂಗಾರು ಮಳೆಂಯೋ ಹಿಂಗಾರು ಮಳೆಂಯೋ? ಅವನನ್ನೇ ಕೇಳಿದೆ. ನನಗೇನು ಗೊತ್ತು ಎಂದು ಕಿಡಿಕಾರುತ್ತಾ ಗುಡುಗಿದ. "ನಿನಗಲ್ಲದೇ ಇನ್ಯಾರಿಗೆ ಗೊತ್ತು?" ಆಕ್ಷೇಪವೆತ್ತಿದೆ. "ನನ್ನನ್ನೇನು ಕೇಳ್ತೀಯ? ಪ್ರಕೃತೀನ ಕೇಳು. ನಾನವಳ ಆಜ್ಞಾಧಾರಕ. ಮೊದಲೆಲ್ಲಾ ಋತುವಿಗನು– ಸಾರವಾಗಿ ನಿರ್ದಿಷ್ಟ ಸಮಯದಲ್ಲಿ ಹೋಗಿ ಮಳೆ ಸುರಿಸಿಬಾ ಎನ್ನುತ್ತಿದ್ದವಳು ಅದೆಂಥದ್ದೋ ಜಾಗತಿಕ ತಾಪಮಾನ ಹೆಚ್ಚಳವಂತೆ. ಗೊತ್ತು ಗುರಿ ಇಲ್ಲದೆ ಯಾವಾಗೆಂದರೆ ಆವಾಗ ಹೋಗಿ ಮಳೆ ಸುರಿಸಿ ಬಾ ಎನ್ನುತ್ತಾಳೆ. ಮರುಭೂಮಿಯಲ್ಲಿ ಪ್ರವಾಹ! ಇದೆಲ್ಲಾದರೂ ಕೇಳಿದ್ದೀಯಾ? ಈಗ ಮುಂಗಾರು ಹಿಂಗಾರೆಲ್ಲಾ ಕಲಸುಮೇಲೋಗರ" ಎಂದು ಹೇಳುತ್ತಾ ಓವರ್ ಟೈಂ ಮಾಡುತ್ತಿದ್ದ ಕಾರ್ಮಿಕನಂತೆ ಸಿಡುಕಿ ತುಂತುರು ಮಳೆಯಾಗಿ ನಿರ್ಗಮಿಸಿದ.

ಹಲವು ವರ್ಷಗಳ ಮುನ್ನ ಇಂತಹುದೇ ಮಳೆಯದಿನ ನಾವನುಭವಿಸಿದ ಅವಾಂತರಗಳ ಸರಮಾಲೆ ಕಣ್ಮುಂದೆ ಹಾದುಹೋಯಿತು.

ನಾವು ಮದರಾಸಿನ ಅಡೆಯಾರ್ ಸಮೀಪದಲ್ಲಿರುವ ಐ.ಐ.ಟಿ ಕ್ಯಾಂಪಸ್ಸಿನಲ್ಲಿ ವಾಸವಾಗಿದ್ದ ದಿನಗಳು. ಸೈಕ್ಲೋನ್ ಹಾದುಹೋಗುವುದೆಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿತ್ತು. ಅಂದೇ ನಮ್ಮ ಅತ್ಯಾಪ್ತರೊಬ್ಬರ ಮಗಳ ಮದುವೆಯ ಆರತಕ್ಷತೆ ಎಗ್ಮೋರಿನ ಕಲ್ಯಾಣ ಮಂಟಪದಲ್ಲಿ ಏರ್ಪಾಡಾಗಿತ್ತು. ಬೆಳಗ್ಗಿನಿಂದ ಮೋಡದ ವಾತಾವರಣ. ಸಂಜೆ ಹೇಗೋ ಏನೋ ಎಂಬ ಆತಂಕದಲ್ಲೇ ಕಳೆದೆವು. ಕೊನೆಗೆ ಬೇಗ ಹೊರಟು ಬೇಗ ಬಂದು ಬಿಡುವುದೆಂದು ನಿಶ್ಚಯಿಸಿ ನಾಲ್ಕೂವರೆಗೆಲ್ಲಾ ಕಾರ್ನಲ್ಲಿ ಹೊರಟೆವು. ನಮ್ಮಿಬ್ಬರು ಮಕ್ಕಳು ನಮಗಲ್ಲಿ ಬೋರ್ ಹೊಡೆಯುತ್ತೆ. ನಾವಿಲ್ಲಿ ಆಟಕ್ಕೆ ಹೋಗಿ ಬಂದು ಮನೆಯಲ್ಲಿ ಇರುತ್ತೇವೆ. ನೀವು ಹೋಗಿ ಬನ್ನಿ ಎಂದು ಆಟಕ್ಕೋಡಿದರು.

ನಾವು ದಟ್ಟವಾಹನಗಳ ನಡುವೆ ತೆವಳುತ್ತಾ ದೂರವಿದ್ದ ಮದುವೆ ಮನೆ ತಲಪಿದಾಗ ಆರುಗಂಟೆ. ಆರತಕ್ಷತೆಯ ಸಭಾಂಗಣ ಹಾಳು ಸುರಿಯುತ್ತಿತ್ತು.ವೇದಿಕೆಯ ಹೂವಿನ ಅಲಂಕಾರ ಅದೇ ಆರಂಭವಾಗಿತ್ತು. ಬೇರೆ ದಾರಿ ಇಲ್ಲದೆ ಕಾಯುತ್ತಾ ಕುಳಿತೆವು.

ಗಡಿಯಾರದ ಮುಳ್ಳು ಏಳು ಸಮೀಪಿಸುತ್ತಿದ್ದಂತೆ ಮೊಟ್ಟೆಯೊಡೆದು ಬರುವ ಪಾತರಗಿತ್ತಿಗಳಂತೆ ಅಲಂಕರಿಸಿಕೊಂಡ ಮನೆಯವರು ಒಬ್ಬೊಬ್ಬರಾಗಿ ಮುಚ್ಚಿದ್ದ ಬಾಗಿಲುಗಳಿಂದ ಬಂದರು. ಏಳೂವರೆಗೆ ಸಾಲಂಕೃತ ವಧೂವರರು ಕೈ ಕೈ ಹಿಡಿದುಕೊಂಡು ಎರಡೂ ಬದಿಯಿಂದ ಕ್ಲಿಕ್ ಆಗುತ್ತಿದ್ದ ಕ್ಯಾಮರಾವಿನತ್ತ ಹಲ್ಲು ಕಿರಿಯುತ್ತಾ ಬಂದು ಆಸೀನರಾದರು. ಹೊರಗೆ ಮಳೆ ಹನಿಹನಿಯಾಗಿ ಆರಂಭವಾಯ್ತು. ಕಾಯುತ್ತಿದ್ದ ನಾವು ವಧುವರರ ಕೈಕುಲುಕಿ ಉಡುಗೊರೆ ಹಸ್ತಾಂತರ ಮಾಡಿ ಊಟದಮನೆಯತ್ತ ಧಾವಿಸಿದೆವು. ಅಲ್ಲೇನಿದೆ ? ಆಕಳಿಸುತ್ತಾ ನಿದ್ದೆಯಿಂದೆದ್ದಿದ್ದ ಪರಿಚಾರಕರು ಆಗ ಎಲೆ ಹಾಕುತ್ತಿದ್ದರು. ಮೊದಲನೇ ಸಾಲಿನ ಮೊದಲೆರಡು ಕುರ್ಚಿ ಆಕ್ರಮಿಸಿಕೊಂಡು ಕಾಯುತ್ತಾ ಕುಳಿತಾಗ ಮಳೆ ಜೋರಾಯಿತು. ಕುರ್ಚಿಗಳೆಲ್ಲಾ ತುಂಬಿ ವ್ಯಂಜನಗಳೆಲ್ಲಾ ಬರುವವೇಳೆಗೆ ಎಂಟು ಗಂಟೆ ದಾಟಿತ್ತು. ನನಗೋ ಮಕ್ಕಳದೇ ಚಿಂತೆ. ಕರೆಂಟ್ ಎನಾದರೂ ಕೈಕೊಟ್ಟರೆ! ಬೇಗ ಬೇಗ ಊಟ ಮುಗಿಸಿ ಓಡುತ್ತ ಕಾರಿನ ಬಳಿ ಬಂದರೆ ನಾಲ್ಕೂ ಕಡೆ ಅಡ್ಡಾದಿಡ್ಡಿಯಾಗಿ ತಮ್ಮ ವಾಹನ ನಿಲ್ಲಿಸಿ ಇತರೇ ಕಾರಿನ ಚಾಲಕರು ನಮ್ಮನ್ನು ಚಕ್ರವ್ಯೂಹದಲ್ಲಿ ಸಿಲುಕಿಸಿದ್ದರು. ಬೇರೆ ದಾರಿ ಕಾಣದೆ ಸುರಿಯುವ ಮಳೆಯಲ್ಲಿ ಕಾರಿನಲ್ಲಿಯೇ ಕುಳಿತು ವಿಮುಕ್ತಿಗಾಗಿ ಬೇಡಿಕೊಳ್ಳುತ್ತ ಕಾಯುತ್ತಾ ಕುಳಿತೆವು. ಒಂಬತ್ತೂವರೆಗೆ ಶಾಪ ವಿಮೋಚನೆಯಾಗಿ ಮೋಣಕಾಲುದ್ದ ನೀರಿನಲ್ಲಿ ತೇಲುತ್ತಾ ಮಂದಗತಿಯಲ್ಲಿ ಕಾರು ಚಲಿಸತೊಡಗಿತು. ಅಡೆಯಾರ್ ಸೇತುವೆ ತಲಪಿದಾಗ ಗಡಿಯಾರದ ಸಣ್ಣಮುಳ್ಳು ಹನ್ನೊಂದು ಸಮೀಪಿಸಿತ್ತು. ಈಗಿನಂತೆ ಮೊಬೈಲ್ನ ಅವಿಷ್ಕಾರವಾಗದ ದಿನಗಳು. ಮಕ್ಕಳನ್ನು ಸಂಪರ್ಕಿಸುವ ಸಾಧ್ಯತೆಯೇ ಇರಲಿಲ್ಲ. ಸೇತುವೆಯನ್ನು ದಾಟಿದೊಡನೆ ನಮ್ಮ ವಾಹನ ಇನ್ನು ನನ್ಕೈಲಿ ಮುಂದೆ ಹೋಗಲು ಸಾಧ್ಯವಿಲ್ಲ ಎನ್ನುತ್ತಾ ಒಮ್ಮೆ ಮೇಲುಸಿರು ಬಿಟ್ಟು ತಟಸ್ಥವಾಯಿತು.

ಮುಚ್ಚಿದ್ದ ಅಂಗಡಿಯಮುಂದೆ ಕುಳಿತಿದ್ದ ವ್ಯಕ್ತಿ ಛತ್ರಿ ಹಿಡಿದು ಓಡಿಬಂದ." ಎನ್ನ ಆಚ್ಚಿ ಸಾರ್?' "

"ಎಂಜಿನ್ನಿನಲ್ಲಿ ನೀರು ತುಂಬಿದೆ. ಇಲ್ಲಿ ಯಾರಾದರೂ ಮೆಕ್ಯಾನಿಕ್ ಸಿಗ್ತಾರಾ?"

"ಇಂದ ಮಳೆಲಿ ಯಾರು ವರಾಂಗೋ?ಅದೆಲ್ಲಾ ನಾಳಿಕ್ಕಿ" ಎಂದು ನಗಾಡಿದ.

ಆ ವೇಳೆಗೆ ನಮ್ಮ ಪುಣ್ಯಕ್ಕೆ ಸಾಗುತ್ತಿದ್ದ ಕಾರಿನ ಚಾಲಕರೊಬ್ಬರು ತಮ್ಮ ವಾಹನ ನಿಲ್ಲಿಸಿ ಕೇಳಿದರು." ನೀಡ್ ಎನಿ ಹೆಲ್ಪ್?" ಯಜಮಾನರು ನಮ್ಮ ಪರಿಸ್ಥಿತಿಯನ್ನು ವಿವರಿಸಿದರು. ಆತ "ಬನ್ನಿ ಸರ್. ನಾನು ನಿಮ್ಮಿಬ್ಬರನ್ನು ನಿಮ್ಮಮನೆಗೆ ತಲಪಿಸುತ್ತೇನೆ" ಎಂದು ಆಹ್ವಾನಿಸಿದರು. "ನಾನು ನನ್ನ ಕಾರನ್ನು ಇಲ್ಲೇ ಬಿಟ್ಟುಬರುವಂತಿಲ್ಲ. ಇದನ್ನು ಕೊಳ್ಳಲು ತೆಗೆದ ಸಾಲವೇ ತೀರಿಲ್ಲ. ನನ್ನ ಪತ್ನಿಯನ್ನು ಮನೆ ತಲಪಿಸಿಬಿಡಿ. ಚಿಕ್ಕ ಮಕ್ಕಳು ಕಾಯುತ್ತಿರುತ್ತಾರೆ" ಎಂದರು. ನಾನು ಕಾರೇರಿದೊಡನೆ ಅದು ಐ.ಐ.ಟಿ ಯತ್ತ ಸಾಗಿತು. ನಾವತ್ತ ಹೋದೊಡನೆ ಅಲ್ಲಿದ್ದ ವ್ಯಕ್ತಿ ತರಾಟೆಗೆ ತೆಗೆದುಕೊಂಡನಂತೆ. "ಎನ್ನ ಸಾರ್.ಪಾತಾ ಪಡಿಚ್ಚವಂಗಳ ಮಾದ್ರಿ ಇರ್ಕಿಂಗೊ. ಇದೂ ತೆರಿಯಾದಾ? ಇಂದ ಮಳೆಯ ರಾತ್ರಿನೇರತ್ತಿಲೆ ತೆರಿಯಾದ ಆಂಬಳೆಯೊಡನ್ ಪೊಂಡಾಟ್ಟಿಯೆ ಅನುಪರಾಳಾ? ಅಮ್ಮಾ ನಗೈ ವೇರೆ ಪೋಟ್ಟಿರಂದಾಂಗೊ." ಎಂದು ಬೈದು ಘಾಬರಿ ಪಡಿಸಿದನಂತೆ! ಅಷ್ಟರಲ್ಲಿ ಕುತೂಹಲದಿಂದ ನೋಡಲು ಬಂದ ಮೂರು ನಾಲ್ಕು ಯುವಕರಿಗೆ ಅವರು ಕೇಳಿದಷ್ಟು ಹಣ ನೀಡಿ ತಳ್ಳಿಸಿಕೊಂಡ ಕಾರಿನ ಮೆರವಣಿಗೆ ಮಂದ ಗತಿಯಲ್ಲಿ ಐ.ಐ.ಟಿ ಯತ್ತ ಸಾಗಿತು.

ಇತ್ತ ನಾ ಕುಳಿತ ಕಾರು ನನ್ನನ್ನು ಮನೆ ತಲಪಿಸಿ ನಾನು ಆ ವ್ಯಕ್ತಿಗೆ ಧನ್ಯವಾದ


ಹೇಳಿದೆ. "ಥ್ಯಾಂಕ್ಸ್ ಹೇಳ್ಬೇಡಿ ಮೇಡಂ. ಹತ್ತು ವರ್ಷಗಳ ಹಿಂದೆ ನಾನಿಲ್ಲಿ ವಿದ್ಯಾರ್ಥಿಯಾಗಿದ್ದೆ. ನಿಮ್ಮ ಪತಿ ನನಗೆ ಗುರು ಸಮಾನ. ಇದು ನನ್ನ ಕಿಂಚಿತ್ ಗುರುದಕ್ಷಿಣೆ ಎಂದುಕೊಳ್ಳಿ "ಹೇಳುತ್ತಾ ಕೈಬೀಸಿ ಹೊರಟ. ಕತ್ತಲು ತುಂಬಿದ ಮನೆಯ ಕಿಟಕಿಯಿಂದ ಉರಿಯುತ್ತಿದ್ದ ಮೋಂಬತ್ತಿ ಬೆಳಕಿನಲ್ಲಿ ಎರಡು ಜೋಡಿ ಕಣ್ಣುಗಳು ಕಂಡವು. ಇಬ್ಬರನ್ನೂ ಮಲಗಿಸಿ ಅದೇ ಬೆಳಕಿನಲ್ಲಿ ನನ್ನ ಕಣ್ಣೆರಡು ಯಜಮಾನರಿಗಾಗಿ ಕಾದವು.

ಸುಮಾರು ಮೂರು ಗಂಟೆಯವೇಳೆಗೆ ಗಾಡಾಂಧಕಾರದಲ್ಲಿ ನಡೆಯುತ್ತಾ ಬಂದು ಮನೆ ತಲಪಿದರು.

"ಕಾರೆಲ್ಲಿ? ಅಲ್ಲೇ ಬಿಟ್ಟು ಬಂದ್ರಾ?"

"ಅಲ್ಲಿ ಹೇಗೆ ಬಿಡೋದು? ತಳ್ಳುತ್ತಾ ಬಂದುಕ್ಯಾಪಸ್ ಗೇಟಿನ ಒಳಕ್ಕೆ ಬಂದು ಸೆಕ್ಯೂರಿಟಿ ಆಫೀಸಿನಬಳಿ ನಿಲ್ಲಿಸಿ ಬಂದೆ. ನಾಳೆ ರಿಪೇರಿ "ಎಂದು ವಿಶ್ರಾಂತಿಗೆ ತೆರಳಿದರು.

ಮಳೆರಾಯ ಧಾರಾಕಾರವಾಗಿ ಸುರಿದಾಗಲೆಲ್ಲಾ ಆದ ಈ ಫಜೀತಿಯನ್ನು ನೆನಪಿಸಿ ಹೋಗುತ್ತಾನೆ. ■



## ಹೊಂಗೆ ಅರಳಿ ಚಾಟ್ !

✍ಇ. ಅರ್. ರಾಮಚಂದ್ರನ್

ಹೊಂಗೆ ಮರ ಮತ್ತು ಮತ್ತು ಅರಳಿ ಮರ ಮಾತಾಡ್ತಿದ್ವು.

'ಮಳೆ ಬಂತು ಅಂದ್ರೆ ಎಷ್ಟು ಖುಷಿಯಾಗುತ್ತೆ. ನಾವು ಚಿಕ್ಕವರಾಗಿದ್ದಾಗ ಮಳೆಗೆ ಕಾಯ್ತಾ ಇದ್ವೀ ಜ್ಞ್ಯಾಪಕ ಇದೆಯಾ?'

'ಓಹೋ! ಚೆನ್ನಾಗಿದೆ. ದಿನಾ ಮಾಲಿ ಬಂದು ನಮಗೆ ಊಟಕೊಟ್ಟು ಹೋಗೋವ್ನು .. ಚಿಕ್ಕವರಾಗಿದ್ದಾಗ ಒಂದು ಬಟ್ಲು ನೀರು. ಆಮೇಲೆ ಒಂದು ಅರ್ಧ ಬಕೆಟಲ್ಲಿ ಊಟ ಬರೋದು. ಅದರಲ್ಲಿ ತೂತು ಬಕೆಟ್ನಲ್ಲಿ ನಮ್ಮ ಅರ್ಧ ಊಟ ನೆಲ ಪಾಲಾಗೋದು! ಹೊಟ್ಟೆ ಉರಿದುಹೋಗೋದು!'

'ಆದ್ರೆ ಮಳೆ ಬಂದಾಗ್ಲೇ ನಮಗೆ ಹೊಟ್ಟೆ ತುಂಬ ಊಟ ಮಾಡಿದ ಹಾಗೆ ಅನ್ನೋದು.'

'ಅದ್ರ ಮಜಾನೇ ಬೇರೆ. ಒಂದೇ ಸಮ ಬರುತ್ತೆ ಬರುತ್ತೆ ಅಂತ ಕಾಯ್ತಿದ್ದಾಗ, ಹಗಲು ರಾತ್ರಿ ಮಳೆ ಬಂದು ನನಗೆ ದಿನಾ ಮದುವೆ ಊಟ ಮಾಡಿದ ಹಾಗೆ ಇರೋದು!.'

'ನಿನ್ನ ಎದುರಲ್ಲಿರುವ ಛತ್ರ ನೋಡಿ ಅಲ್ಲಿ ಮದುವೆಗೆ ಸಿಗೋ ಲಾಡು, ಚಿರೋಟಿ ನೋಡಿ ಬಾಯಲ್ಲಿ ನೀರು ಬರೋ ಹಾಗೆ ಮಾಡ್ತಿಯಲ್ಲೇ ಅರಳೀ!'

'ಅಲ್ವೇ ಮತ್ತೆ ಹೊಂಗೆ ! ಸುಡು ಬಿಸಿಗೇಲಿ ಒಣಗಿ ಸೊರಗಿ ಇನ್ನು ತಡ್ಕೊಳಕ್ಕೆ ಸಾಧ್ಯವಿಲ್ಲ ಅನ್ನೋ ಅಷ್ಟು ಹೊತ್ತಿಗೆ ಮಳೆರಾಯ ಬಂದು ನಮಗೆ ಜೀವ ಕೊಡ್ತಾನೆ ಪುಣ್ಯಾತ್ಮ'.

'ಚಿಕ್ಕವರಾಗಿದ್ದಾಗ...ಎಲ್ಲಿ ಯಾರಾದ್ರೂ ತುಳಿದು ಬಿಡ್ತರೊಂತ ನಮಗೆ ಮುಳ್ಳಿನಗಾರ್ಡ್ ಹಾಕ್ತಿದ್ರು..ಜ್ಞಾಪಕ ಇದೆಯಾ'?

'ಚೆನ್ನಾಗಿದೆ! ಎಷ್ಟೋ ಸರ್ತಿ ಹುಡುಗ್ರು, ಹಸುಗಳು, ಎಮ್ಮೆಗಳು ಕೆಸರಲ್ಲಿ ನಮ್ಮನ್ನು ತುಳುಕೊಂಡು ಹೋಗೋವ್ರು.... ನನಗಂತೂ ದಮ್ ಕಟ್ಟಿ ನಾನು ಸತ್ತೇ ಹೋಗ್ತೀನಿ ಅಂತ ಅನ್ಕೊಂಡಿದ್ದೆ.ಹೇಗೆ ಬದುಕಿದ್ನೋ ದೇವ್ರೇ ಬಲ್ಲ.'

'ಎಲ್ಲದಕ್ಕೂ ಆಯಸ್ಸು ಗಟ್ಟಿ ಇರ್ಬೇಕು ಹೊಂಗೆ .'

'ನಿಜ. ನಮ ಕಣ್ ಮುಂದೇನೆ ಆ ತೆಂಗಿನ ಮರ ನೋಡು.. ಸ್ವಲ್ಪ ಗಾಳಿ ಬರಕ್ಕಿಲ್ಲ ಕುಡಿದವನ ಹಾಗೆ ತೂರಾಡ್ತ ತುರಾಡ್ತ ಕೇಳ್ದೆ ಯಾರು ಹೋಗ್ತಿದ್ರೆ ಅಂತ ನೋಡ್ದೆ ಕೆಳಗೆ ಕಾಯಿ ಎಸಿಯುತ್ತಲ್ಲ...! ಎಷ್ಟೋ ಜನ ತಲೆ ಒಡ್ಕೊಂಡಿದಾರೆ ....ಸ್ವಲ್ಪಾನು ಮ್ಯಾನರ್ಸ್ ಇಲ್ಲ ಕಣೆ ಅದಕ್ಕೆ.'

'ಹೊಂಗೆ ಅದಕ್ಕೆ ಬಹಳ ಜಂಭ ಬಂದಿದೆ ಕಣೆ ಈಗ.

ಮುಂಚೆ ಕೇಳವ್ರು ಇರ್ಲಿಲ್ಲ. ಈಗ ಒಂದು ಎಳ್ ನೀರಿಗೆ 60 ರುಪಾಯಂತೆ. ನೂರಕ್ಕೂ ಹೋಗ್ಬಹುದು. ಅದಕ್ಕೆ ಆಕೆಗೆ ತಲೆ ತಿರುಗಿದೆ.'

'ಅದು ಹೋಗ್ಲಿ ಬಿಡು...ಮಳೆ ಬಂದ ತಕ್ಷಣ ನಮ್ಮ ಹುಡುಗ್ರು, ಹುಡುಗೀರು, ಕಲರ್ ಕಲರ್ ಕೆಂಪು, ನೀಲಿ, ಹಸಿರು, ಬಟ್ಟೆ ಹಾಕ್ಕೊಂಡು ಸಾಲಾಗಿ ಕಲಕಲ ಅಂತ ನಗ್ತಾ ಗಾಳಿಲಿ ತೂಗ್ತಾ ಇದ್ರೆ ಎಷ್ಟು ಚೆನ್ನಾಗಿ ಕಾಣಿಸ್ತಾರಲ್ವ ? ನಮ್ಮ ಬೊಗನವಿಲ್ಲ ನೋಡು. ಬಣ್ಣ ಬಣ್ಣದ ಬಟ್ಟೆ ಹಾಕ್ಕೊಂಡು ಆಕಾಶಕ್ಕೆ ಹೊರಟೀದಾಳೆ! ಮಳೆ ಬಂದ್ಮೇಲೆ ಅವಳನ್ನ ಹಿಡಿಯೋರಿಲ್ಲ.'

'ಅಬ್ಸೊಲ್ಯೂಟ್ಲಿ!'

'ಮೊನ್ನೆ ನಿನ್ನನ್ನು ಅಮೇರಿಕನ್ ಕಪಲ್ ಫೋಟೋ ತೆಗೆದ್ರು ಅಂತ ನನಗೆ ಇಂಗ್ಲಿಷ್ ಝಾಡಿಸ್ತಿದೆಯಾ?'

'ಹಾಗೇನಿಲ್ಲ. ನಮ್ಮ ಹುಡುಗ್ರ ಫೋಟೋ ತೆಗಿಸ್ಬೇಕು.'

'ಹೌದು. ಇನ್ನೇನು ವನ ಮಹೋತ್ಸವ ಬರುತ್ತಲ್ಲ. ಫೋಟೋಗಳು ಸಿಕ್ಕಾಪಟ್ಟೆ ತೆಗೀತಾರೆ. ಮಾಲಿಗೆ ಕೆಳಗಡೆ ಒಂದಿಷ್ಟು ಔಷಧಿ ಗಿಡಗಳು ಹಾಕಪ್ಪ ಅಂತ ಹೇಳ್ಬೇಕು'

'ಹೌದು. ಅರಳಿ ನಿನ್ನ ಕೆಮ್ಮಿಗೆ ತುಳ್ಸಿ ಮತ್ತು ಶುಂಠಿ ಒಳ್ಳೇದು. ಅದನ್ನು ಹಾಕ್ಸು'

'ನಿನ್ನ ಬೆನ್ನು ನೋವಿಗೆ ಯಾವುದಾದ್ರೂ ಹೇಳೋಣ. ನಮ್ಗೆಲ್ಲಾ ವಯಸ್ಸಾಯಿತಲ್ಲಾ ಹೊಂಗೆ..'

'ಏನೆ ಇಷ್ಟು ಬೇಗ ವಯಸ್ಸು ಅಂತ ಮುದುಕಿ ತರ ಮಾತಾಡ್ತೀ ! ನಮಗೆ ಅಬ್ಬಬ್ಬಾ ಅಂದ್ರೆ 450, 500 ವರ್ಷ. ಅಷ್ಟೇ. ನಮಗೆ ಇನ್ನು ಅರ್ಧ ಆಯಸ್ಸು ಆಗಿಲ್ಲ. ನಾವು ಆರಾಮವಾಗಿ 1500 ವರ್ಷ ಬದುಕ್ತಿವಿ! ಸರಿಯಾಗಿ ಅದ ಪೌಷ್ಟಿಕ ಆಹಾರ ಸಿಕ್ಕಿದ್ರೆ ನಮ್ಮ ಚಿಕ್ಕಮ್ಮನ ಹಾಗೆ ಆಗ್ತಿವಿ.. ಆಕೆಗೆ ಈಗ 3000 ವಯಸ್ಸು ಗೊತ್ತಾ!'

'ಅಬ್ಬ! ನಿನಗೂ ಹೆಚ್ಚು ಕಡಿಮ ಆಯಸ್ಸು ನನ್ನಷ್ಟೇ ಆಯಸ್ಸು ಅಲ್ವೇನೇ. ಮಳೆ ಗಾಳಿ ಎರಡೂ ಒಟ್ಟಿಗೆ ಹೊಡೆದು ನನ್ನ ರೆಂಭೆಗಳಿಗೆ ಸಿಕ್ಕಾಪಟ್ಟೆ ನೋವು ಕಣೆ ಅರಳೀ! ಎಲ್ಲಿ ಸ್ಟ್ರೋಕ್ ಹೊಡೆಯುತ್ತೋಂತ ಹೆದ್ರಿದಿನಿ ನಾನು.'

'ಹೊಂಗೆ ಇಲ್ಲಿ ಕೇಳು.! ನಿನ್ನ ರೆಂಭೆಗಳನ್ನು ಸರಿಯಾಗಿ ನೋಡ್ಕೊ. ಮಳೆ ಜೋರಾಗಿ ಅವುಗಳು ಬೀದಿಲಿ ಬಿದ್ರೆ ಮುಲಾಜಿಲ್ದೆ ನಿನ್ನನ್ನೂ ಸೇರಿಸಿ ಕಾರ್ಪೊರೇಶನ್ನವ್ರು ಕಡಿದು ಹಾಕ್ತಾರೆ!

'ನನ್ನ ಪ್ರಾಬ್ಲಮ್ ಕೇಳಿಸ್ಕೊಳೆ ಅರಳಿ! ನಾವು ಹುಟ್ಟಿದಾಗಿಂತ ನಿಂತೇ ಇರ್ತೀವಿ. ಜೊತೆಗೆ ಈ ಮಳೇಲಿ ಕೊರಿಯೋ ಛಳಿ ಬೇರೆ! ನನಗೆ ಈಗ್ಲೇ ವಿಪರೀತ ಬೆನ್ನು ನೋವು ಕಣೆ. ಮುಂದೆ ವೆರಿಕೊಸ್ ವಿನ್ಸ್ ಮತ್ತು ಕೊನೆಗೆ ಆಸ್ಟಿಯೊಪೊರೆಸಿಸ್ ಬರುತ್ತೆ. ನಮಗೆ ನೀ ಟ್ರಾನ್ಸ್ ಪ್ಲಾಂಟ್ ಮಾಡ್ಲೆ ಬೇಕಾಗುತ್ತೆ.'

'ಅದಕ್ಕೆಲ್ಲಾ ಕಾರ್ಪೊರೇಷನ್ ಹತ್ರ ಬಜೆಟ್ ಇರಲ್ಲ.,'

'ನಾನು ಅದಕ್ಕೆ ಹೇಳೋದು ....ಮಾಲಿ ಹತ್ರ ಹೇಳಿ ಮಳೆಗಾಲಕ್ಕೆ ಮುಂಚೆ ಅಮೃತಬಳ್ಳಿ , ದೊಡ್ಡಿಪತ್ರೆ, ಸಸಿಗಳು ಹಾಕಿಸೋಣ. ಅದರ ಗಾಳಿ ತಾಕಿದರೆ ಮಳೆ ಗಾಲದಲ್ಲಿ ಕೀಲು ನೋವು, ಸೊಂಟ ನೋವು ಬರಲ್ಲ.'

ಇನ್ನೊಂದು ಮುಖ್ಯವಾದ ವಿಷಯ. ಕೆಳಗಡೆ ಮಳೆ ನೀರು ಸೇರೋದನ್ನ ನಿಲ್ಲಿಸಬೇಕು.'

'ಹೌದೆ. ನೀರು ಹರ್ಕೊಂಡು ಹೋಗ್ಬೇಕು ಇಲ್ದಿದ್ರೆ ನಮಗೆ ಆರ್ಥ್ರೈಟಿಸ್ ಇಲ್ಲ ನ್ಯೂಮೋನಿಯ ಖಂಡಿತ ಬರುತ್ತೆ.'

'ನಮ್ಮ ಟ್ರೀ ಅಸೋಸಿಯೇಷನ್ ಪ್ರೆಸಿಡೆಂಟ್ ಆಲದ ಮರ ಅವ್ರು ನಗರಪಾಲಿಕೆಗೆ ಇಮೇಲ್ ಕಳಿಸಿದರಂತೆ'.

'ಪಾಲಿಕೆ ಅವ್ರು ಏನು ಮಾಡ್ತಾರೋ ನಂಗಂತೂ ನಂಬಿಕೆ ಇಲ್ಲ. ನಮ್ಮ ಪುಟ್ಟ ಸಸಿ ಗಳಿಗೆ ಮಳೆ ಬಂದಾಗ ಪ್ರೊಟೆಕ್ಷನ್ ಬೇಕು. ಅವುಗಳು ನಡುಗ್ತ ನಿಂತಿರುತ್ವೇ. ಮೇಲೆ ಪ್ಲಾಸ್ಟಿಕ್ಕೋ ಇಲ್ಲ ಟಾರ್ಪಲಿನ್ ಹಾಕಿ ಕವರ್ ಮಾಡಬೇಕು. ಪಾತಿಗಳಿಗೆ ನೀರು ಹರಿದು ಹೋಗುವ ಹಾಗೆ ಮಾಡಬೇಕು. ಬಹಳ ಕೆಲಸ ಕಣೆ ಅರಳೀ !'

'ಹೌದು ಮತ್ತೆ! ಇದೆಲ್ಲಾ ನಾವೆ ಮಾಡ್ಬೇಕೆ ಹೊಂಗೆ, ಬೇರೆ ಯಾರಿದಾರೆ ನಮ್ಮನ್ನು ಬಿಟ್ಟು !'

'ಅದು ನಿಜ. ಸರಿಯಾಗಿ ಹೇಳಿದ್ಯೆ ಅರಳಿ.' ■